ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 13 ಮಂಗಳವಾರ 2022

ಸಂಪುಟ: 43 | ಸಂಚಿಕೆ: 148 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಜೆಡಿಎಸ್ ಚುನಾವಣಾ ಸೂತ್ರಧಾರ ಪ್ರಶಾಂತ್ ಕಿಶೋರ್!

● ತೆಲಂಗಾಣ ಸಿಎಂ ಚಂದ್ರಶೇಖರರಾವ್ ಸಲಹೆಯಂತೆ ಮಾಜಿ ಸಿಎಂ ಕುಮಾರಸ್ವಾಮಿ ಸಮ್ಮತಿ ● ಹೈದರಾಬಾದ್‌ನಲ್ಲಿ ಸುದೀರ್ಘ ಮಾತುಕತೆ ನಂತರ ನಿರ್ಧಾರ ● ಚುನಾವಣೆ ವೇಳೆ ಜೆಡಿಎಸ್‌ಗೆ ಎಲ್ಲಾ ಸಹಕಾರ ನೀಡುವುದಾಗಿ ಚಂದ್ರಶೇಖರರಾವ್ ಭರವಸೆ

ಬೆಂಗಳೂರು, ಸೆ. 12(ಕೆಎಂಶಿ)–ಚುನಾವಣಾ ಮಾಂತ್ರಿಕ ಪ್ರಶಾಂತ್‌ಕಿಶೋರ್ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪರವಾಗಿ ಕೆಲಸ ಮಾಡಲಿದ್ದಾರೆ.

2023ರಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ತನ್ನ ಸ್ವಂತ ಶಕ್ತಿ ಮೇಲೆ ಅಧಿಕಾರಕ್ಕೆ ಬರಲು ಪರಿಶ್ರಮಪಡುತ್ತಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿಗೆ ಚುನಾವಣಾ ತಂತ್ರಗಾರಿಕೆಯಲ್ಲಿ ಪ್ರಶಾಂತ್ ಕಿಶೋರ್ ಕೈಜೋಡಿಸಲಿದ್ದಾರೆ. ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್, ಕರ್ನಾಟಕದಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂಬ ಮಹದಾಸೆಯಿಂದ ಪ್ರಶಾಂತ್ ಕಿಶೋರ್ ಅವರನ್ನು ಆ ಪಕ್ಷದ ಪರವಾಗಿ ಕೆಲಸ ಮಾಡುವಂತೆ ಸೂಚಿಸಿದ್ದಾರೆ. ನಿನ್ನೆ ಹೈದರಾಬಾದ್‌ನಲ್ಲಿ ಕುಮಾರಸ್ವಾಮಿ ಅವರು ಚಂದ್ರಶೇಖರ್‌ರಾವ್ ಅವರನ್ನು ಭೇಟಿ ಮಾಡಿ, ಸುಮಾರು ಮೂರು ತಾಸುಗಳ ಕಾಲ ಪ್ರಸಕ್ತ ರಾಜಕೀಯದ ಬಗ್ಗೆ ಚರ್ಚೆ ಮಾಡಿದ ಸಂದರ್ಭದಲ್ಲಿ ಚುನಾವಣಾ ಮಾಂತ್ರಿಕನಿಗೆ ಉಸ್ತುವಾರಿ ವಹಿಸಲು ತೀರ್ಮಾನ ತೆಗೆದುಕೊಂಡರೆನ್ನಲಾಗಿದೆ.



ಪ್ರಶಾಂತ್ ಕಿಶೋರ್



ಕರ್ನಾಟಕದಲ್ಲಿ ನೀವು ಸ್ವತಂತ್ರವಾಗಿ ಅಧಿಕಾರಕ್ಕೆ ಬರಬೇಕು, ನಿಮಗೆ ರಾಜಕೀಯವಾಗಿ ನಾನು ಎಲ್ಲ ರೀತಿಯ ಸಹಕಾರ ಕೊಡುತ್ತೇನೆ ಎಂಬ ಭರವಸೆಯನ್ನು ಕುಮಾರಸ್ವಾಮಿ ಅವರಿಗೆ ನೀಡಿರುವ ರಾವ್, ನೀವು ಯಾವುದೇ ರಾಷ್ಟ್ರೀಯ ಪಕ್ಷದ ಜೊತೆ ಕೈ ಜೋಡಿಸಬೇಡಿ. ರೈತರ ಪರವಾಗಿ ಹೋರಾಟ ನಡೆಸಿರುವ ಕುಟುಂಬ ಜನರ ಸೇವೆ ಮಾಡಬೇಕು. ಇದಕ್ಕೆ ಮನಪೂರಕವಾಗಿ ನಿಮ್ಮ ಜೊತೆ ಕೈಜೋಡಿಸುತ್ತೇನೆ. ಪ್ರಶಾಂತ್ ಕಿಶೋರ್ ಅವರ ಸಹಕಾರ ಪಡೆದುಕೊಳ್ಳಿ, ಸದ್ಯಕ್ಕೆ ಅವರು ▶ 8ನೇ ಪುಟಕ್ಕೆ

ಮತದಾರರಿಗೆ ಮೋಡಿ ಮಾಡಲು ಸ್ಪೆಷಲಿಸ್ಟ್‌ಗಳ ಮೊರೆ ಹೋದ ಪಕ್ಷಗಳು!

ಕರ್ನಾಟಕದಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ಈಗಾಗಲೇ ಚುನಾವಣಾ ತಂತ್ರಗಾರಿಕೆಯನ್ನು ರೂಪಿಸಲು ಎಲೆಕ್ಷನ್ ಸ್ಪೆಷಲಿಸ್ಟ್ ತಂಡಗಳನ್ನು ನೇಮಿಸಿಕೊಂಡಿದ್ದು,ಇದೀಗ ಆ ಸಾಲಿಗೆ ಜೆಡಿಎಸ್ ಕೂಡ ಸೇರ್ಪಡೆಯಾಗಲಿದೆ.

ಆಡಳಿತಾರೂಢ ಬಿಜೆಪಿ ಪರವಾಗಿ ಈಗಾಗಲೇ ಜಾರ್ವಿಸ್, ಲೀಡ್ ಟೆಕ್ ಮತ್ತು ನವೋ ಫಾರ್ನೇಷನ್ ಎಂಬ ತಂಡಗಳು ಸರ್ವೇ ಕಾರ್ಯ ನಡೆಸುತ್ತಿದ್ದು, ಪ್ರತಿದಿನದ ಬೆಳವಣಿಗೆಗಳ ಜತೆ, ಮುಂದಿನ ಚುನಾವಣೆಯಲ್ಲಿ ಪಕ್ಷ ಗೆಲ್ಲಲು ಅನುಸರಿಸಬೇಕಾದ ಮಾರ್ಗಗಳ ಕುರಿತು ಕಾಲಕಾಲಕ್ಕೆ ವರದಿ ನೀಡುತ್ತಿವೆ. ಆಯಾ ಕ್ಷೇತ್ರದ ಭೌಗೋಳಿಕ ▶ 8ನೇ ಪುಟಕ್ಕೆ

ಮಾಜಿ ಸಿಎಂ ಕುಮಾರಸ್ವಾಮಿ ಸ್ಫೋಟಕ ಮಾಹಿತಿ

ಸಾವಿರಾರು ಕೋಟಿ ಬೆಲೆಬಾಳುವ ಸರಕಾರಿ ಆಸ್ತಿ ಪರಭಾರೆ ಯತ್ನ

● ವಿಧಾನಸಭೆಯಲ್ಲಿ ದಾಖಲೆ ಸಹಿತ ಬಹಿರಂಗಪಡಿಸಲು ನಿರ್ಧಾರ ● ಜೆಡಿಎಸ್ ಶಾಸಕಾಂಗ ಪಕ್ಷದ ಸಭೆ ನಂತರ ಸ್ವತಃ ಕುಮಾರಸ್ವಾಮಿ ಘೋಷಣೆ ● 2008–09ರಲ್ಲೇ ಈ ಆಸ್ತಿ ಮೌಲ್ಯ 5 ಸಾವಿರ ಕೋಟಿ ● ಈಗ ಸರ್ಕಾರ ಸೈಲೆಂಟಾಗಿ ಪರಭಾರೆ ಮಾಡಲು ಸಿದ್ಧತೆ

ಬೆಂಗಳೂರು, ಸೆ. 12(ಕೆಎಂಶಿ)– ಸಾವಿರಾರು ಕೋಟಿ ರೂಪಾಯಿ ಬೆಲೆಬಾಳುವ ಸರಕಾರದ ಆಸ್ತಿಯನ್ನು ನುಂಗುವ ಮಹಾ ಹುನ್ನಾರದ ಬಗ್ಗೆ ಸ್ಫೋಟಕ ಮಾಹಿತಿ ನೀಡಿರುವ ಮಾಜಿ ಮುಖ್ಯಮಂತ್ರಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯ ಸರಕಾರದ ಅತೀದೊಡ್ಡ ಹಗರಣವನ್ನು ವಿಧಾನಸಭೆ ಕಲಾಪದಲ್ಲಿ ಬಯಲು ಮಾಡುವುದಾಗಿ ಘೋಷಿಸಿದ್ದಾರೆ.

ವಿಧಾನಸೌಧದಲ್ಲಿ ಇಂದು ನಡೆದ ಶಾಸಕಾಂಗ ಪಕ್ಷದ ಸಭೆಯ ನಂತರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಬಿಜೆಪಿಯವರು ಭ್ರಷ್ಟಾಚಾರದ ಬಗ್ಗೆ ದಾಖಲೆಗಳನ್ನು ಕೊಡಿ, ದಾಖಲೆಗಳನ್ನು ಕೊಡಿ ಎಂದು ಪದೇಪದೆ ನನ್ನನ್ನು ಕೆಣಕಿದ್ದಾರೆ. ಸಾವಿರಾರು ಕೋಟಿ ರೂ. ಬೆಲೆ ಬಾಳುವ ಸರಕಾರಿ ಆಸ್ತಿಯನ್ನು ಅಕ್ರಮವಾಗಿ ಪರಭಾರೆ ಮಾಡಲು ಹೊರಟ ಅತಿದೊಡ್ಡ ಅಕ್ರಮದ ಬಗ್ಗೆ



ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿಗಳು ಹೇಳಿದರು. ಸದನದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಕಾಂಗ್ರೆಸ್ ಪಕ್ಷ ಸಹಕರಿಸಬೇಕು. ಈ ಸರಕಾರದ ಭ್ರಷ್ಟಾಚಾರದ ಬಗ್ಗೆ ಜನರಿಗೆ ಗೊತ್ತಾಗಬೇಕು. ನಾನು ಈ ದಾಖಲೆಗಳನ್ನು ಬಿಡುಗಡೆ ಮಾಡುತ್ತಿರುವುದು ಈ ಸರಕಾರದ ಹಗರಣಗಳ ಒಂದು ಸ್ಯಾಂಪಲ್ ▶ 8ನೇ ಪುಟಕ್ಕೆ

ಗ್ಯಾನ್‌ವಾಪಿ ಮಸೀದಿ ಪ್ರಕರಣ

ಹಿಂದೂಗಳ ಅರ್ಜಿ ಪುರಸ್ಕರಿಸಿದ ಕೋರ್ಟ್ ಮುಂದಿನ ವಿಚಾರಣೆ ಸೆ.22ಕ್ಕೆ



ವಾರಣಾಸಿ: ವಾರಣಾಸಿಯಲ್ಲಿರುವ ಗ್ಯಾನ್‌ವಾಪಿ ಮಸೀದಿಯಲ್ಲಿ ಹಿಂದೂ ದೇವತೆಗಳ ಕುರುಹುಗಳಿದ್ದು, ಅಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಬೇಕೆಂಬ ಹಿಂದೂಗಳ ಅರ್ಜಿಯನ್ನು ಜಿಲ್ಲಾ ಕೋರ್ಟ್ ಪುರಸ್ಕರಿಸಿದೆ. ಪೂಜೆ ಸಲ್ಲಿಸಲು ಅವಕಾಶ ನೀಡುವಂತೆ ಐವರು ಮಹಿಳೆಯರು ಕೋರ್ಟ್‌ಗೆ ಮನವಿ ಮಾಡಿದ್ದರು, ಅರ್ಜಿ ವಿಚಾರಣೆಗೆ ಯೋಗ್ಯವೋ ಅಲ್ಲವೋ ಎಂಬ ಬಗ್ಗೆ ಕೋರ್ಟ್ ಇಂದು ಮಹತ್ವದ ಆದೇಶ ಪ್ರಕಟಿಸಿದ್ದು, ಹಿಂದೂಗಳ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಹೇಳಿದೆ.

ಹಿಂದೂಗಳ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿದ ಮಸೀದಿ ಪರ ವಾದ ಮಂಡಿಸಿದ ವಕೀಲರಿಗೆ ಹಿನ್ನಡೆಯುಂಟಾಗಿದೆ. ವಾರಣಾಸಿ ಜಿಲ್ಲಾ ಕೋರ್ಟ್ ಸೆ.22ಕ್ಕೆ ಅರ್ಜಿ ವಿಚಾರಣೆ ನಿಗದಿಪಡಿಸಿದೆ. ಕೋರ್ಟ್ ತೀರ್ಪಿಗೂ ಮುನ್ನ ಮಾತನಾಡಿದ್ದ ಅಡ್ವೋಕೇಟ್ ವಿಷ್ಣು ಶಂಕರ್ ಜೈನ್, 1991ರ ಆರಾಧನಾ ಕಾಯಿದೆ ನಮ್ಮ ಪರವಾಗಿದೆ. ತೀರ್ಪು ನಮ್ಮ ಪ್ರಕಾರ ಬಂದರೆ, ನಾವು ಕೋರ್ಟ್‌ನಲ್ಲಿ ಎಎಸ್‌ಐ ಸರ್ವೇ, ಶಿವಲಿಂಗದ ಕಾರ್ಬಲ್ ಡೇಟಿಂಗ್‌ಗೆ ಅನುಮತಿ ಕೇಳುತ್ತೇವೆ ಎಂದು ತಿಳಿಸಿದ್ದರು.

▶ 2ನೇ ಪುಟಕ್ಕೆ

ಲೋನ್ ಆ್ಯಪ್‌ನಲ್ಲಿ ಕ್ಷಣ ಮಾತ್ರದಲ್ಲಿ ಸಾಲ ಲಭ್ಯ: ಅಲ್ಲಿಂದಲೇ ನಿಮಗೆ ನರಕಯಾತನೆ ಶುರು

● ನಿಮ್ಮ ಮೊಬೈಲ್‌ನಿಂದಲೇ ಚಿತ್ರಹಿಂಸೆ ನೀಡ್ತಾರೆ ● ಅಶ್ಲೀಲವಾಗಿ ಬಿಂಬಿತವಾಗುವ ನಿಮ್ಮ ಭಾವಚಿತ್ರ ಎಲ್ಲೆಡೆ ಹರಿದಾಡುತ್ತೆ; ನಿಮ್ಮದು ಮಾತ್ರವಲ್ಲ ನಿಮ್ಮ ಸಂಬಂಧಿಕರು, ಸ್ನೇಹಿತರನ್ನು ಅಶ್ಲೀಲವಾಗಿ ಬಿಂಬಿಸಿ ಅದಕ್ಕೆ ನಿಮ್ಮನ್ನೇ ಹೊಣೆಗಾರರನ್ನಾಗಿಸುತ್ತಾರೆ ಹುಷಾರ್...

ಮೈಸೂರು, ಸೆ. 12– ಯಾವುದೇ ಬ್ಯಾಂಕ್‌ನಲ್ಲಿ ನೀವು ಸಾಲ ಪಡೆಯಬೇಕಾದರೆ ಭದ್ರತೆ ನೀಡಬೇಕು. ಆದಾಯ ದೃಢೀಕರಣಕ್ಕಾಗಿ ಸ್ಯಾಲರಿ ಸರ್ಟಿಫಿಕೇಟ್ ಸೇರಿದಂತೆ ಕೆಲವು ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಇದೆಲ್ಲಾ ಸಲ್ಲಿಸಿದ ನಂತರ ನಿಮಗೆ ಸಾಲ ಮಂಜೂರಾಗಲು ಕೆಲ ದಿನಗಳು ಹಿಡಿಯುತ್ತದೆ. ಆದರೆ, ಲೋನ್ ಆ್ಯಪ್‌ಗಳಲ್ಲಿ ಸಾಲ ಪಡೆಯಲು ಭದ್ರತೆಯೂ ಬೇಕಿಲ್ಲ, ಸ್ಯಾಲರಿ ಸರ್ಟಿಫಿಕೇಟ್ ಕೂಡ ಬೇಕಿಲ್ಲ. ಆ್ಯಪ್ ಇನ್ಸ್ಟಾಲ್ ಮಾಡಿಕೊಂಡು ನಿಮ್ಮ ವೈಯಕ್ತಿಕ ವಿವರಗಳುಳ್ಳ ದಾಖಲೆಗಳನ್ನು ಅಪ್‌ಲೋಡ್ ಮಾಡಿದರೆ ಕ್ಷಣಮಾತ್ರದಲ್ಲಿ ನಿಮ್ಮ ಬ್ಯಾಂಕ್ ಖಾತೆಗೆ ಸಾಲದ ಮೊತ್ತ ಜಮಾ ಆಗಿ ಬಿಡುತ್ತದೆ. ಆದರೆ, ಈ ಆ್ಯಪ್‌ಗಳ ಮೂಲಕ ಸಾಲ ಪಡೆದ ನಂತರ ನಿಮ್ಮ ಬಾಳು ನರಕವಾಗಿ ಪರಿಣಮಿಸುತ್ತದೆ.

ಇದಕ್ಕೆ ತಾಜಾ ಉದಾಹರಣೆ ಎಂದರೆ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಸಿವಿಲ್ ಇಂಜಿನಿಯರ್‌ವೊಬ್ಬರು ಪಡುತ್ತಿರುವ ನರಕಯಾತನೆ. ಅವರು ಸಲೀಸಾಗಿ ಸಾಲ ಸಿಗುತ್ತದೆ ಎಂದು ಲೋನ್ ಆ್ಯಪ್ ಮೂಲಕ 5 ಸಾವಿರ ರೂ. ಸಾಲ ಪಡೆದು 4 ತಿಂಗಳಲ್ಲಿ ಬರೋಬ್ಬರಿ 19.46 ಲಕ್ಷ ರೂ. ಪಾವತಿಸಿ



ದರೂ, ಇನ್ನೂ ಸಾಲ ತೀರಿಲ್ಲ ವಾಟ್ಸಾಪ್‌ಗೆ ಯಾವುದೇ ಸಂದೇಶ ಬಂದರೂ ಭಯಭೀತರಾಗುತ್ತಾರೆ. ಸಂಬಂಧಿಕರು ಅಥವಾ ಸ್ನೇಹಿತರು ಕರೆ ಮಾಡಿದರೆ ಬೆಚ್ಚಿ ಬೀಳುತ್ತಾರೆ. ಇದು ಲೋನ್ ಆ್ಯಪ್ ಮೂಲಕ ಸಾಲ ಪಡೆದಿದ್ದರ ಪರಿಣಾಮ. 4 ತಿಂಗಳ ಕಾಲ ನರಕಯಾತನೆ ಅನುಭವಿಸಿದ ಅವರು, ಇದೀಗ ಮಂಡ್ಯ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ವಿವರ: ಸಿವಿಲ್ ಇಂಜಿನಿಯರ್‌ವೊಬ್ಬರು ಲೋನ್ ಆ್ಯಪ್ ಮೂಲಕ ಕ್ಷಣಮಾತ್ರದಲ್ಲಿ ಸಾಲ ಪಡೆಯಬಹುದು ಎಂಬ ಕಾರಣದಿಂದ ಕಳೆದ ಜ. 15ರಂದು ತಮ್ಮ ಮೊಬೈಲ್‌ಗೆ Rupee Way ಲೋನ್ ಆ್ಯಪ್‌ನ್ನು ಇನ್ಸ್ಟಾಲ್ ಮಾಡಿಕೊಂಡಾಗ, ಪಡೆದ ಸಾಲವನ್ನು 180 ಕಂತುಗಳಲ್ಲಿ ತೀರಿಸಬೇಕು ಎಂಬ ಷರತ್ತು ಕಂಡುಬಂತು. ನಂತರ ಇವರು ಆಧಾರ್, ಪಾನ್ ಕಾರ್ಡ್, ಫೋಟೋ ಹಾಗೂ ಇನ್ನಿತರ ಅವರ ವೈಯಕ್ತಿಕ ಮಾಹಿತಿಗಳನ್ನು ಅಪ್‌ಲೋಡ್ ಮಾಡಿದಾಗ Approval ಮೆಸೇಜ್ ಬಂದ ತಕ್ಷಣ ಅವರ ಖಾತೆಗೆ ಸಾಲದ ಹಣ ಜಮೆ ಆಗಿದೆ. ಆದರೆ, 7 ದಿನಗಳಲ್ಲಿ ಸಾಲ ತೀರಿಸಬೇಕು ಎಂಬ ಷರತ್ತು ವಿಧಿಸಲಾಗಿತ್ತು. ಹೀಗಾಗಿ ಅವರು ಎರಡೇ ದಿನದಲ್ಲಿ ಅಂದರೆ ಜನವರಿ 17ರಂದು ಆ್ಯಪ್ ತೋರಿಸಿದ ಲಿಂಕ್ ಮೂಲಕ 5400 ರೂ.ಗಳನ್ನು ವರ್ಗಾವಣೆ ಮಾಡಿ, ▶ 8ನೇ ಪುಟಕ್ಕೆ

ಸೆ.20ರಿಂದ ಸಿಂಹಾಸನ ಜೋಡಣೆ

● ಗೆಜ್ಜಗಳ್ಳಿ ಗ್ರಾಮಸ್ಥರಿಂದ ನಾಜೂಕಿನ ಜೋಡಣಾ ಕಾರ್ಯ ● ಸೆ.26ರಿಂದ ಮೈಸೂರು ರಾಜಪರಂಪರೆಯ ಖಾಸಗಿ ದರ್ಬಾರ್



ಮೈಸೂರು, ಸೆ.12(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ ಆಕರ್ಷಣೆಯಲ್ಲೊಂದಾದ ಖಾಸಗಿ ದರ್ಬಾರ್‌ಗೆ ರತ್ನಖಚಿತ ಸ್ವರ್ಣ ಸಿಂಹಾಸನವನ್ನು ಜೋಡಿಸುವ ಕಾರ್ಯ ಸೆ.20ಕ್ಕೆ ಆರಂಭವಾಗಲಿದೆ.

ನವರಾತ್ರಿ ವೇಳೆ ರಾಜವಂಶಸ್ಥರು ನಡೆಸುವ ಖಾಸಗಿ ದರ್ಬಾರ್‌ನ ಸಿಂಹಾಸನಾರೋಹಣಕ್ಕೆ ಬಳಸುವ ರತ್ನಖಚಿತ ಸ್ವರ್ಣ ಸಿಂಹಾಸನವನ್ನು ಜಿಲ್ಲಾಡಳಿತ ಅಧಿಕಾರಿಗಳು ಹಾಗೂ ರಾಜವಂಶಸ್ಥರ ಸಮ್ಮುಖದಲ್ಲಿ ಅರಮನೆ ನೆಲಮಾಳಿಗೆಯಲ್ಲಿನ ಭದ್ರತಾ ▶ 2ನೇ ಪುಟಕ್ಕೆ

ದಸರಾದಲ್ಲಿ ಹಳ್ಳಿಗರಿಗೂ ಯೋಗಾ ಯೋಗ!

ಪ್ರಧಾನಿ ಮೋದಿ ನೇತೃತ್ವದ ಯೋಗ ಪ್ರದರ್ಶನದ ಸುಯೋಗ



ಮೈಸೂರು, ಸೆ.12(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿನ ಪ್ರಮುಖ ಆಕರ್ಷಣೆಯಾದ 'ಯೋಗ ದಸರಾ' ಸಂಭ್ರಮ ಈ ಬಾರಿ ಗ್ರಾಮೀಣ ಭಾಗಕ್ಕೂ ವಿಸ್ತರಣೆಯಾಗಲಿದೆ. ಮೈಸೂರು ಅರಮನೆ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನಡೆದ ವಿಶ್ವ ಯೋಗ ದಿನಾಚರಣೆ ಬಳಿಕ ಯೋಗಾಸಕ್ತರ ಸಂಖ್ಯೆ ಹೆಚ್ಚಾಗಿದ್ದು, ಯೋಗ ದಸರಾ ಆಚರಣೆ ಮೂಲಕ ನಗರದಿಂದ ಗ್ರಾಮೀಣ ಭಾಗದ ಜನರಿಗೂ ಯೋಗಾಸನದ ಮಹತ್ವ ಹಾಗೂ ಅದರ ಉಪಯುಕ್ತತೆ ಕುರಿತು ಅರಿವು ಮೂಡಿಸಲು ತೀರ್ಮಾನಿಸಲಾಗಿದೆ. ನಗರ ಪ್ರದೇಶಕ್ಕೇ ಸೀಮಿತವಾಗಿದ್ದ ಯೋಗ ದಸರಾ ಆಚರಣೆ ಈ ವರ್ಷ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ. ಈ ಮೂಲಕ ನಂಜನಗೂಡು ಹಾಗೂ ಸುತ್ತಮುತ್ತಲಿನಲ್ಲಿರುವ ಗ್ರಾಮಸ್ಥರು ಯೋಗ ದಸರಾ ಸಂಭ್ರಮದಲ್ಲಿ ಭಾಗಿಯಾಗಲಿದ್ದಾರೆ. ಮೊದಲ ಬಾರಿಗೆ ಗ್ರಾಮೀಣ ಪ್ರದೇಶದ ಜನರು ಯೋಗ ದಸರಾದಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಯೋಗ ದಸರಾ ಉಪಸಮಿತಿ ವಿಶೇಷಾಧಿಕಾರಿಯೂ ಆದ ಭೂ ದಾಖಲೆಗಳ ಇಲಾಖೆ ▶ 2ನೇ ಪುಟಕ್ಕೆ

> **“ನಗರದ ವಿವಿಧ ಯೋಗ ಶಿಕ್ಷಣ ಕೇಂದ್ರಗಳ ಸಹಕಾರದೊಂದಿಗೆ ಈ ವರ್ಷ ಯಶಸ್ವಿಯಾಗಿ ಯೋಗ ದಸರಾ ಆಯೋಜಿಸಲು ಎಲ್ಲಾ ಬಗೆಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಕಾರ್ಯಕ್ರಮಗಳ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ. ನಂಜನಗೂಡಿನಲ್ಲಿ ಆಯೋಜಿಸುವ ಗ್ರಾಮೀಣ ಯೋಗ ದಸರಾ ಈ ವರ್ಷದ ವಿಶೇಷವಾಗಿದ್ದು, ಯೋಗ ದಸರಾಕ್ಕೆ ಇನ್ನಷ್ಟು ಮೆರಗು ತರುವ ನಿರೀಕ್ಷೆ ಇದೆ.**
> – ಸೀಮಂತಿನಿ, ವಿಶೇಷಾಧಿಕಾರಿ, ಯೋಗ ದಸರಾ ಉಪಸಮಿತಿ

ಚಾಮುಂಡೇಶ್ವರಿ ದೇವಸ್ಥಾನಕ್ಕೆ ದೇವಿಯ ಉತ್ಸವ ಮೂರ್ತಿ ಸ್ಥಳಾಂತರ




ಮೈಸೂರು, ಸೆ.12(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಅರಮನೆಯಲ್ಲಿದ್ದ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಚಾಮುಂಡಿಬೆಟ್ಟದ ದೇವಾಲಯಕ್ಕೆ ಸೋಮವಾರ ತರಲಾಯಿತು. ಅರಮನೆ ಆವರಣದಲ್ಲಿದ್ದ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಅವರು ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯದ ಇಓ ಗೋವಿಂದರಾಜು ಅವರಿಗೆ ಹಸ್ತಾಂತರ ಮಾಡಿದರು. ಈ ವೇಳೆ ಮುಜರಾಯಿ ತಹಸೀಲ್ದಾರ್ ಕೃಷ್ಣ, ಅರಮನೆ ಎಇಇ ಸತೀಶ್ ಮತ್ತಿತರರಿದ್ದರು. ನಾಡದೇವಿ ಚಾಮುಂಡೇಶ್ವರಿ ▶ 2ನೇ ಪುಟಕ್ಕೆ

ದಸರಾ ಗಜಪಡೆ, ಕುದುರೆಗಳಿಗೆ ಮೊದಲ ಸಿಡಿಮದ್ದು ತಾಲೀಮು

ಕೆಲ ಆನೆಗಳು ಕೊಂಚ ಬೆಚ್ಚಿದರೆ; ಉಳಿದಂತೆ ಯಶಸ್ವಿ ಪ್ರಯೋಗ

ಮೈಸೂರು,ಸೆ.12(ಎಂಟಿವೈ)– ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಗಜಪಡೆಯ 14 ಆನೆ ಹಾಗೂ ಅಶ್ವಾರೋಹಿ ಪಡೆಯ 44 ಕುದುರೆಗಳಿಗೆ ಸೋಮವಾರ ಮೊದಲ ಸಿಡಿಮದ್ದು ತಾಲೀಮು ಯಶಸ್ವಿಯಾಗಿ ನಡೆಯಿತು. ಮೈಸೂರು ಅರಮನೆಯ ವರಹಾ ದ್ವಾರದ ಬಳಿಯ ಪಾರ್ಕಿಂಗ್ ಸ್ಥಳದಲ್ಲಿ ಇಂದು ಮಧ್ಯಾಹ್ನ ಈ ವರ್ಷದ ಮೊದಲ ಸಿಡಿಮದ್ದು ತಾಲೀಮು ನಡೆಸಲಾಯಿತು. ನಗರ ಸಶಸ್ತ್ರ ಮೀಸಲು ಪಡೆಯ 38 ಸಿಬ್ಬಂದಿ ತಂಡ 7 ಫಿರಂಗಿ ಬಳಸಿ, ಮೂರು ಹಂತದಲ್ಲಿ 21 ಸುತ್ತು ಕುಶಾಲ ತೋಪು ಸಿಡಿಸಿದರು. ಈ ವೇಳೆ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಎಫ್ ಡಾ.ವಿ.ಕರಿಕಾಳನ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ, ಸಿಎಆರ್ ಡಿಸಿಪಿ ಶಿವರಾಜ್ ಉಪಸ್ಥಿತರಿದ್ದು, ದಸರಾ ಗಜಪಡೆ ಹಾಗೂ ಅಶ್ವಾರೋಹಿ ದಳದ ಕುದುರೆಗಳ ವರ್ತನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು.

ಇಂದು ನಡೆದ ಮೊದಲ ತಾಲೀಮಿನಲ್ಲಿ ಮೂರು ಹಂತದಲ್ಲಿ ತಲಾ 7 ಸಿಡಿಮದ್ದು ಸಿಡಿಸಲಾಯಿತು. ಒಂದೇ ಬಾರಿ 21 ಸುತ್ತು ಸಿಡಿಸಿದರೆ ಆನೆ, ಕುದುರೆಗಳು ಬೆದರಬಹುದು ಎಂಬ ಉದ್ದೇಶದಿಂದ ಒಂದರಿಂದ ಮತ್ತೊಂದಕ್ಕೆ 3–4 ನಿಮಿಷ ಬಿಟ್ಟು ಸಿಡಿಸಲಾಯಿತು. ಈ ವೇಳೆ ಹೊಸ ಆನೆಗಳಾದ ಪಾರ್ಥಸಾರಥಿ, ಶ್ರೀರಾಮ, ಸುಗ್ರೀವ, ಭೀಮ, ಧನಂಜಯ ಆನೆಗಳು ಬೆಚ್ಚಿ ಘೀಳಿಟ್ಟವು.



ಬೆದರಿದ ಸುಗ್ರೀವ, ಪಾರ್ಥಸಾರಥಿ: ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಭಾಗವಹಿಸಲಿರುವ ಶ್ರೀರಾಮ, ಸುಗ್ರೀವ ಅತೀ ಚಿಕ್ಕ ವಯಸ್ಸಿನ ಪಾರ್ಥಸಾರಥಿ ಮತ್ತು ಎರಡನೇ ಬಾರಿಗೆ ದಸರಾ ಉತ್ಸವದಲ್ಲಿ ಪಾಲ್ಗೊಳ್ಳಲಿರುವ ಭೀಮ, ಧನಂಜಯ, ಲಕ್ಷ್ಮೀ ಭಾರೀ ಶಬ್ದಕ್ಕೆ ಬೆದರಿ, ಘೀಳಿಟ್ಟವು. ಮುಂಜಾಗ್ರತಾ ಕ್ರಮವಾಗಿ ವಿಜಯ, ಶ್ರೀರಾಮ, ಸುಗ್ರೀವ ಕಾಲಿಗೆ ಸರಪಳಿ ಕಟ್ಟಿ ಪ್ರತ್ಯೇಕವಾಗಿ ನಿಲ್ಲಿಸಲಾಗಿತ್ತು. ಮೊದಲ ಸುತ್ತು ಸಿಡಿಸುತ್ತಿದ್ದಂತೆ, ಬೆಚ್ಚಿ, ಅತ್ತಿಂದಿತ್ತ ಹೆಜ್ಜೆ ಹಾಕಿದವು. ಈ ವೇಳೆ ಮಾವುತರು ನಿಯಂತ್ರಿಸಿದರು. ಕಳೆದ ಎರಡು ವರ್ಷಗಳಿಂದ ಭಾಗವಹಿಸುತ್ತಿರುವ ಧನಂಜಯ ಈ ಬಾರಿಯೂ ಬೆದರಿದ.

ಜಗ್ಗದ ಅಭಿಮನ್ಯು, ಅರ್ಜುನ: ಸಿಡಿಮದ್ದು ತಾಲೀಮಿನಲ್ಲಿ ಗಜಪಡೆಯ ಕ್ಯಾಪ್ಟನ್ ಅಭಿಮನ್ಯು ಮತ್ತು ಮಾಜಿ ಕ್ಯಾಪ್ಟನ್ ಅರ್ಜುನ ಜಗ್ಗಲಿಲ್ಲ. ಜಂಬೂಸವಾರಿ ವೇಳೆ ಸಿಡಿಮದ್ದು ಸಿಡಿಸುತ್ತಿದ್ದಂತೆ ಅಂಬಾರಿ ಹೊತ್ತು ಮುಂದಡಿಯಿಡುವಂತೆ ತಾಲೀಮಿನಲ್ಲೂ ಕುಶಾಲತೋಪು ಸಿಡಿಸಿದ ಬಳಿಕ ಅಭಿಮನ್ಯು ಹಾಗೂ ಅರ್ಜುನ ಫಿರಂಗಿಗಳತ್ತ ಹೆಜ್ಜೆ ಹಾಕಿದವು. ಇದೇ ಮೊದಲ ಬಾರಿ ಜಂಬೂಸವಾರಿಯಲ್ಲಿ ಭಾಗವಹಿಸಲಿರುವ ಮಹೇಂದ್ರ ಬೆಚ್ಚದೆ ಗಮನ ಸೆಳೆದ. ತಾಲೀಮಿನಲ್ಲಿ ಅಂಬಾರಿ ಆನೆ ಅಭಿಮನ್ಯು, ಅರ್ಜುನನೊಂದಿಗೆ ಗೋಪಾಲಸ್ವಾಮಿ, ಧನಂಜಯ, ಗೋಪಿ, ಮಹೇಂದ್ರ, ಭೀಮ, ಸುಗ್ರೀವ, ಶ್ರೀರಾಮ, ಪಾರ್ಥಸಾರಥಿ ಹಾಗೂ ಕುಮ್ಕಿ ಆನೆಗಳಾದ ಕಾವೇರಿ, ಚೈತ್ರ, ಲಕ್ಷ್ಮೀ ಹಾಗೂ ವಿಜಯ ಆನೆಗಳು ಪಾಲ್ಗೊಂಡಿದ್ದವು.

ಬೆದರಿದ ಕುದುರೆ : ಸಿಡಿಮದ್ದು ತಾಲೀಮಿನ ವೇಳೆ ಒಂದೆಡೆ ಆನೆ ▶ 2ನೇ ಪುಟಕ್ಕೆ

> **“ವಿಜಯದಶಮಿಯಂದು ಜಂಬೂಸವಾರಿಗೆ ಮುನ್ನ ಕುಶಾಲತೋಪು ಸಿಡಿಸುವ ಸಂಪ್ರದಾಯವಿದ್ದು, ಗಜಪಡೆ, ಅಶ್ವಪಡೆಗೆ ಭಾರೀ ಶಬ್ದದ ಪರಿಚಯ ಮಾಡಿಸಲು ಮೊದಲ ಹಂತದ ಸಿಡಿಮದ್ದು ತಾಲೀಮನ್ನು ಯಶಸ್ವಿಯಾಗಿ ನಡೆಸಲಾಗಿದೆ. ಪ್ರತಿವರ್ಷವೂ ಮೂರು ಬಾರಿ ಸಿಡಿಮದ್ದು ತಾಲೀಮು ನಡೆಸಲಾಗುತ್ತದೆ. ಈ ಬಾರಿಯೂ ಮೂರು ಬಾರಿ ತಾಲೀಮು ನಡೆಸಲಾಗುವುದು. ಸಿಡಿಮದ್ದಿನ ಶಬ್ದಕ್ಕೆ ಆನೆ, ಕುದುರೆಗಳು ಹೊಂದಿಕೊಳ್ಳುವ ತರಬೇತಿ ನೀಡಲು ಇದು ಸಹಕಾರಿ.**
> –ಡಾ.ಚಂದ್ರಗುಪ್ತ, ನಗರ ಪೊಲೀಸ್ ಆಯುಕ್ತ.

200 ದಿನಗಳ ಯುದ್ಧ: ರಷ್ಯಾ ವಿರುದ್ಧ ಮತ್ತೆ ತಿರುಗಿಬಿದ್ದ ಉಕ್ರೇನ್

ಉಕ್ರೇನ್: ರಷ್ಯಾ-ಉಕ್ರೇನ್ ಯುದ್ಧ 200 ದಿನ ಕಳೆದರೂ ಮುಂದುವರೆದಿದ್ದು, ಉಕ್ರೇನ್ ಪ್ರಬಲ ಪ್ರತಿದಾಳಿಗೆ ಮುಂದಾಗಿದೆ. ದೀರ್ಘಾವಧಿಯಿಂದ ನಿರೀಕ್ಷೆಯಲ್ಲಿದ್ದ ಪ್ರತಿ ದಾಳಿಯಲ್ಲಿ ಉಕ್ರೇನ್ ದಕ್ಷಿಣ ಮತ್ತು ಪೂರ್ವದ ವಿಶಾಲ ಪ್ರದೇಶಗಳನ್ನು ಮತ್ತೆ ಹಿಡಿತಕ್ಕೆ ತೆಗೆದುಕೊಂಡಿದ್ದು, ರಷ್ಯಾ ತೀವ್ರ ಹಿನ್ನೆಡೆ ಎದುರಿಸಿದೆ. ಆಗಸ್ಟ್‌ನ ತಿಂಗಳಾಂತ್ಯಕ್ಕೆ ಪ್ರತಿದಾಳಿಯನ್ನು ಉಕ್ರೇನ್ ಪ್ರಾರಂಭಿಸಿದ್ದು, ಖೆರ್ಸನ್ ಪ್ರದೇಶದ ದಕ್ಷಿಣ ಪ್ರಾಂತ್ಯದಲ್ಲಿ ಉಕ್ರೇನ್ ತನ್ನ ಪ್ರತಿದಾಳಿಯನ್ನು ಕೇಂದ್ರೀಕರಿಸಿದೆ. ಈ ಪ್ರದೇಶದಲ್ಲಿ ಯುದ್ಧದ ಪ್ರಾರಂಭದಲ್ಲಿ ರಷ್ಯಾ ಹಿಡಿತ ಸಾಧಿಸಿತ್ತು. ದಕ್ಷಿಣ ಪ್ರದೇಶಕ್ಕೆ ರಷ್ಯಾ ಸೇನೆಯ ಸ್ಥಳಾಂತರವನ್ನೇ ಬಂಡವಾಳವಾಗಿಸಿಕೊಂಡ ಉಕ್ರೇನ್ ಸೇನೆ ಯುದ್ಧದ ಹಾದಿಯನ್ನು ಬದಲಿಸತೊಡಗಿದೆ.

ಒಂದನೇ ಪುಟದಿಂದ

ಸೆ.20ರಿಂದ ಸಿಂಹಾಸನ ಜೋಡಣೆ

ಕೊಠಡಿಯಿಂದ ಹೊರತೆಗೆಯಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂದು ಬೆಳಗ್ಗೆ 7ರಿಂದ ಮಧ್ಯಾಹ್ನ 1 ಗಂಟೆವರೆಗೆ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಅರಮನೆಯೊಳಗೆ ಪ್ರವೇಶ ನಿರ್ಬಂಧಿಸಲಾಗುವುದು. ಭದ್ರತಾ ಕೊಠಡಿಯಿಂದ ರತ್ನಖಚಿತ ಸಿಂಹಾಸನದ ಭಾಗಗಳನ್ನು ಹೊರತೆಗೆದು, ನವಗ್ರಹ ಹೋಮ ಇನ್ನಿತರ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ನಂತರ ಅಂಬಾವಿಲಾಸ ಅರಮನೆಯಲ್ಲಿ ಸಿಂಹಾಸನ ಜೋಡಣಾ ಕಾರ್ಯ ಆರಂಭವಾಗಲಿದೆ. ಆ ಸಂದರ್ಭಕ್ಕೆ ಅರಮನೆ ಪಟ್ಟದ ಆನೆ, ಹಸು, ಕುದುರೆಗಳು ಸಾಕ್ಷಿಯಾಗಲಿವೆ.

ಗೆಜ್ಜಗಳ್ಳಿ ಗ್ರಾಮಸ್ಥರಿಂದ ಜೋಡಣೆ: ರಾಜವಂಶಸ್ಥರು ಆಸೀನರಾಗುವ ಭಾಗ(ಆಸನ), ಸಿಂಹಾಸನವೇರಲು ಬಳಸುವ ಮೆಟ್ಟಿಲು, ಮೆರಗು ನೀಡುವ ಛತ್ರಿ, ಹೀಗೆ ಪ್ರಮುಖವಾಗಿ 13 ಭಾಗಗಳನ್ನಾಗಿ ವಿಂಗಡಿಸಿಟ್ಟಿರುವ ಭಾಗಗಳನ್ನು ನಾಜೂಕಿನಿಂದ ಜೋಡಿಸಲಾಗುತ್ತದೆ. ಇದನ್ನು 'ಸ್ವರ್ಣಾಸನ ಜೋಡಣಾ ಕಾರ್ಯ' ಎಂದು ಕರೆಯಲಾಗುತ್ತದೆ. ಈ ಸೂಕ್ಷ್ಮ ಕಾರ್ಯವನ್ನು ಮೈಸೂರು ತಾಲೂಕು ಗೆಜ್ಜಗಳ್ಳಿ ಗ್ರಾಮಸ್ಥರು ನಿರ್ವಹಿಸಲಿದ್ದಾರೆ. ನವರಾತ್ರಿ ಮೊದಲ ದಿನ ರಾಜವಂಶಸ್ಥರು ಸಿಂಹಾಸನಕ್ಕೆ ಪೂಜೆ ಸಲ್ಲಿಸಿ, ಸಿಂಹದ ಆಕೃತಿಯನ್ನು ಜೋಡಿಸಿದ ನಂತರವಷ್ಟೇ ಪರಿಪೂರ್ಣ ಸಿಂಹಾಸನವಾಗಲಿದೆ. ಸಿಂಹಾಸನ ದಕ್ಷಿಣದಲ್ಲಿ ಬ್ರಹ್ಮ, ಉತ್ತರದಲ್ಲಿ ಶಿವ, ಮಧ್ಯಭಾಗದಲ್ಲಿ ವಿಷ್ಣು ದೇವರ ಚಿತ್ರಗಳಿವೆ. ನಾಲ್ಕು ಸಿಂಹಗಳಿರುವುದು ಸಿಂಹಾಸನದ ಶೋಭೆ ಹೆಚ್ಚಿಸಿದೆ. ಸಿಂಹಾಸನ ಕಲಶದಂತಿರುವ ಛತ್ರಿಯ ಮೇಲೆ ಸಂಸ್ಕೃತದ ಶ್ಲೋಕಗಳಿವೆ. ಕುದುರೆ, ಹಂಸ, ಸ್ವಸ್ತಿಕ್, ನಾಗದೇವತೆಯನ್ನು ಚಿತ್ರಿಸಲಾಗಿದೆ.

ಸೆ.26ರಿಂದ ಖಾಸಗಿ ದರ್ಬಾರ್: ನವರಾತ್ರಿ ಸಂದರ್ಭದಲ್ಲಿ ರಾಜ ವಂಶಸ್ಥರು ರತ್ನಖಚಿತ ಸ್ವರ್ಣ ಸಿಂಹಾಸನಾರೂಢರಾಗಿ ಖಾಸಗಿ ದರ್ಬಾರ್ ನಡೆಸುವುದು ಶತಮಾನಗಳಿಂದ ನಡೆದುಬಂದಿರುವ ಸಂಪ್ರದಾಯವಾಗಿದೆ. ಅದರಂತೆ ಈ ಬಾರಿ ಸೆ.26ರಂದು ದಸರಾ ಮಹೋತ್ಸವಕ್ಕೆ ಚಾಲನೆ ದೊರಕುವುದರ ಜೊತೆಗೆ ಖಾಸಗಿ ದರ್ಬಾರ್ ಕೂಡ ಆರಂಭವಾಗಲಿದೆ. ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅರಮನೆ ದರ್ಬಾರ್ ಹಾಲ್‌ನಲ್ಲಿ ರತ್ನಖಚಿತ ಸಿಂಹಾಸನಕ್ಕೆ ಸಿಂಹದ ಆಕೃತಿಯನ್ನು ಜೋಡಿಸಿ, ಪೂಜೆ ಸಲ್ಲಿಸಿದ ಬಳಿಕ ಸಿಂಹಾಸನಾರೂಢರಾಗುವ ಮೂಲಕ ಖಾಸಗಿ ದರ್ಬಾರ್ ಚಾಲನೆ ಪಡೆಯಲಿದೆ. ಅಂದು ಬೆಳಗ್ಗೆಯಿಂದಲೇ ಅರಮನೆ ಪುರೋಹಿತರ ನೇತೃತ್ವದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿದ್ದು, ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಸೇರಿದಂತೆ ಕುಟುಂಬದ ಸದಸ್ಯರೆಲ್ಲರೂ ಭಾಗಿಯಾಗಲಿದ್ದಾರೆ.

ಅರಮನೆಯ ಚಾಮುಂಡಿತೊಟ್ಟಿಯಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಕಂಕಣ ಧಾರಣೆ, ಸವಾರಿ ತೊಟ್ಟಿಯಿಂದ ಅವರನ್ನು ದರ್ಬಾರ್ ಹಾಲ್‌ಗೆ ಬಿರುದು ಬಾವಲಿ, ಬಹುಪರಾಕ್‌ನೊಂದಿಗೆ ಕರೆತರುವುದು, ಸಿಂಹಾಸನದ ಬಳಿ ಕಳಸ ಪೂಜೆ, ಪ್ರದಕ್ಷಿಣೆ ಹೀಗೆ ಹಲವು ವಿಧಿವಿಧಾನಗಳ ಬಳಿಕ ನಿಗದಿತ ಶುಭ ಘಳಿಗೆಯಲ್ಲಿ ರತ್ನಖಚಿತ ಸಿಂಹಾಸನದಲ್ಲಿ ಯದುವೀರ್ ಅವರು ವೀರಾಜಮಾನರಾಗಲಿ ದ್ದಾರೆ. ಆ ವೇಳೆ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ, ಪರಕಾಲ ಮಠ, ಶ್ರೀರಂಗಪಟ್ಟಣದ ಶ್ರೀರಂಗನಾಥೇಶ್ವರ ದೇವಾಲಯ, ಮೇಲುಕೋಟೆ ಶ್ರೀ ಚೆಲುವನಾರಾಯಣ ಸ್ವಾಮಿ ದೇವಾಲಯ, ನಂಜನಗೂಡು ಶ್ರೀ ಶ್ರೀಕಂಠೇಶ್ವರ ದೇವಾಲಯ, ಉತ್ತನಹಳ್ಳಿಯ ತ್ರಿಪುರಸುಂದರಿ ಜ್ವಾಲಾಮುಖಿ ದೇವಾಲಯ ಹಾಗೂ ಅರಮನೆಯ ಆವರಣದಲ್ಲಿರುವ ಎಲ್ಲಾ ದೇವಾಲಯಗಳ ಪ್ರಸಾದವನ್ನು ಒಡೆಯರ್‌ಗೆ ನೀಡಿ, ತೀರ್ಥ ಪ್ರೋಕ್ಷಣೆ ಮಾಡುವ ಪದ್ಧತಿ ಇದೆ. ಖಾಸಗಿ ದರ್ಬಾರ್ ಹಿನ್ನೆಲೆಯಲ್ಲಿ ಸೆ.26ರಂದು ಮಧ್ಯಾಹ್ನ 2 ಗಂಟೆವರೆಗೂ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಅರಮನೆಯೊಳಗೆ ಪ್ರವೇಶ ನಿರ್ಬಂಧಿಸಲಾಗುತ್ತದೆ.

ಮೊದಲ ಸಿಡಿಮದ್ದು ತಾಲೀಮು

ಮತ್ತೊಂದೆಡೆ ಅಶ್ವದಳ ಕುದುರೆಗಳ ನಿಲ್ಲಿಸಲಾಗಿತ್ತು. ಈ ವೇಳೆ ಅಶ್ವದಳದ ಕುದುರೆಯೊಂದು ಗಾಬರಿಯಿಂದ ಆನೆಗಳತ್ತ ಸಾಗಿತು. ಇದರಿಂದ ವಿಚಲಿತಗೊಂಡು ಆನೆಗಳು ಘೀಳಿಟ್ಟವು. ಕೆಲಕ್ಷಣ ಆತಂಕದ ವಾತಾವರಣ ಸೃಷ್ಟಿಯಾಯಿತು. ಆದರೆ ಮಾವುತರು, ಕಾವಾಡಿಗಳು ಆನೆಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದರು. ಇತ್ತ ಅಶ್ವದಳ ಸಿಬ್ಬಂದಿಯೂ ಕುದುರೆಯನ್ನು ನಿಯಂತ್ರಿಸಿ ಬೇರೆ ಕಡೆಗೆ ಕರೆದೊಯ್ದು ಪರಿಸ್ಥಿತಿಯನ್ನು ಹತೋಟಿಗೆ ತಂದರು.

ಮಹೇಂದ್ರ ಬೆಸ್ಟ್: ಇದೇ ಮೊದಲ ಬಾರಿಗೆ ದಸರಾ ಉತ್ಸವದಲ್ಲಿ ಪಾಲ್ಗೊಂಡಿರುವ ನಾಲ್ಕು ಹೊಸ ಆನೆಗಳ ಪೈಕಿ ಮಹೇಂದ್ರ ಆನೆ ಸಿಡಿಮದ್ದು ತಾಲೀಮಿನ ಭಾರಿ ಶಬ್ದಕ್ಕೆ ಒಂದಿಷ್ಟೂ ಜಗ್ಗದೆ ನೆರೆದವರಲ್ಲಿ ಅಚ್ಚರಿ ಮೂಡಿಸಿದ. ಸೌಮ್ಯ ಸ್ವಭಾವದ ಮಹೇಂದ್ರ, ಸಿಡಿಮದ್ದು ತಾಲೀಮಿನಲ್ಲಿ ಧೈರ್ಯ ಪ್ರದರ್ಶಿಸಿ ಎಲ್ಲರ ಮೆಚ್ಚುಗೆ ಗಳಿಸಿದ. ಭವಿಷ್ಯದ ಕುಮ್ಕಿ ಆನೆ ಎನಿಸಿರುವ ಲಕ್ಷ್ಮೀ ವರ್ತನೆಯಲ್ಲೂ ಸುಧಾರಣೆ ಕಂಡಿದೆ. ಕಳೆದ ಬಾರಿ ಸಿಡಿಮದ್ದು ತಾಲೀಮಿಗೆ ಲಕ್ಷ್ಮಿ ಆನೆ ಬೆಚ್ಚಿತ್ತು. ಹೆಣ್ಣಾನೆಗಳಲ್ಲೇ ಕಿರಿಯಳಾದ 22 ವರ್ಷದ ಲಕ್ಷ್ಮಿ, ಈ ಬಾರಿ ಸಿಡಿಮದ್ದಿನ ತಾಲೀಮಿನಲ್ಲಿ ಸಣ್ಣದಾಗಿ ಬೆದರಿದ್ದನ್ನು ಬಿಟ್ಟರೆ, ಉಳಿದಂತೆ ಅದರ ವರ್ತನೆ ಮೆಚ್ಚುಗೆಯಾಯಿತು. ಆದರೆ ಎರಡನೇ ಬಾರಿಗೆ ದಸರಾ ಉತ್ಸವದಲ್ಲಿ ಭಾಗಿಯಾಗಿರುವ ಭೀಮ ಘೀಳಿಟ್ಟಿದ್ದು ಅಚ್ಚರಿಗೆ ಕಾರಣವಾಗಿದೆ. ತಾಲೀಮು ಸಂದರ್ಭದಲ್ಲಿ ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶು ವೈದ್ಯ ಡಾ.ಮುಜೀಬ್ ಸೇರಿದಂತೆ ಹಲವರು ಇದ್ದರು.

ನಮ್ಮ ಹಳ್ಳಿಗರಿಗೂ ಯೋಗಾ ಯೋಗ!

ಉಪ ನಿರ್ದೇಶಕಿ ಸೀಮಂತಿನಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಮೈಸೂರಿನ ಓವೆಲ್ ಮೈದಾನದಲ್ಲಿ ಸೆ.26 ರಂದು ಯೋಗ ದಸರಾ ಉದ್ಘಾಟನೆ ಯಾಗಲಿದ್ದು, 7 ದಿನಗಳ ಕಾಲ ನಡೆಯಲಿದೆ. ರಾಜ್ಯಮಟ್ಟದ ಯೋಗಾಸನ ಸ್ಪರ್ಧೆ ಹೊರತುಪಡಿಸಿ ಉಳಿದ ಎಲ್ಲಾ ಕಾರ್ಯಕ್ರಮಗಳು ಬೆಳಗ್ಗೆ 6 ರಿಂದ 8 ಗಂಟೆಯವರೆಗೆ ನಡೆಯಲಿದ್ದು, ರಾಜ್ಯ-ರಾಷ್ಟ್ರಮಟ್ಟದ ಯೋಗಪಟುಗಳು ಭಾಗವಹಿಸಲಿದ್ದಾರೆ ಎಂದರು.

ಯೋಗ ವಾಹಿನಿ, ಯೋಗ ಸಂಭ್ರಮ: ಸೆ.27ರಂದು ಜನಪ್ರತಿನಿಧಿಗಳು, ಮುದ್ರಣ ಹಾಗೂ ದೃಶ್ಯ ಮಾಧ್ಯಮ ಪ್ರತಿನಿಧಿಗಳಿಗಾಗಿ ಹಮ್ಮಿಕೊಂಡಿರುವ 'ಯೋಗ ವಾಹಿನಿ' ಕಾರ್ಯಕ್ರಮ ಸರಸ್ವತಿಪುರಂನಲ್ಲಿರುವ ಜವರೇಗೌಡ ಉದ್ಯಾನವನದಲ್ಲಿ ನಡೆಯಲಿದೆ. ಹಾಗೆಯೇ ಸೆ.28 ರಂದು ಅರಮನೆ ಆವರಣದಲ್ಲಿ 'ಯೋಗ ಸಂಭ್ರಮ' ನಡೆಯಲಿದ್ದು, ನೂರಾರು ಯೋಗ ಪಟುಗಳಿಂದ 75 ಬಗೆಯ ವಿಶಿಷ್ಟ ಯೋಗಾಸನಗಳ ಪ್ರದರ್ಶನ ಇರಲಿದೆ ಎಂದು ಮಾಹಿತಿ ನೀಡಿದರು. ಸೆ.29 ರಂದು ವಸ್ತು ಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿರುವ ಕಾಳಿಂಗರಾವ್ ವೇದಿಕೆಯಲ್ಲಿ ರಾಜ್ಯಮಟ್ಟದ ಯೋಗಾಸನ ಸ್ಪರ್ಧೆ ನಡೆಯಲಿದೆ. 3 ರಿಂದ 80 ವರ್ಷದವರೆಗಿನ ಯೋಗಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ. ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೂ ಯೋಗಾಸನ ಸ್ಪರ್ಧೆ ನಡೆಯಲಿದೆ ಎಂದು ತಿಳಿಸಿದರು.

ಯೋಗ ಸರಪಳಿ, ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ: ಅರಮನೆ ಆವರಣದಲ್ಲಿ ಸೆ.30 ರಂದು 2 ಸಾವಿರಕ್ಕೂ ಹೆಚ್ಚು ಯೋಗಪಟುಗಳಿಂದ ಯೋಗ ಸರಪಳಿ ಕಾರ್ಯಕ್ರಮ ನಡೆಯಲಿದೆ. ಅ.3 ರಂದು ಚಾಮುಂಡಿಬೆಟ್ಟದ ಮೇಲೆ ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ ಆಯೋಜಿಸಲಾಗುವುದು. ದುರ್ಗಾ ನಮಸ್ಕಾರದಲ್ಲಿ ಭಾಗವಹಿಸುವವರ ಚಾಮುಂಡಿಬೆಟ್ಟವನ್ನು ಕಾಲ್ನಡಿಯಲ್ಲಿ ಹತ್ತಿ ಯೋಗಾಸನ ಮಾಡಬೇಕಾಗಿದೆ ಎಂದರು.

ನಂಜನಗೂಡಿನಲ್ಲಿ ಯೋಗ: ಅ.1 ರಂದು ಇದೇ ಮೊದಲ ಬಾರಿಗೆ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನದ ಆವರಣದಲ್ಲಿ ಸಾಮೂಹಿಕ ಯೋಗ ಪ್ರದರ್ಶನ ಆಯೋಜಿಸಿದ್ದು, 5 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಈ ಮೂಲಕ ನಗರಕ್ಕೆ ಸೀಮಿತವಾಗಿದ್ದ ಯೋಗ ಪ್ರದರ್ಶನ ಗ್ರಾಮೀಣ ಭಾಗಕ್ಕೂ ವಿಸ್ತರಣೆಯಾಗಲಿದ್ದು, ಯೋಗದ ಉಪಯುಕ್ತತೆ ತಿಳಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಹೇಳಿದರು.

ಉಪಹಾರ ವ್ಯವಸ್ಥೆ: 7 ದಿನಗಳ ಯೋಗ ದಸರಾದಲ್ಲಿ ಭಾಗವಹಿಸುವವರಿಗೆ ಬೆಳಗಿನ ಉಪಹಾರ, ಹಣ್ಣು-ಹಾಲು ವಿತರಣೆಗೆ ಚಿಂತನೆ ನಡೆಸಲಾಗಿದೆ. ವಿಶ್ವ ಯೋಗ ದಿನಾಚರಣೆ ಬಳಿಕ ಯೋಗ ಆಸಕ್ತರ ಸಂಖ್ಯೆ ಹೆಚ್ಚಾಗಿದ್ದು, ಈಗಾಗಲೇ ಸಾಕಷ್ಟು ಮಂದಿ ಯೋಗ ಪಟುಗಳು, ತರಬೇತುದಾರರು ಸಹಕಾರ ನೀಡುವುದಾಗಿ ತಿಳಿಸಿದ್ದಾರೆ ಎಂದರು.

ಉತ್ಸವ ಮೂರ್ತಿ ಸ್ಥಳಾಂತರ

ಉತ್ಸವ ಮೂರ್ತಿಗೆ ಚಾಮುಂಡಿ ಬೆಟ್ಟದ ಆಗಮಿಕರು ವಿಶೇಷ ಪೂಜೆ ಸಲ್ಲಿಸಲಿದ್ದು, ಈ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕವೇ ದಸರಾ ಉತ್ಸವಕ್ಕೆ ಚಾಲನೆ ದೊರಕಲಿದೆ. ನಂತರ ಜಂಬೂಸವಾರಿ ದಿನ ತಾಯಿಯ ಉತ್ಸವ ಮೂರ್ತಿಯನ್ನು ಅರಮನೆ ಆವರಣಕ್ಕೆ ತಂದು, ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಗುತ್ತದೆ. ವಿಜಯದಶಮಿ ಮೆರವಣಿಗೆ ಮುಕ್ತಾಯವಾದ ಬಳಿಕ ಉತ್ಸವ ಮೂರ್ತಿಯನ್ನು ಮತ್ತೆ ಅರಮನೆ ಆವರಣದಲ್ಲಿ ಇಡಲಾಗುತ್ತದೆ. ಕಳೆದ ಬಾರಿ ಚಾಮುಂಡಿ ಬೆಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಇನ್ನಿತರ ಗಣ್ಯರು ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿದ ಬಳಿಕ ಅಲಂಕೃತ ವಾಹನದಲ್ಲಿ ನಾದಸ್ವರ, ಪೊಲೀಸ್ ಬ್ಯಾಂಡ್, ಅಶ್ವದಳ, ಭಜನಾ ತಂಡ, ವೇದಘೋಷದೊಂದಿಗೆ ಮೆರವಣಿಗೆಯಲ್ಲಿ ತರಲಾಗಿತ್ತು. ದಾರಿಯುದ್ದಕ್ಕೂ ಭಕ್ತರು ಇಕ್ಕೆಲಗಳಲ್ಲಿ ನಿಂತು ಉತ್ಸವ ಮೂರ್ತಿಯನ್ನು ಕಣ್ತುಂಬಿಕೊಂಡಿದ್ದರು.

ಕೋರ್ಟ್ ಮುಂದಿನ ವಿಚಾರಣೆ ಸೆ.22ಕ್ಕೆ

ಮಸೀದಿ ಸಮಿತಿ ಹೈಕೋರ್ಟ್ ಮೊರೆ: ಗ್ಯಾನವಾಪಿ ಮಸೀದಿಯಲ್ಲಿ ಹಿಂದೂ ದೇವತೆಗಳ ಕುರುಹುಗಳಿದ್ದು, ಅಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಬೇಕೆಂಬ ಹಿಂದೂ ಗಳ ಅರ್ಜಿಯನ್ನು ಜಿಲ್ಲಾ ಕೋರ್ಟ್ ಪುರಸ್ಕರಿಸಿದ್ದು, ಇದರಿಂದ ಹಿನ್ನಡೆಯಾಗಿರುವ ಮಸೀದಿ ಸಮಿತಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲು ತೀರ್ಮಾನಿಸಿದೆ. ಗ್ಯಾನವಾಪಿ ಮಸೀದಿಯನ್ನು ಪ್ರತಿನಿಧಿಸುತ್ತಿರುವ ಅಂಜುಮನ್ ಇಂತಜಾಮಿಯಾ ಸಮಿತಿ ಇದೀಗ ಜಿಲ್ಲಾ ಕೋರ್ಟ್ ಅದೇಶವನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್ ಮೆಟ್ಟಿಲೇರಲಿದೆ.

ಸಿದ್ದರಾಮಯ್ಯನವರೇ ನಿಮ್ಮನ್ನು ನೋಡಿ ಬಿಜೆಪಿಯವರು ಹೆದರಲು ನೀವೇನು ಕಾಡುಪ್ರಾಣಿಯೇ?

● ಸಾರಿಗೆ ಸಚಿವ ಶ್ರೀರಾಮುಲು ಟ್ವೀಟ್ ಮೂಲಕ ವಾಗ್ದಾಳಿ ● ನನ್ನನ್ನು ನೋಡಿದರೆ ಬಿಜೆಪಿಯವರಿಗೆ ಭಯ ಎಂಬ ಸಿದ್ದರಾಮಯ್ಯನವರ ಹೇಳಿಕೆಗೆ ಎದಿರೇಟು

ಬೆಂಗಳೂರು, ಸೆ.12(ಕೆಎಂಶಿ)-ನನ್ನನ್ನು ಕಂಡರೆ ಬಿಜೆಪಿಯವರಿಗೆ ಭಯ ಎಂಬ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯನವರ ಹೇಳಿಕೆಗೆ, ಸಾರಿಗೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ತಿರುಗೇಟು ನೀಡಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಸಿದ್ದರಾಮಯ್ಯನವರೇ ನಿಮ್ಮನ್ನು ನೋಡಿ ಬಿಜೆಪಿ ಹೆದರಿಕೊಳ್ಳಲು ನೀವು ಕಾಡು ಪ್ರಾಣಿಯೋ ಅಥವಾ ಮನುಷ್ಯರೋ? ಏಕೆಂದರೆ ನಾಗರಿಕ ಸಮಾಜದಲ್ಲಿ ಜನರು ಕಾಡುಮೃಗಗಳನ್ನು ಮಾತ್ರ ನೋಡಿ ಹೆದರುತ್ತಾರೆ ಹೊರತು ಮನುಷ್ಯರನ್ನು ನೋಡಿ ಅಲ್ಲ ಎಂಬುದು ನಿಮಗೆ ತಿಳಿಯದಿರುವುದು ದುರ್ದೈವವೇ ಸರಿ ಎಂದು ವ್ಯಂಗ್ಯವಾಡಿದ್ದಾರೆ.

ನಿಮ್ಮನ್ನು ನೋಡಿ ಹೆದರುವ ಇಲ್ಲವೇ ಬೆದರುವ ಅಗತ್ಯ ಖಂಡಿತವಾಗಿಯೂ ಬಿಜೆಪಿಗೆ ಅಂತಹ ದುಸ್ಥಿತಿ ಬಂದಿಲ್ಲ. ಎಂತೆಂಥವರನ್ನೇ ಎದುರಿಸಿರುವಾಗ ಅಧಿಕಾರದ ಆಸೆಗಾಗಿ ಬೆಳೆಸಿದ ಪಕ್ಷಕ್ಕೆ ಚೂರಿ ಹಾಕಿ ಬಂದ ನೀವು ನಮಗೆ ಲೆಕ್ಕಕೂ ಇಲ್ಲ, ಬುಕ್ಕಕ್ಕೂ ಇಲ್ಲ ಎಂದು ತಿರುಗೇಟು ನೀಡಿದ್ದಾರೆ. 2 ಸ್ಥಾನದಿಂದ ಆರಂಭವಾದ ಬಿಜೆಪಿ ಜೈತ್ರಾಯಾತ್ರೆ ಇಂದು 303 ಸ್ಥಾನಗಳವರೆಗೆ ಬಂದಿದೆ. ನಿಮ್ಮಂತಹ ಪಾಳೆಗಾರರನ್ನು ಎದುರಿಸುವ ಶಕ್ತಿ ನಮ್ಮ ಕಾರ್ಯಕರ್ತರಿಗಿದೆ. ಬಿಜೆಪಿ ಕೆಣಕಿದವರು ಎಂತಹ ಹೀನಾಯ ಸ್ಥಿತಿಗೆ ಬಂದಿದ್ದಾರೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ನನ್ನನ್ನು ನೋಡಿದರೆ ಬಿಜೆಪಿಯವರಿಗೆ ಭಯ ಎಂದು ಹೇಳಿಕೊಳ್ಳುವ ನಿಮಗೆ ನಾಚಿಕೆಯಾಗಬೇಕು. 5 ವರ್ಷ ಮುಖ್ಯಮಂತ್ರಿಯಾಗಿದ್ದ ನಿಮಗೆ ಈಗ ಹೇಳಿಕೊಳ್ಳಲು ಒಂದೇ ಒಂದು ಕ್ಷೇತ್ರವಿಲ್ಲ. ಹೈಕಮಾಂಡ್ ಎದುರು ನಿಮ್ಮ ಅಸ್ತಿತ್ವ ಉಳಿಸಿಕೊಳ್ಳಲು ವೀರಾವೇಷದ ಮಾತುಗಳನ್ನು ಆಡುತ್ತಿದ್ದೀರಿ ಎಂದು ಕುಹಕವಾಡಿದ್ದಾರೆ.



ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲೇ 132 ಸ್ಥಾನದಿಂದ 78 ಸ್ಥಾನಕ್ಕೆ ಕಾಂಗ್ರೆಸ್ ಪಕ್ಷವನ್ನು ಕುಸಿಯುವಂತೆ ಮಾಡಿದ್ದು ನಿಮ್ಮ ಸಾಧನೆ. ಚಾಮುಂಡೇಶ್ವರಿಯಲ್ಲಿ 38 ಸಾವಿರ ಮತಗಳಲ್ಲಿ ಹೀನಾಯ ಸೋಲು, ಬಾದಾಮಿಯಲ್ಲಿ ನನ್ನೆದುರು 1600 ಮತಗಳ ಅಂತರದಲ್ಲಿ ತಿಣಕಾಡಿ ಗೆದ್ದಿದ್ದು ನಿಮ್ಮ ತಾಕತ್ತು ಎಂದು ಟೀಕಿಸಿದ್ದಾರೆ.

ದಾವಣಗೆರೆಯ ಸಿದ್ದರಾಮೋತ್ಸವಕ್ಕೆ ಬಿಜೆಪಿಯವರು ಹೆದರಿದ್ದಾರೆ ಎಂಬ ನಿಮ್ಮ ಹೇಳಿಕೆ ಬಾಲಿಶತನ ದಿಂದ ಕೂಡಿದೆ. ಇಂಥ ಹತ್ತು ಪಟ್ಟು ಜನರನ್ನು ಸೇರಿಸಿ ಸಮಾವೇಶ ನಡೆಸುವ ತಾಕತ್ತು ಬಿಜೆಪಿಗಿದೆ. ನಮ್ಮ ಕಾರ್ಯ ಕರ್ತರು ಬಿರಿಯಾನಿ, ಎಣ್ಣೆ, 500 ರೂ.ಗೆ ಬಂದು 'ಜೈ ಹುಲಿಯಾ' ಎನ್ನುವವರಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ಅಲೆ ಶುರುವಾಗಿದೆ ಎಂಬುದು ನಿಮ್ಮ ಭ್ರಮೆಯಷ್ಟೆ. ವಾಸ್ತವ ಚಿತ್ರಣವೇ ಬೇರೆ ಇದೆ. ನಿಜವಾಗಿ ಆರಂಭವಾಗಿರುವುದು ಕಾಂಗ್ರೆಸ್ ಅವಸಾನದ ದಿನಗಳು. ಹಾಸಿಗೆ, ದಿಂಬು, ತಟ್ಟೆ, ಲೋಟ, ಅನ್ನಭಾಗ್ಯ, ಲ್ಯಾಪ್‌ಟಾಪ್, ಕಾಮಗಾರಿ ನಡೆಸದೇ, ಬಿಲ್ ಮಂಜೂರಾತಿ. ಈ ಬಿಲ್ವಿದ್ಯೆ ನಿಮಗಲ್ಲದೆ ಬೇರೆಯವರಿಗೆ ಬರಲು ಸಾಧ್ಯವೇ, ಕರ್ನಾಟಕದ ಅಣ್ಣಾ ಹಜಾರೆಯೇ ಎಂದು ಪ್ರಶ್ನಿಸಿದ್ದಾರೆ. ಮನೆಯೊಂದು ಮೂರು ಬಾಗಿಲು ಎಂಬಂತಾಗಿದ್ದರೂ ಬಿಜೆಪಿ ವಿರುದ್ಧ ನೀವು ಆರೋಪ ಮಾಡಿದಾಗ ನಾವು ಬಾಯಿ ಮುಚ್ಚಿಕೊಂಡು ಸುಮ್ಮನಿರಲು ಸಾಧ್ಯವೇ? ಭಾರತ್ ಜೋಡೊದಲ್ಲಿ ನಿಮ್ಮ ನಾಯಕ ರಾಹುಲ್ ಗಾಂಧಿ ಅವರು ಖಾಲಿ ಕುರ್ಚಿಗೆ ಒಣ ಭಾಷಣ ಬಿಗಿಯುತ್ತಿರುವುದು ಕಣ್ಣಿಗೆ ಕಾಣುತ್ತಿಲ್ಲವೇ? ಎಂದು ಸಿದ್ದರಾಮಯ್ಯನವರಿಗೆ ತಿರುಗೇಟು ಕೊಟ್ಟಿದ್ದಾರೆ.

ಹೆಚ್ಚು ದಿನ ಬೇಡ.! ಕೆಲವೇ ದಿನಗಳಲ್ಲಿ ನಿಮ್ಮನ್ನು ಹಾಗೂ ನಿಮ್ಮ ಪಟಲಾಂ ಅನ್ನು ಹೇಗೆ ಕಾಂಗ್ರೆಸ್ ಒಳಗಿರುವವರು ಮುಗಿಸುತ್ತಾರೆ ಕಾದು ನೋಡಿ.! ನಿಮ್ಮ ಹೋರಾಟ, ಚೀರಾಟ, ಒಣ ಪೌರುಷದ ಮಾತುಗಳು 2023ರ ಮೇ ತಿಂಗಳವರೆಗೆ ಮಾತ್ರ. ನಂತರ ಸಿದ್ದರಾಮನಹುಂಡಿಯ ತೋಟದ ಮನೆಯೇ ಗತಿ ಎಂದು ಸಚಿವ ಶ್ರೀರಾಮುಲು ಲೇವಡಿ ಮಾಡಿದ್ದಾರೆ.

ದಸರಾ ಗಜಪಡೆ ಮಾವುತರು, ಕಾವಾಡಿಗಳಿಗೆ ಸಮವಸ್ತ್ರ ವಿತರಣೆ



ಡಿಸಿಎಫ್ ಡಾ.ವಿ.ಕರಿಕಾಳನ್ ಅವರೊಂದಿಗೆ ಹೊಸ ಸಮವಸ್ತ್ರ ಧರಿಸಿದ ಮಾವುತರು, ಕಾವಾಡಿಗಳು.

ಮೈಸೂರು,ಸೆ.12(ಎಂಟಿವೈ)- ದಸರಾ ಗಜಪಡೆಯ ಮಾವುತರು ಹಾಗೂ ಕಾವಾಡಿಗಳಿಗೆ ಡಿಸಿಎಫ್ ಡಾ. ವಿ. ಕರಿಕಾಳನ್ ಸೋಮವಾರ ಒಂದು ಜೊತೆ ಸಮವಸ್ತ್ರ ವಿತರಿಸಿ, ಜಂಬೂಸವಾರಿಯ ಯಶಸ್ಸಿಗೆ ಸಜ್ಜಾಗುವಂತೆ ಸಲಹೆ ನೀಡಿದರು.

ಮೊದಲ ತಂಡದ 9 ಆನೆಗಳ ಮಾವುತರು, ಕಾವಾಡಿಗಳಿಗೆ ಒಂದು ಜೊತೆ ಸಮವಸ್ತ್ರ ವಿತರಿಸಲಾಯಿತು. ಎರಡನೇ ತಂಡದ 5 ಆನೆಗಳ ಮಾವುತರು ಹಾಗೂ ಕಾವಾಡಿಗಳಿಗೂ ಸಮವಸ್ತ್ರಕ್ಕೆ ಅಳತೆ ನೀಡಲಾಗಿದ್ದು, ಇನ್ನೆರಡು ದಿನದಲ್ಲಿ ನೀಡಲಾಗುತ್ತದೆ.

ಈ ವೇಳೆ ಡಾ.ವಿ.ಕರಿಕಾಳನ್ ಮಾತನಾಡಿ, ತಾಲೀಮು ಮಾತ್ರವಲ್ಲ ಜಂಬೂ ಸವಾರಿಯಲ್ಲಿ ಆನೆಗಳ ಯಶಸ್ವಿಯಾಗಿ ಮುನ್ನಡೆಸಲಿದ್ದಾರೆ. ಇವರಲ್ಲಿ ಶಿಸ್ತು ತರುವ ದೃಷ್ಟಿಯಿಂದ ಸಮವಸ್ತ್ರ ನೀಡಲಾಗಿದೆ ಎಂದರು. ಮಾವುತರು, ಕಾವಾಡಿಗಳು ಜಂಬೂ ಸವಾರಿ ಮೆರವಣಿಗೆಯ ಯಶಸ್ಸಿಗೆ ಶ್ರಮಿಸಬೇಕು. ಆನೆಗಳ ಬಳಿ ಜನರು ಬರದಂತೆ ಕಟ್ಟೆಚ್ಚರ ವಹಿಸಬೇಕು. ನವರಾತ್ರಿ ಆರಂಭವಾದರೆ ಅರಮನೆಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತದೆ. ಆ ವೇಳೆ ಸಹಜವಾಗಿ ಆನೆಗಳ ನೋಡಲು ಹೆಚ್ಚಿನ ಜನ ಬರುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಮಾವುತರು, ಕಾವಾಡಿಗಳು ಎಚ್ಚರವಾಗಿರಬೇಕಾಗುತ್ತದೆ ಎಂದು ಸಲಹೆ ನೀಡಿದರು.

ಬ್ರಿಟನ್ ರಾಣಿ ಎಲಿಜಬೆತ್, ಉಮೇಶ್ ಕತ್ತಿ ಸೇರಿ ಅಗಲಿದ ಗಣ್ಯರಿಗೆ ವಿಧಾನಸಭೆ ಶ್ರದ್ಧಾಂಜಲಿ

ಬೆಂಗಳೂರು, ಸೆ. 12(ಕೆಎಂಶಿ)-ರಾಣಿ ಎರಡನೇ ಎಲಿಜಬೆತ್, ಉಮೇಶ್ ಕತ್ತಿ ಸೇರಿದಂತೆ ನಿಧನರಾದ ಗಣ್ಯರಿಗೆ ವಿಧಾನ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು.

ಸಂತಾಪ ಸೂಚನೆ ನಿರ್ಣಯಕ್ಕೆ ಬೆಂಬಲ ಸೂಚಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉಮೇಶ್ ಕತ್ತಿ ಕ್ರಿಯಾಶೀಲ ವರ್ಣರಂಜಿತ ರಾಜಕಾರಣಿ ತೀಕ್ಷ್ಣವಾದ ಸಾಮಾನ್ಯ ಜ್ಞಾನ, ಬುದ್ಧಿವಂತಿಕೆ ಹೊಂದಿದವರಾಗಿದ್ದರು ಎಂದು ಬಣ್ಣಿಸಿದರು. ಶಾಸಕರಾದ ಮೇಲೆ ಸಣ್ಣ ವಯಸ್ಸಿನಲ್ಲಿ ರಾಮಕೃಷ್ಣ ಹೆಗಡೆ ಹಾಗೂ ಎಸ್.ಆರ್. ಬೊಮ್ಮಾಯಿಗೆ ಹತ್ತಿರವಾಗಿದ್ದರು, ಮುಕ್ತವಾದ ಮನಸ್ಸು, ಮಾತು ಹೊಂದಿದ್ದರು. ಕತ್ತಿ ಕ್ಷೇತ್ರದ ಜನರ ಪ್ರೀತಿಗೆ ಪಾತ್ರರಾಗಿದ್ದರು. ಎಲ್ಲ ಪಾರ್ಟಿ ಬಿ ಫಾರಂ ನನ್ನ ಜೇಬಿನಲ್ಲಿ ಇದೆ ಎಂದು ತಮಾಷೆಗೆ ಹೇಳುತ್ತಿದ್ದರು. ಜನರ ಮಧ್ಯೆ ಇದ್ದು ಬೆಳೆದ ರಾಜಕಾರಣಿ. ಸ್ನೇಹಮಯ ಸ್ವಭಾವ ಹೊಂದಿದ್ದರು. ಕತ್ತಿ ಬಂದಿಖಾನೆ, ತೋಟಗಾರಿಕೆ ಸಚಿವರಾಗಿದ್ದರು. ಒಮ್ಮೆ ಅಸಮಾಧಾನಗೊಂಡು ಸಚಿವ ಸ್ಥಾನಕ್ಕೆ ರಾಜೀನಾಮೆ ಪತ್ರ ಕೊಡಲು ಹೋಗಿದ್ದರು. ಆದರೆ ಎಸ್.ಆರ್. ಬೊಮ್ಮಾಯಿ ಅವರು ಸಮಾಧಾನ ಮಾಡಿದ್ದರು. ನಂತರ ಅವರಿಗೆ ಪಿಡಬ್ಲ್ಯುಡಿ ಖಾತೆ ಸಿಕ್ಕಿತು ಎಂದರು.

ಕತ್ತಿ ಅವರ ತಂದೆ ಇದೇ ಅಧಿವೇಶನದಲ್ಲಿ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟರು. ಯಾವುದಕ್ಕೂ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಉಮೇಶ್ ಕತ್ತಿ ಅವರ ನಿಧನದಿಂದ ತುಂಬಾ ನಷ್ಟವಾಗಿದೆ ಎಂದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಹೋರಾಟಕ್ಕೆ ಬೆಂಬಲವಾಗಿ ಉಮೇಶ್ ಕತ್ತಿ ನಿಂತಿದ್ದರು. ಒಳ್ಳೆಯ ವ್ಯಕ್ತಿ, ನೀವು ಹೇಳಿದ ಕೆಲಸ ಮಾಡಿರುವುದಾಗಿ ತಿಳಿಸುತ್ತಿದ್ದರು. ಚಿಕ್ಕ ವಯಸ್ಸಿನಲ್ಲೇ ಅಗಲಿರುವುದು ದುಃಖ ತಂದಿದೆ ಎಂದರು.

ಶಾಸಕ ಎಲ್.ನಾಗೇಂದ್ರ ಹುಟ್ಟುಹಬ್ಬ ಆಚರಣೆ



ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕ ಎಲ್.ನಾಗೇಂದ್ರ ಅವರು ಯಾದವಗಿರಿಯಲ್ಲಿರುವ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಿ ಶ್ರೀ ಸ್ವಾಮಿ ಮುಕ್ತಿದಾನಂದಜಿ ಅವರ ಆಶೀರ್ವಾದ ಪಡೆದರು.



ಶಾಸಕ ಎಲ್.ನಾಗೇಂದ್ರ ಅವರ ಹುಟ್ಟುಹಬ್ಬದ ಪ್ರಯುಕ್ತ ಯಾದವಗಿರಿ, ಮೇದರ್ ಬ್ಲಾಕ್ ಸರ್ಕಾರಿ ಶಾಲೆ ಮಕ್ಕಳ ಕಲಿಕೆಗೆ ಅಗತ್ಯವಾದ ವಸ್ತುಗಳನ್ನು ವಿತರಿಸಲಾಯಿತು.



ಮೈಸೂರಿಗೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷರಾದ ನಳೀನ್ ಕುಮಾರ್ ಕಟೀಲ್ ಅವರನ್ನು ಶಾಸಕ ಎಲ್.ನಾಗೇಂದ್ರ ಅವರು ಬಿಜೆಪಿ ಪಕ್ಷದ ಕಚೇರಿಯಲ್ಲಿ ಅಭಿನಂದಿಸಿದರು.



ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಗರಡಿ ಮನೆಗೆ ಭೇಟಿ ನೀಡಿ ಪೂಜೆ ಸಲ್ಲಿಸಿದ ಶಾಸಕ ಎಲ್.ನಾಗೇಂದ್ರ ಅವರು ಕೇಕ್ ಕತ್ತರಿಸಿ ಹಿತೈಷಿಗಳಿಗೆ ತಿನ್ನಿಸುವ ಮೂಲಕ ಹುಟ್ಟುಹಬ್ಬ ಸಂಭ್ರಮಿಸಿದರು.



ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಹುಟ್ಟುಹಬ್ಬವನ್ನು ಹೆಬ್ಬಾಳಿನಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಹೆಬ್ಬಾಳು ನಿವಾಸಿಗಳು, ಬಿಜೆಪಿ ಕಾರ್ಯಕರ್ತರು ಎಲ್.ನಾಗೇಂದ್ರ ಅವರನ್ನು ಹೆಬ್ಬಾಳು ಹೆಬ್ಬಾಗಿಲಿನಿಂದ ಬಸವನಗುಡಿ ದೇವಸ್ಥಾನದವರೆಗೆ ಭವ್ಯ ಮೆರವಣಿಗೆಯಲ್ಲಿ ಕರೆತರುವ ಮೂಲಕ ಸ್ವಾಗತಿಸಿದ್ದು ವಿಶೇಷವಾಗಿತ್ತು.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.09.2022 ಮಂಗಳವಾರ, ಮಳೆ ನಕ್ಷತ್ರ: ಪುಬ್ಬ, 31.08.2022 ರಿಂದ 13.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ, ತಿಥಿ : ತೃತೀಯ, ನಕ್ಷತ್ರ : ರೇವತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.35 ಶ್ರದ್ಧೆಯ ಶಿಲ್ಪ-ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ- ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ-ದೂರ ಸರಿದರು ಕಾದಂಬರಿಯ ಪ್ರಸ್ತುತಿ- ಉಮೇಶ್.ಎಸ್., 9.00 ವೃತ್ತಿ ಮಾರ್ಗದರ್ಶನ-ಅಪರಾಧ ಶಾಸ್ತ್ರ ಮತ್ತು ನ್ಯಾಯವಿಜ್ಞಾನ ವಿಷಯಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಶಿಲ್ಪ ಶ್ರೀ ಅವರೊಂದಿಗೆ ಮಾತುಕತೆ, 10.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ-ಶ್ಯಾಮಾಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ

ಮಧ್ಯಾಹ್ನ: 12.05ವನಿತಾವಿಹಾರ-ಸ್ತ್ರೀ ಚೇತನ-ಚಿತ್ರನಟಿ ಹಾಗೂ ಮಿಸೆಸ್ ಸೌತ್ ಇಂಡಿಯನ್ ಸೌಂದರ್ಯ ಸ್ಪರ್ಧಾ ವಿಜೇತೆ ಬಲಿಯಂಡ ವರ್ಷಾ ವಿಜಿ ಅವರೊಂದಿಗೆ ಮಾತುಕತೆ, 12.30 ದೇವರನಾಮ, 12.45 Start up ಮತ್ತು ಅವಕಾಶಗಳು ಕುರಿತು ವಿಶ್ವ ಪ್ರಸಾದ್ ಆಳ್ವ ಅವರೊಂದಿಗೆ ಸಂದರ್ಶನ. ಸಂದರ್ಶಕರು- ದಿವಾಕರ ಹೆಗಡೆ, 1.20 ಭಾವಗೀತೆ-ಎ.ಜೆ. ದಿವ್ಯಾ, 4.00 ಕಥಾ ಕಾಲಕ್ಷೇಪ "ನಳ ದಮಯಂತಿ", ಪ್ರಸ್ತುತಿ- ವಿದ್ವಾನ್ ಗುರುರಾಜುಲುನಾಯ್ಡು, 6.50 ಕೃಷಿರಂಗ-ಕಿಸಾನ್ ವಾಣಿ, 9.30 ಎಸ್. ಕಲ್ಯಾಣರಾಮನ್ - ಹಾಡುಗಾರಿಕೆ, 10.00 ಕಾವ್ಯವಾಚನ, ವಾಚನ-ಎಂ.ವಿ. ಶುಭ, ವ್ಯಾಖ್ಯಾನ- ದಿನಮಣಿ ಶ್ರೀನಿವಾಸಮೂರ್ತಿ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹಿಮ್ಮಡಿ, ಪಾದದಲ್ಲಿ ನೋವು-ಉರಿ-ಊತದ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ಯುವ ಭಾರತ್ ಸಂಘಟನೆ :** ಸ್ವಾತಂತ್ರ್ಯ ಹೋರಾಟಗಾರ ರಾಮಸ್ವಾಮಿ ತೋರನಾಯಕ ಅವರ 75ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಮೇಯರ್ ಶಿವಕುಮಾರ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ ರಾಜೀವ್, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಜೋಗಿ ಮಂಜು, ವಿಕ್ರಂ ಅಯ್ಯಂಗಾರ್, ಪಡುವಾರಹಳ್ಳಿ ರಾಮಕೃಷ್ಣ, ಸ್ಥಳ: ರಾಮಸ್ವಾಮಿ ವೃತ್ತ, ಬೆಳಗ್ಗೆ 10ಕ್ಕೆ.

■ **ಆಲ್ಜೈಮರ್ಸ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ, ಮೈಸೂರು ಚಾಪ್ಟರ್ :** ನಮ್ಮ ನಡಿಗೆ ಆರೋಗ್ಯದೆಡೆಗೆ ಅರಿವು ಕಾರ್ಯಕ್ರಮ, ಉದ್ಘಾಟನೆ : ಹಿರಿಯ ಪತ್ರಕರ್ತ ಸಿ.ಕೆ. ಮಹೇಂದ್ರ, ಮುಖ್ಯ ಅತಿಥಿಗಳು : ಇನ್‌ಸ್ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ ಸಹಾಯಕ ಪ್ರಾಧ್ಯಾಪಕ ಡಾ. ಜೆ.ಬಿ. ನರೇಂದ್ರ, ಗೌರವ ಅತಿಥಿಗಳು : ಸೆಂಟ್ರಲ್ ಬ್ಯೂರೋ ಆಫ್ ಕಮ್ಯೂನಿಕೇಷನ್ ಸಹಾಯಕ ನಿರ್ದೇಶಕ ಡಾ. ಟಿ.ಸಿ. ಪೂರ್ಣಿಮಾ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ, ಸ್ಥಳ : ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ಹೊಸಮಠ :** ವಿದ್ವಾಂಸ ಡಾ. ಕೆ.ಎಂ. ಮಹದೇವಯ್ಯ ಹಾಗೂ ಸಾಧಕರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಉಪಸ್ಥಿತರು : ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ. ರಾಮದಾಸ್, ಜಿ.ಟಿ. ದೇವೇಗೌಡ, ಎಲ್. ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ವೆಂಕಟಗಿರಿ ಪ್ರಕಾಶನ ಸಂಸ್ಥಾಪಕ ಪ್ರೊ. ನೀ. ಗಿರಿಗೌಡ, ಸ್ಥಳ: ಶ್ರೀ ನಟರಾಜ ಸಭಾಂಗಣ, ಖಿಲ್ಲೆ ಮೊಹಲ್ಲಾ, ಬೆಳಗ್ಗೆ 10.30ಕ್ಕೆ.

■ **ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ :** ಜೈನಧರ್ಮ : ಸಮಾಜಮುಖಿ ಚಿಂತನೆಗಳು ರಾಷ್ಟ್ರ ಮಟ್ಟದ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಬಿ.ಎಂ.ಶ್ರೀ ಪ್ರತಿಷ್ಠಾನ ಅಧ್ಯಕ್ಷ ಡಾ. ಬೈರಮಂಗಳ ರಾಮೇಗೌಡ, ಮುಖ್ಯ ಅತಿಥಿಗಳು : ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಹಿರಿಯ ಪತ್ರಕರ್ತ ಎಚ್. ನರಸಿಂಹರಾಜು, ಅಧ್ಯಕ್ಷತೆ : ಹಂಪಿ ಕನ್ನಡ ವಿಶ್ವವಿದ್ಯಾಲಯ ಕುಲಸಚಿವ ಡಾ. ಎ. ಸುಬ್ಬಣ್ಣ ರೈ, ಸ್ಥಳ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ವೀರಶೈವ ಲಿಂಗಾಯತ ವಿವಿಧ ಬಡಾವಣೆಗಳ ಒಕ್ಕೂಟ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 107ನೇ ಜಯಂತಿ ಮಹೋತ್ಸವ, ಶರಣ ಚಿಂತನ ಕಾರ್ಯಕ್ರಮ, ಸಾನ್ನಿಧ್ಯ : ಪ್ರಾಧ್ಯಾಪಕ ಡಾ. ಡಿ.ಎಸ್. ಗುರು, ಉಪನ್ಯಾಸ : ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ, ಅಧ್ಯಕ್ಷತೆ : ಒಕ್ಕೂಟದ ಕಾರ್ಯಾಧ್ಯಕ್ಷ ಎಂ.ಹೆಚ್. ಚಂದ್ರಶೇಖರ್, ಉಪಸ್ಥಿತರು : ಒಕ್ಕೂಟದ ಅಧ್ಯಕ್ಷ ಕೆ.ಸಿ. ಬಸವರಾಜಸ್ವಾಮಿ, ಎಸ್.ಡಿ. ಮಹೇಂದ್ರ, ಸ್ಥಳ: ಶ್ರೀ ಗುರುಕುಲ ವಿದ್ಯಾಸಂಸ್ಥೆ ಆವರಣ, ಗುರುಕುಲ ಬಡಾವಣೆ, ಸಂಜೆ 6.30ಕ್ಕೆ.

ಕಾರವಾರ ಬಳಿ ಸರ್ಕಾರದಿಂದ ಮಂಜೂರಾದ 10 ಎಕರೆ ಪ್ರದೇಶದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ವತಿಯಿಂದ

ಕನ್ನಡ ನಾಡಿನ ವೀರ ಜೈನ ರಾಣಿ ಚೆನ್ನಭೈರಾದೇವಿ ಸ್ಮಾರಕ ನಿರ್ಮಾಣ

● ಎಸ್‌ಡಿಎಂ ವಿದ್ಯಾಸಂಸ್ಥೆಗಳ ಸಮೂಹದ ಉಪಾಧ್ಯಕ್ಷ ಡಿ.ಸುರೇಂದ್ರಕುಮಾರ್ ಮಾಹಿತಿ ● 'ಜೈನಧರ್ಮ; ಸಮಾಜಮುಖಿ ಚಿಂತನೆಗಳು' ಕುರಿತ 2 ದಿನಗಳ ವಿಚಾರ ಸಂಕಿರಣಕ್ಕೆ ಚಾಲನೆ

ಮೈಸೂರು, ಸೆ.12 (ಪಿಎಂ)– ಕಾರವಾರ ಬಳಿ ಸರ್ಕಾರ ಮಂಜೂರು ಮಾಡಿರುವ 10 ಎಕರೆ ಪ್ರದೇಶದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ವತಿಯಿಂದ ಕನ್ನಡ ನಾಡಿನ ವೀರ ಜೈನ ರಾಣಿ ಚೆನ್ನಭೈರಾದೇವಿ ಸ್ಮಾರಕ ನಿರ್ಮಾಣ ಮಾಡಲಾಗುತ್ತಿದೆ ಎಂದು ಎಸ್‌ಡಿಎಂ ವಿದ್ಯಾಸಂಸ್ಥೆಗಳ ಸಮೂಹದ ಉಪಾಧ್ಯಕ್ಷ ಡಿ.ಸುರೇಂದ್ರಕುಮಾರ್ ತಿಳಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ (ಎಸ್‌ಡಿಎಂ) ಮಹಿಳಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರ ಹಾಗೂ ಮಹಾವಿದ್ಯಾಲಯದ ಜಂಟಿ ಆಶ್ರಯದಲ್ಲಿ 'ಜೈನಧರ್ಮ; ಸಮಾಜಮುಖಿ ಚಿಂತನೆಗಳು' ಕುರಿತು ಹಮ್ಮಿಕೊಂಡಿರುವ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.




ಮೈಸೂರಿನ ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಸಭಾಂಗಣದಲ್ಲಿ 'ಜೈನಧರ್ಮ' ಕುರಿತು ಹಮ್ಮಿಕೊಂಡಿರುವ 2 ದಿನಗಳ ವಿಚಾರ ಸಂಕಿರಣಕ್ಕೆ ಸೋಮವಾರ ಚಾಲನೆ ನೀಡಿ, ಎಸ್‌ಡಿಎಂ ವಿದ್ಯಾಸಂಸ್ಥೆಗಳ ಸಮೂಹದ ಉಪಾಧ್ಯಕ್ಷ ಡಿ.ಸುರೇಂದ್ರಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ನೆರೆದಿದ್ದ ಸಭಿಕರನ್ನು ಬಲಚಿತ್ರದಲ್ಲಿ ಕಾಣಬಹುದು.

ಈಗಿನ ಉತ್ತರಕನ್ನಡ ಜಿಲ್ಲೆಯ ಗೇರುಸೊಪ್ಪೆ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳನ್ನು ಆಳಿದ ಸಾಳ್ವ ವಂಶದ ಜೈನ ಧರ್ಮದ ವೀರ ರಾಣಿ ಚೆನ್ನಭೈರಾದೇವಿ ಬಗ್ಗೆ ಹೆಚ್ಚು ಮಾಹಿತಿಯೇ ಇಲ್ಲವಾಗಿತ್ತು. ಆಕೆಯ ಬಗ್ಗೆ ಡಾ.ಗಜಾನನ ಶರ್ಮ ಅವರು ಉತ್ತಮವಾದ ಕಾದಂಬರಿ ಹೊರತಂದರು. ಅದನ್ನು ಓದಿದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರು ಸಂತಸ ವ್ಯಕ್ತಪಡಿಸಿದರು. ಅಲ್ಲದೆ, ಚೆನ್ನಭೈರಾದೇವಿಯ ದಿಟ್ಟ ಹೋರಾಟ ಮತ್ತು ನಾಡಿಗೆ ಆಕೆ ನೀಡಿದ ಕೊಡುಗೆ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು, ಈ ವೀರ ವನಿತೆ ಹೆಸರಿನಲ್ಲಿ ಸ್ಮಾರಕ ನಿರ್ಮಿಸುವ ಇಂಗಿತ ವ್ಯಕ್ತಪಡಿಸಿದ್ದರು. ಇದಕ್ಕೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿ ಕಾರವಾರದ ಬಳಿ 10 ಎಕರೆ ಜಾಗ ಮಂಜೂರು ಮಾಡಿದೆ. ಈ ಜಾಗದಲ್ಲಿ ಸುಂದರವಾದ ಚೆನ್ನಭೈರಾದೇವಿ ಸ್ಮಾರಕ ನಿರ್ಮಾಣವಾಗಲಿದೆ ಎಂದರು.

'ಅಹಿಂಸಾ ಪರಮೋ ಧರ್ಮ' ಎಂಬುದು ಜೈನಧರ್ಮದ 24ನೇ ತೀರ್ಥಂಕರ ವರ್ಧಮಾನ ಮಹಾವೀರರ ಮಹತ್ವದ ಸಂದೇಶ. ಮಾನವೀಯ ಮೌಲ್ಯಗಳಿಗೆ ಜೈನಧರ್ಮ ಹೆಚ್ಚಿನ ಮಹತ್ವ ನೀಡಿದೆ. ಸಮಾಜಮುಖಿಯಾಗಿ ಜೀವನ ಸಾಗಿಸುವುದು ಮುಖ್ಯವೆಂದು ಹೇಳಿದೆ. ಇದೇ ನಿಟ್ಟಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳವೂ ಮುನ್ನಡೆಯುತ್ತಿದೆ. ಶ್ರೀಕ್ಷೇತ್ರ ಗ್ರಾಮಾಭಿವೃದ್ಧಿ ಕಾರ್ಯಕ್ರಮದಡಿ 50 ಲಕ್ಷ ಮಂದಿಯ ಶ್ರೇಯೋಭಿವೃದ್ಧಿಗೆ ತನ್ನ ಪ್ರಯತ್ನ ಹಾಕುತ್ತಿದೆ. ಈವರೆಗೆ 280 ಬಸದಿಗಳನ್ನು ಅದರ ಪಾರಂಪರಿಕತೆಗೆ ಧಕ್ಕೆ ಉಂಟಾಗದಂತೆ ಜೀರ್ಣೋದ್ಧಾರಗೊಳಿಸಿ ಪಾರಂಪರಿಕ ಕೇಂದ್ರಗಳಾಗಿ ಮಾಡಲಾಗಿದೆ ಎಂದು ಡಿ.ಸುರೇಂದ್ರಕುಮಾರ್ ವಿವರಿಸಿದರು.

ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಜಯಕುಮಾರ್ ಉಪಾಧ್ಯೆ ಮಾತನಾಡಿ, ದೇಶದ ಸಂವಿಧಾನ ರಚನೆ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಜೈನ ನ್ಯಾಯದ ಬಗ್ಗೆ ಓದುವ ಸಲುವಾಗಿ ನಾಗ್ಪುರಕ್ಕೆ ತೆರಳಿದ್ದರು. ಅಲ್ಲಿ ಮೂರು ತಿಂಗಳವರೆಗೆ ಜೈನ ನ್ಯಾಯದ ಅಧ್ಯಯನ ನಡೆಸಿದರು. ಅಲ್ಲದೆ, ಸಂವಿಧಾನದಲ್ಲಿ ಜೈನ ನ್ಯಾಯದ ವಿಧಿಗಳನ್ನು ಅಳವಡಿಸಿದ್ದಾರೆ. ಸಂವಿಧಾನದಲ್ಲಿ ಮಹಾವೀರರ ಚಿತ್ರವೂ ಇದೆ. ಪ್ರಾಕೃತ ಭಾಷೆಯ ಉಲ್ಲೇಖವಿದೆ. ಅಷ್ಟೇ ಅಲ್ಲದೆ, ನೆಹರು ತಂದೆ ಮೋತಿಲಾಲ್ ನೆಹರು ಜೈನಧರ್ಮದ ಗ್ರಂಥ ಓದಿ ಪ್ರೇರಣೆಗೊಂಡು ಬನಾರಸ್ ಹಿಂದು ವಿಶ್ವವಿದ್ಯಾನಿಲಯದಲ್ಲಿ ಜೈನ ಧರ್ಮದ ವಿಭಾಗ ಪ್ರಾರಂಭಿಸಲು ಕಾರಣರಾದರು ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸದಸ್ಯೆ ಡಾ.ಪದ್ಮಿನಿ ನಾಗರಾಜು ಮಾತನಾಡಿ, ಸ್ಥಳೀಯ ಭಾಷೆಗಳಿಗೆ ಪುನರೋತ್ಥಾನಕ್ಕೆ ಕಾರಣವಾದ ಜೈನಧರ್ಮದ ತತ್ವಗಳು ಕೇವಲ ಜೈನಧರ್ಮೀಯರಿಗೆ ಮಾತ್ರ ಸೀಮಿತವಲ್ಲ. ಮೌಲ್ಯಗಳನ್ನು ಉಳಿಸಿಕೊಳ್ಳಲು ಯಾವುದರಲ್ಲಿ ನಾವು ನಿಯಂತ್ರಣ ಹೊಂದಿಬೇಕೆಂಬುದನ್ನು ಜೈನಧರ್ಮದಲ್ಲಿ ಹೇಳಲಾಗಿದೆ. ಬ್ರಹ್ಮಚರ್ಯ ಎಂದರೆ ಮದುವೆ ಆಗದೇ ಇರುವುದಲ್ಲ. ಪತ್ನಿ ಜೊತೆಗೆ ಸುಖಿಸುವುದಾಗಿದೆ. ಇಂದು ಯಾವ್ಯಾವ ಸನ್ಯಾಸಿಗಳು ಯಾವ ರೀತಿ ವರ್ತಿಸಿದ್ದಾರೆ ಎಂಬುದನ್ನು ಮಾಧ್ಯಮಗಳಲ್ಲಿ ನೋಡುವಂತಾಗಿದೆ. ಎಲ್ಲವನ್ನೂ ಬಿಟ್ಟು ಕಾವಿ ಧರಿಸಿದವರಿಗೆ ತಮ್ಮ ಕಾಮ ನಿಯಂತ್ರಣ ಮಾಡಿಕೊಳ್ಳಲಾಗುತ್ತಿಲ್ಲವೆಂದರೆ ಸಾಮಾನ್ಯರ ಬಗ್ಗೆ ಏನು ಹೇಳುವುದು ಎಂದು ವಿಷಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಹಂಪಿ ಕನ್ನಡ ವಿವಿ ಕುಲಪತಿ ಡಾ.ಸ.ಚಿ.ರಮೇಶ್ ಮಾತನಾಡಿ, ಜೈನಧರ್ಮ ನಮ್ಮ ನಾಡಿಗೆ ದೊಡ್ಡ ಕೊಡುಗೆ ನೀಡಿದೆ. ಕನ್ನಡ ಸಾಹಿತ್ಯ ಓದುವಾಗ ಜೈನಧರ್ಮದ ಮಾನವೀಯ ಮೌಲ್ಯಗಳನ್ನು ಅನಾವರಣಗೊಳ್ಳುತ್ತವೆ. ಜೈನಧರ್ಮವನ್ನು ಉನ್ನತ ಸ್ಥಾನದಲ್ಲಿ ಪರಿಗಣಿಸಲು ಕಾರಣ ಅದರಲ್ಲಿನ ಮಾನವೀಯ ಮೌಲ್ಯವಾಗಿದೆ. ಇಲ್ಲಿ ತ್ಯಾಗಕ್ಕೆ ಹೆಚ್ಚಿನ ಆದ್ಯತೆ ಇದ್ದು, ಬೋಗ ಜೀವನಕ್ಕೆ ಆಸ್ಪದವಿಲ್ಲ. ಎಲ್ಲಾ ಜೈನ ಕೃತಿಗಳಲ್ಲಿ ಮಾನವೀಯತೆ ಹಾಗೂ ಹೃದಯ ವೈಶಾಲ್ಯತೆ ಕಾಣಬಹುದು ಎಂದು ಹೇಳಿದರು.

ಬಳಿಕ ಜೈನಧರ್ಮಕ್ಕೆ ಸಂಬಂಧಿಸಿದಂತೆ ಪ್ರಾಚೀನ ಕನ್ನಡ ಸಾಹಿತ್ಯ ಹಾಗೂ ನಡುಗನ್ನಡ ಸಾಹಿತ್ಯದಲ್ಲಿ ಸಮಾಜಮುಖಿ ಚಿಂತನೆಗಳ ಕುರಿತಂತೆ ಹಲವು ವಿದ್ವಾಂಸರು ವಿಷಯ ಮಂಡಿಸಿದರು. ನಾಳೆಯೂ ವಿವಿಧ ಗೋಷ್ಠಿಗಳು ನಡೆಯಲಿದ್ದು, ನಾಳೆ (ಸೆ.13) ಸಂಜೆ 4ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಪ್ರಾಧ್ಯಾಪಕರು, ಅಧ್ಯಾಪಕರು ಸೇರಿದಂತೆ ಸಂಶೋಧಕರು ಈ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದಾರೆ. ಕನ್ನಡ ವಿವಿಯ ಕಾರ್ಯಕಾರಿ ಸಮಿತಿ ಸದಸ್ಯ ಪ್ರೊ.ಜಿ.ಸಿ.ರಾಜಣ್ಣ, ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿ ಡಾ.ತಾರಿಹಳ್ಳಿ ಹನುಮಂತಪ್ಪ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ.ಸಾಯಿನಾಥ್ ಮಲ್ಲಿಗೆಮಾಡು ಮತ್ತಿತರರು ಹಾಜರಿದ್ದರು.



ಮೈಸೂರು ನೂತನ ಮೇಯರ್ ಶಿವಕುಮಾರ್ ಅವರನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯ ಕೆ.ಜೆ.ರಮೇಶ್, ಎಸ್‌ಟಿ ಮೋರ್ಚಾದ ನಗರ ಪ್ರಧಾನ ಕಾರ್ಯದರ್ಶಿ ಕೃಷ್ಣಕುಮಾರ್ ನಾಯಕ, ಮುಖಂಡರಾದ ಸತೀಶ್‌ಕುಮಾರ್, ಸು.ಮುರಳಿ ಇದ್ದರು.



ಮೈಸೂರಿನ ಗೋಕುಲಂ ಹಾಗೂ ಬೃಂದಾವನ ಬಡಾವಣೆ ವಾರ್ಡ್ ನಂ.6ರ ಉದ್ಯಾನವನ ಅಭಿವೃದ್ಧಿಗೆ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಚಾಲನೆ ನೀಡಿದರು. ಈ ವೇಳೆ ಬಡಾವಣೆ ಹಿರಿಯ ನಿವಾಸಿಗಳಾದ ಚಕ್ರವರ್ತಿ, ಶರ್ಮಾ, ಇಂಜಿನಿಯರ್ ಆನಂದ್, ವೇಣುಗೋಪಾಲ್, ಜಯರಾಮ, ಶಶಿ, ಮುರಳಿ ಇನ್ನಿತರರು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರ ಪರಿಚಯ ಮಾಡುವ ಉದ್ದೇಶದಿಂದ ಯುವ ಬ್ರಿಗೇಡ್ ನಿರ್ಮಿತ 'ಕನ್ನಡ ತೇರು' ಸುತ್ತೂರು ಶ್ರೀಕ್ಷೇತ್ರಕ್ಕೆ ಆಗಮಿಸಿದಾಗ ಸಂಸ್ಥೆಯ ಮುಖ್ಯಸ್ಥರ ಉಪಸ್ಥಿತಿಯಲ್ಲಿ ಬರಮಾಡಿಕೊಳ್ಳಲಾಯಿತು. ಜೆಎಸ್‌ಎಸ್ ವಸತಿ ಶಾಲೆಯ 4000ಕ್ಕೂ ಹೆಚ್ಚು ಮಕ್ಕಳು ವಿಡಿಯೋ ಪ್ರದರ್ಶನವನ್ನು ವೀಕ್ಷಿಸಿದರು.



ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕ ಎಲ್.ನಾಗೇಂದ್ರ ಅವರನ್ನು ಮುಡಾ ಸದಸ್ಯ ನವೀನ್ ಕುಮಾರ್ ಮಲ್ಲಿಗೆ ಹಾರ ಹಾಕಿ ಶುಭ ಕೋರಿದರು. ಈ ವೇಳೆ ಯಶ್ವಂತ್, ಸುಜಿತ್, ಜೀವನ, ನವೀನ್ ಇನ್ನಿತರರಿದ್ದರು.

ಹೆಣ್ಣು ಮಕ್ಕಳು ಶಿಕ್ಷಣ ಕಲಿತರೆ ದೇಶದ ಪ್ರಗತಿ ಸಾಧ್ಯ

ಕಾಮಾಕ್ಷಿ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ॥ ರೂಪ ಪ್ರಕಾಶ್



ಮೈಸೂರು, ಸೆ. 12– ನಗರದ ಐವರಿ ಸಿಟಿ ವತಿಯಿಂದ ಪೀಪಲ್ಸ್ ಪಾರ್ಕ್‌ನ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಪ್ರೌಢಶಾಲಾ ಮಕ್ಕಳಿಗಾಗಿ ರೋಟರಿ ಚಿಲ್ಡ್ರನ್ಸ್ ಕ್ಲಬ್‌ನ ಉದ್ಘಾಟನೆ ಹಾಗೂ ಹದಿಹರೆಯದ ಸಮಸ್ಯೆಗಳು, ಹೆಣ್ಣು ಮಕ್ಕಳು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾಮಾಕ್ಷಿ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ॥ ರೂಪ ಪ್ರಕಾಶ್ ಅವರು, ಹೆಣ್ಣು ಮಕ್ಕಳು ಶಿಕ್ಷಣ ಕಲಿತರೆ ದೇಶ ತ್ವರಿತ ಪ್ರಗತಿ ಸಾಧ್ಯವಾಗುತ್ತದೆ. ಏಕೆಂದರೆ ಕುಟುಂಬ ಹಾಗೂ ಸಮಾಜವನ್ನು ನಡೆಸುವಲ್ಲಿ ಹೆಣ್ಣು ಮಕ್ಕಳ ಪಾತ್ರ ಬಹಳ ಮುಖ್ಯ ಆದ್ದರಿಂದ ಎಲ್ಲಾ ಹೆಣ್ಣು ಮಕ್ಕಳು ಶಿಕ್ಷಣವನ್ನು ಪಡೆಯುವುದು ಕಡ್ಡಾಯವಾಗಬೇಕು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಯರು ಕೀಳರಿಮೆ ಹಾಗೂ ಸಂಕೋಚವನ್ನು ಬಿಟ್ಟು ಶಿಕ್ಷಣವನ್ನು ಪಡೆದು ನಾಯಕತ್ವ ಗುಣಗಳನ್ನು ರೂಪಿಸಿಕೊಂಡು ಸಮಾಜದ ಉತ್ತಮ ಪ್ರಜೆಗಳಾಗಿ ಬದುಕಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ರೋಟರಿ ಐವರಿ ಸಿಟಿ ಅಧ್ಯಕ್ಷ ಎಂ.ಎನ್.ರಮೇಶ್, ಸಮಾಜದಲ್ಲಿ ಸಿಗುವ ಸೌಲಭ್ಯಗಳನ್ನು ವಿದ್ಯಾರ್ಥಿ ವೃಂದ ಬಳಸಿಕೊಂಡಲ್ಲಿ ಇದನ್ನು ಬಹಳ ಬೇಗ ಮುಂದುವರೆಯಬಹುದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಐವರಿ ಸಿಟಿಯ ಕಾರ್ಯದರ್ಶಿಯಾಗಿ ಮುತ್ತುಕುಮಾರನ್ ಸಹಾಯಕ ರಾಜ್ಯಪಾಲ ಎಸ್ ಬಾಲಚಂದರ್, ಮಾಜಿ ಸಹಾಯಕ ರಾಜ್ಯಪಾಲರಾದ ಸುನೀಲ್ ಎಲ್. ಬಾಳಿಗ, ಇಂಟ್ರ್ಯಾಕ್ಟ್ ಚೇರ್ಮನ್ ಅಧ್ಯಕ್ಷರಾದ ಶಬನಾ ಇಫ್ತೇಕರ್ ಉಪಸ್ಥಿತರಿದ್ದರು.

ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್‌ನಲ್ಲಿ ಕೆ.ಆರ್.ನಗರ ಕಿಂಗ್ಸ್ ಚಾಂಪಿಯನ್



ಮೈಸೂರು,ಸೆ.12(ಎಂಕೆ)–ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಹಾರ್ಡ್ವಿಕ್ ಪ್ರೌಢಶಾಲೆ ಮೈದಾನದಲ್ಲಿ ನಡೆದ 'ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್‌ನಲ್ಲಿ 'ಕೆ.ಆರ್.ನಗರ ಕಿಂಗ್ಸ್' ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. ತುಮಕೂರಿನ ಸಿದ್ದಗಂಗಾ ತಂಡದ ವಿರುದ್ಧ ನಡೆದ ಫೈನಲ್ ಪಂದ್ಯದಲ್ಲಿ 32–35, 30–35 ನೇರ ಸೆಟ್‌ಗಳ ಮೂಲಕ ಕೆ.ಆರ್.ನಗರ ಕಿಂಗ್ಸ್ ತಂಡ ಚಾಂಪಿಯನ್ ಆಯಿತು. ಗೆಲುವಿಗಾಗಿ ತೀವ್ರ ಪೈಪೋಟಿ ನಡೆಸಿದ ಸಿದ್ದಗಂಗಾ ತಂಡ ರನ್ನರ್ ಅಪ್ ಆಯಿತು. ಬಳಿಕ ವಿಜೇತ ತಂಡಕ್ಕೆ ಮಹಾರಾಜ ಬಾಲ್ ಬ್ಯಾಡ್ಮಿಂಟನ್ ಕ್ಲಬ್ ಅಧ್ಯಕ್ಷ ಬಿ.ಟಿ.ಲಕ್ಷೀಶ ಟ್ರೋಫಿ ವಿತರಿಸಿದರು. ಮೈಸೂರು ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಕಾರ್ಯದರ್ಶಿ ಗೌತಮ್, ಮಹದೇವ್, ನವೀನ್, ರಾಜಶೇಖರ್ ಮತ್ತಿತರರಿದ್ದರು.

ಒತ್ತುವರಿ ತೆರವಿನಲ್ಲಿ ಯಾವ ತಾರತಮ್ಯವಿಲ್ಲ

ಮುಖ್ಯಮಂತ್ರಿ ಬೊಮ್ಮಾಯಿ ಸ್ಪಷ್ಟನೆ

ಬೆಂಗಳೂರು,ಸೆ.12(ಕೆಎಂಶಿ)–ಒತ್ತುವರಿ ತೆರವುಗೊಳಿಸುವ ಕಾರ್ಯಾಚರಣೆಯಲ್ಲಿ ಯಾವುದೇ ಭೇದ ಭಾವ ಮಾಡುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕಾಲುವೆ ಮೇಲೆ ಕಟ್ಟಡ, ಮನೆ ಕಟ್ಟಿರುವವರು, ಕಾಲುವೆಯಲ್ಲಿ ನೀರು ಹರಿಸಲು ತೊಂದರೆ ಮಾಡಿದ್ದಾರೆ, ಕೆಲವರು ರಾಜಕಾಲುವೆಯನ್ನು ಮುಚ್ಚಿದ್ದಾರೆ. ಮಳೆ ನೀರು ಹರಿದು ಹೋಗಲು ಅಡ್ಡಿಯಾಗಿದ್ದರೆ, ಅಂತಹ ಒತ್ತುವರಿ ತೆರವುಗೊಳಿಸಲು ಸೂಚನೆ ನೀಡಲಾಗಿದೆ ಎಂದರು.

ಪ್ರವಾಹ ಬಂದಾಗ ಐಟಿ ಬಿಟಿಯವರು ಸೇರಿದಂತೆ ಎಲ್ಲರಿಗೂ ತೊಂದರೆಯಾಗಿದೆ, ಜನಸಾಮಾನ್ಯರು, ಕೆಳಹಂತದ ಮನೆಗಳಿಗೂ ತೊಂದರೆಯಾಗಿದೆ. ಇವುಗಳನ್ನು ತೆರವುಗೊಳಿಸುವ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ಎಂದರು.

ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗಿ ನಿರ್ದೇಶನ ಪಡೆಯಲಾಗಿದೆ. ನ್ಯಾಯಾಲಯದಲ್ಲಿಯೂ ಗಂಭೀರವಾಗಿ ಇವುಗಳ ಮಾಹಿತಿಯನ್ನು ನೀಡಲಾಗುವುದು. ನ್ಯಾಯಾಲಯವೂ ಪ್ರವಾಹದ ಪ್ರಕರಣದಲ್ಲಿ ನಿರ್ದೇಶನಗಳನ್ನು ನೀಡಿದೆ. ಈ ಬಾರಿ ದೊಡ್ಡ ಪ್ರಮಾಣದಲ್ಲಿ ಅತಿಕ್ರಮಣ ತೆರವುಗೊಳಿಸಲಾಗುವುದು ಎಂದರು. ಪಿ.ಎಸ್.ಐ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಬಿಜೆಪಿ ಶಾಸಕರು ಮಾತನಾಡಿರುವ ವೀಡಿಯೊ ಬಿಡುಗಡೆಯಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಆಡಿಯೋನೋ, ವೀಡಿಯೋನೋ ಗೊತ್ತಿಲ್ಲ. ಅದನ್ನು ಪರಿಶೀಲಿಸಲಾಗುವುದು. ಹಾಗೇನಾದರೂ ತಪ್ಪು ಕಂಡುಬಂದಲ್ಲಿ ತನಿಖೆಗೆ ಆದೇಶಿಸಲಾಗುವುದು ಎಂದರು.



ಬಿಲ್ಲವ ಸಂಘ ಸುವರ್ಣನಗರದಲ್ಲಿ ಹಮ್ಮಿಕೊಂಡಿದ್ದ ನಾರಾಯಣ ಗುರು ಜಯಂತಿಯಲ್ಲಿ ವೈದ್ಯರಾದ ಡಾ.ರವಿಕುಮಾರ್, ಡಾ.ಶ್ವೇತ ಆರ್.ಪೂಜಾರಿ, ಡಾ.ನಿವೇದಿತ, ಡಾ.ಶಿರೋನ ಡಾ.ಎ.ಪಿ.ಬಾಲರಾಜ್, ಡಾ.ಅವಿನಾಶ್, ಡಾ.ಕೌಶಿಕ್, ಡಾ.ಸುಜಿತ.ಚಂದ್ರಹಾಸ್ ಸೇರಿದಂತೆ 18 ವೈದ್ಯರನ್ನು ಗೌರವಿಸಿ, ಸನ್ಮಾನಿಸಲಾಯಿತು. ವಿಖ್ಯಾತನಂದ ಸ್ವಾಮೀಜಿ, ಎಂ.ಕೆ.ಪೋತರಾಜ್, ಸದಾಶಿವಪೂಜಾರಿ, ಮೋಹನ್‌ದಾಸ್ ಪಂಜಾಡಿ, ಬಾಲಕೃಷ್ಣ ಕಾಪು, ಸುನಿಲ್‌ಕುಮಾರ್ ಚಿತ್ರದಲ್ಲಿದ್ದಾರೆ

ಕಾನ್ವೆಂಟ್‌ನಲ್ಲಿ ಕೆಲಸದ ಆಮಿಷ ತೋರಿ ಗೃಹಿಣಿಗೆ 7.49 ಲಕ್ಷ ರೂ. ವಂಚನೆ

● ಕ್ರೆಡಿಟ್ ಕಾರ್ಡ್ ಶುಲ್ಕದ ಹೆಸರಲ್ಲಿ ವೈದ್ಯೆಗೆ 94,818 ರೂ ಪಂಗನಾಮ
● ಇದೆಲ್ಲಾ ಆನ್‌ಲೈನ್ ಅವಾಂತರ

ಮೈಸೂರು, ಸೆ.12– ಕಾನ್ವೆಂಟ್‌ನಲ್ಲಿ ಕೆಲಸ ಕೊಡಿಸುವುದಾಗಿ ವಾಟ್ಸಪ್ ಸಂದೇಶ ರವಾನಿಸಿ ಆನ್‌ಲೈನ್ ಮೂಲಕ ಗೃಹಿಣಿಗೆ 7.49 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಜೆ.ಪಿ.ನಗರ ಜನತಾ ಕಾಲೋನಿ ನಿವಾಸಿ ವರ್ಣಿತಾ (27) ವಂಚನೆಗೊಳಗಾದವರಾಗಿದ್ದು, ನಿರ್ಮಲಾ ಕಾನ್ವೆಂಟ್‌ನಲ್ಲಿ ಕೆಲಸ ಕೊಡಿಸುವುದಾಗಿ ಇವರ ವಾಟ್ಸಪ್‌ಗೆ ಸಂದೇಶ ರವಾನೆಯಾಗಿದೆ. ನಂತರ ಕೆಲಸ ಸಿಗಬೇಕಾದರೆ ಕೆಲವೊಂದು ಟಾಸ್ಕ್‌ಗಳನ್ನು ಮಾಡಬೇಕಾಗುತ್ತದೆ ಎಂದು ವಿವಿಧ ಹಂತಗಳಲ್ಲಿ ಇವರಿಂದ 7.49 ಲಕ್ಷ ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕ್ರೆಡಿಟ್ ಕಾರ್ಡ್ ಶುಲ್ಕ ಕಟ್ಟಬೇಕೆಂದು ತಿಳಿಸಿ ವೈದ್ಯೆಯೊಬ್ಬರಿಗೆ ಆನ್‌ಲೈನ್ ಮೂಲಕ 94,818 ರೂ. ವಂಚಿಸಲಾಗಿದೆ. ಶಕ್ತಿನಗರ ನಿವಾಸಿ ಡಾ.ಎನ್.ಎ.ಅನಿತಾ ರಾಣಿ (42)ಅವರಿಗೆ 6370606260 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಕ್ರೆಡಿಟ್ ಕಾರ್ಡ್ ಶುಲ್ಕ ಕಟ್ಟಬೇಕು. ಇಲ್ಲದಿದ್ದರೆ ನಿಮ್ಮ ಬ್ಯಾಂಕ್ ಖಾತೆಯಿಂದ 50,598 ರೂ. ಕಡಿತಗೊಳ್ಳುತ್ತದೆ. ಅದನ್ನು ತಪ್ಪಿಸಲು ಈ ಲಿಂಕ್ ಅನ್ನು ಓಪನ್ ಮಾಡಿ ಎಂದು ಒಂದು ಲಿಂಕ್ ಕಳುಹಿಸಿದ್ದಾನೆ. ವೈದ್ಯೆ ಆ ಲಿಂಕ್ ಮೇಲೆ ಕ್ಲಿಕ್ ಮಾಡಿ ಸಂದೇಶಗಳನ್ನು ಪಾಲಿಸುತ್ತಿದ್ದಂತೆಯೇ ಅವರ ಬ್ಯಾಂಕ್ ಖಾತೆಯಿಂದ 94,818 ರೂ. ಕಡಿತಗೊಂಡಿದೆ. ಈ ಎರಡೂ ಪ್ರಕರಣಗಳು ಮೈಸೂರು ಸೆನ್ ಠಾಣೆಯಲ್ಲಿ ದಾಖಲಾಗಿದೆ.

ಸರ್ಕಾರಿ ಶಾಲೆಗಳಿಗೆ ಉಚಿತವಾಗಿ ಶಿಕ್ಷಕಿಯರ ನಿಯೋಜನೆ

ಮೈಸೂರು,ಸೆ.12–ಮೈಸೂರಿನ ಕಾವೇರಿ ಅಭ್ಯುದಯ ಪ್ರತಿಷ್ಠಾನ ಟ್ರಸ್ಟ್‌ನ ಆಶೀರ್ವಾದ್ ಮಾಂಟೇಸ್ಸರಿ ಸ್ಕೂಲ್ ಟೀಚರ್ಸ್ ಟ್ರೈನಿಂಗ್ ಇನ್ಸಿಟ್ಯೂಟ್ ವತಿಯಿಂದ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಉಚಿತವಾಗಿ ಶಿಕ್ಷಕಿಯರನ್ನು ನಿಯೋಜನೆ ಮಾಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಎಸ್.ಬಸವರಾಜು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ಮಕ್ಕಳಿಗಾಗಿ ಮಕ್ಕಳ ಮನೆ ಪ್ರಾರಂಭಿಸಿ, ತಮ್ಮ ಕಾಲೇಜಿನಲ್ಲಿ ತರಬೇತಿ ಪಡೆದು ಉತ್ತೀರ್ಣರಾದ ವಿದ್ಯಾರ್ಥಿನಿಯರನ್ನು ಅಲ್ಲಿಗೆ ನಿಯೋಜನೆ ಮಾಡಲಾಗುವುದು ಹಾಗೂ ಅದರ ನಿರ್ವಹಣೆಯ ಹೊಣೆಯನ್ನು ಕೂಡ ವಹಿಸಿಕೊಳ್ಳಲಾಗುವುದು ಎಂದರು.


ಶಾಲೆಗಳಲ್ಲಿ ದಾಖಲಾಗುವ ವಿದ್ಯಾರ್ಥಿಗೆ ಒಂದು ಜೊತೆ ಯೂನಿಫಾರಂ, ಒಂದು ಜೊತೆ ಬ್ಲಾಕ್ ಶೂ, ಬೆಲ್ಟ್, ಬ್ಯಾಗ್, ಪುಸ್ತಕಗಳನ್ನು ನೀಡಲಾಗುವುದು. ಪ್ರಾಥಮಿಕ ಶಾಲೆಗೆ ಐವರು ಹಾಗೂ ಪ್ರೌಢಶಾಲೆಗೆ ಮೂವರು ಶಿಕ್ಷಕಿಯನ್ನು ಉಚಿತವಾಗಿ ನಿಯೋಜಿಸಲಾಗುವುದು. ಪ್ರಾಥಮಿಕ ಶಾಲಾ ಶಿಕ್ಷಕಿಯರಿಗೆ 5 ಸಾವಿರ ರೂ., ಪ್ರೌಢಶಾಲಾ ಶಿಕ್ಷಕಿಯರಿಗೆ 6 ಸಾವಿರ ರೂ. ಎಸ್‌ಡಿಎಂಸಿಯವರು ಗುರುತಿಸಿ ನೇಮಿಸಿಕೊಟ್ಟ 40 ವರ್ಷದೊಳಗಿನ ವಿಧವೆಯನ್ನು ಆ ಶಾಲೆಗಳಿಗೆ ಆಯಾವಾಗಿ ನೇಮಿಸಿಕೊಂಡು ಪ್ರತಿ ತಿಂಗಳು 4 ಸಾವಿರ ರೂ. ಗೌರವಧನ ನೀಡಲಾಗುವುದು ಎಂದು ಹೇಳಿದರು.

ಇದಕ್ಕಾಗಿ 18ರಿಂದ 40 ವರ್ಷದವರೆಗಿನ ವಯೋಮಿತಿಯಲ್ಲಿರುವ ವಿದ್ಯಾರ್ಥಿನಿಯರು, ಶಿಕ್ಷಕಿಯರು ಹಾಗೂ ಗೃಹಿಣಿಯರಿಗೆ ತಮ್ಮ ಕಾಲೇಜಿನಲ್ಲೇ ತರಬೇತಿ ನೀಡಲಾಗುವುದು. ವಿಧವೆಯರು ವಿವಿಧ ಕಾರಣಗಳಿಂದ ಆರ್ಥಿಕ ಸಮಸ್ಯೆ ಎದುರಿಸುತ್ತಿರುವ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು ಎಂದ ಅವರು ತಮ್ಮ ಸಂಸ್ಥೆಯು ಸರ್ಕಾರಿ ಶಾಲೆಗಳಿಗೆ ಶಿಕ್ಷಕಿಯರನ್ನು ನಿಯೋಜಿಸಲು ಹಾಗೂ ಮಕ್ಕಳ ಮನೆ ಪ್ರಾರಂಭಿಸಲು ಸಹಕರಿಸುವಂತೆ ಶಿಕ್ಷಣ ಇಲಾಖೆ ಉಪನಿರ್ದೇಶಕರು ಜಿಲ್ಲೆಯ ಎಲ್ಲಾ ಬಿಇಓ ಹಾಗೂ ಬಿಆರ್‌ಸಿ ಅವರಿಗೆ ಜ್ಞಾಪನಾ ಪತ್ರ ರವಾನಿಸಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆ.ಸಿ.ನಾಗೇಶ್ ಉಪಸ್ಥಿತರಿದ್ದರು. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊ: 9663511418 ಅನ್ನು ಸಂಪರ್ಕಿಸಬಹುದು ಎಂದು ಕೋರಲಾಗಿದೆ.

ನಾಳೆ ನೀರು ವ್ಯತ್ಯಯ

ಮೈಸೂರು, ಸೆ.12–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಮೇಳಾಪುರ ಮತ್ತು ರಮ್ಮನಹಳ್ಳಿ ಯಂತ್ರಾಗಾರಗಳಿಗೆ ವಿದ್ಯುತ್ ವ್ಯತ್ಯಯದ ಹಿನ್ನೆಲೆಯಲ್ಲಿ ಸೆ.14ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಪಾಲಿಕೆ ವಾರ್ಡ್ ನಂ.9ರಿಂದ 16, 28ರಿಂದ 39, 52,53 ವಾರ್ಡ್‌ಗಳಿಗೆ ಸಂಬಂಧಿಸಿದ ಬಡಾವಣೆಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜಕುಮಾರ್ ರಸ್ತೆಗೆ ಹೊಂದಿಕೊಂಡಿರುವ ಬಡಾವಣೆಗಳಾದ ಯರಗನಹಳ್ಳಿ, ಸಿದ್ಧಾರ್ಥನಗರ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯನಗರ, ಕ್ಯಾತನಮಾರನಹಳ್ಳಿ ಸೇರಿದಂತೆ ಇತರೆ ಬಡಾವಣೆಗಳ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.



ವಿಕಲಚೇತನರ ಪ್ರತಿಭೆ ಹೊರತರುವುದು ನಮ್ಮೆಲ್ಲರ ಜವಾಬ್ದಾರಿಯಾಗಲಿ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅಭಿಮತ

ಮೈಸೂರು,ಸೆ.12(ಎಂಟಿವೈ)– ವಿಶಿಷ್ಟ ಪ್ರತಿಭೆ ಹೊಂದಿರುವ ವಿಕಲಚೇತನರ ಪ್ರೋತ್ಸಾಹಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಟಿ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಪುರಭವನದಲ್ಲಿ ಕರ್ನಾಟಕ ಜನಪರ ವೇದಿಕೆ ಸಹಯೋಗದಿಂದ ನೂತನವಾಗಿ ಸ್ಥಾಪನೆಗೊಂಡಿರುವ ವಿಶೇಷಚೇತನರ ಸಾಂಸ್ಕೃತಿಕ ಕಲಾ ಪರಿಷತ್ ಚಾರಿಟಬಲ್ ಟ್ರಸ್ಟ್‌ನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ವಿಕಲಚೇತನರನ್ನು ಪೋಷಣೆ ಮಾಡುಲು ಹೃದಯವೈಶಾಲ್ಯತೆ ಬಹಳ ಮುಖ್ಯ. ಅನೇಕ ಸವಾಲುಗಳ ಮಧ್ಯೆ ವಿಕಲಚೇತನರನ್ನು ಪೋಷಣೆ ಮಾಡುವುದು ಅಷ್ಟು ಸುಲಭದ ಮಾತಲ್ಲ. ಒಂದು ಸಂಸ್ಥೆಯನ್ನು ಸ್ಥಾಪಿಸುವುದು ಮುಖ್ಯವಲ್ಲ. ಆ ಸಂಸ್ಥೆಗೆ ಯಾವುದೇ ಸಮಸ್ಯೆ ಎದುರಾದರೂ ಅದನ್ನು ಸರಿಪಡಿಸಿಕೊಂಡು ತನ್ನ ಉದ್ದೇಶ ಮತ್ತು ಜವಾಬ್ದಾರಿ ಮಾರ್ಗದಲ್ಲಿ ಸಾಗಬೇಕು ಎಂದು ಸಲಹೆ ನೀಡಿದರು.

ವಿಶೇಷಚೇತನರು ಸರ್ಕಾರದ ನೆರವಿನೊಂದಿಗೆ ಚಿಲ್ಲರೆ ಅಂಗಡಿಗಳನ್ನು ಸ್ಥಾಪಿಸಿಕೊಂಡು ಸ್ವಾಭಿಮಾನದ ಬದುಕು ನಡೆಸುತ್ತಿದ್ದಾರೆ. ಅಂಗವೈಕಲ್ಯತೆ ಯಾರಿಗೂ ಹೊರೆಯಾಗಬಾರದು. ಪ್ರತಿಯೊಬ್ಬ ವಿಶೇಷಚೇತನರು ತಮ್ಮ ಸ್ವಂತ ಸಾಮರ್ಥ್ಯದೊಂದಿಗೆ ಜೀವನ ನಡೆಸಬೇಕು. ಆ ನಿಟ್ಟಿನಲ್ಲಿ ನಾನು ಯಾವಾಗಲೂ ನಿಮ್ಮೊಂದಿಗೆ ಸಹಕರಿಸುತ್ತೇನೆ ಎಂದು ಭರವಸೆ ನೀಡಿದರು.



ಟ್ರಸ್ಟಿನ ರಾಜ್ಯಾಧ್ಯಕ್ಷ ಈಶ್ವರ್ ಮಾತನಾಡಿ, ವಿಶೇಷಚೇತನರ ಬಗ್ಗೆ ಅನುಕಂಪಕ್ಕಿಂತ ಸಹಕಾರ ಬಹಳ ಮುಖ್ಯ. ನಮ್ಮ ಅನೇಕ ವಿಶೇಷಚೇತನರಲ್ಲಿ ಅಸಾಧಾರಣ ಪ್ರತಿಭೆ ಇದೆ. ಅದನ್ನು ಹೊರ ಜಗತ್ತಿಗೆ ತೋರಿಸಲು ಈ ಟ್ರಸ್ಟ್ ಒಂದು ಉತ್ತಮ ವೇದಿಕೆಯಾಗಿ ತನ್ನ ಕಾರ್ಯನಿರ್ವಹಿಸಲಿದೆ. ಗ್ರಾಮೀಣ ಭಾಗದಲ್ಲಿ ಅನೇಕ ಕಲಾವಿದರಿದ್ದು, ಅವರಿಗೆ ಸೂಕ್ತ ತರಬೇತಿ ದೊರೆತರೆ, ಆ ಮೂಲಕ ಅವರು ತಮ್ಮ ಕನಸನ್ನು ನನಸು ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಇದಕ್ಕೆ ನೆರವಾಗಲು ಸರ್ಕಾರ ಮತ್ತು ಸಂಘ ಸಂಸ್ಥೆಗಳು ಮುಂದಾಗಬೇಕು ಎಂದು ಮನವಿ ಮಾಡಿದರು. ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ಸೋಮೇಗೌಡ, ಅಕ್ಕಮಹಾದೇವಿ ಟ್ರಸ್ಟಿನ ಸಂಚಾಲಕಿ ಭುವನೇಶ್ವರಿ, ವೃತ್ತಿ ಚಾರಿಟಬಲ್ ಟ್ರಸ್ಟಿನ ಅಧ್ಯಕ್ಷ ಅನಂತ ನಾರಾಯಣ ಇನ್ನಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ (ಹೆಂಡತಿಗೆ)	:	ಕೆಲಸದವಳನ್ನು ಹೊರ ಹಾಕು
ಹೆಂಡತಿ	:	ಯಾಕ್ರೀ ಏನಾಯ್ತು?
ಗಂಡ	:	ಆಕೆ ಕಳ್ಳತನ ಮಾಡಿದ್ದಾಳೆ
ಹೆಂಡತಿ	:	ಏನನ್ನು?
ಗಂಡ	:	ಆ ದಿನ ನಾನು–ನೀನು ಹೋಟೆಲಿಗೆ ಹೋಗಿದ್ದಾಗ ತಂದ ಜಗ್ಗು, 15 ಪ್ಲೇಟುಗಳನ್ನು!

ಮೈಸೂರು ಮಿತ್ರ

ಮಂಗಳವಾರ, 13 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕಾರ್ಯ ಮಾಡುವಾಗ ದಕ್ಷನಾಗಿರು. ಮಾತನಾಡುವಾಗ ಎಚ್ಚರದಿಂದಿರು. ಯೋಚಿಸುವಾಗ ದೂರದೃಷ್ಟಿಯಿಂದಿರು – ಕಾಲ್‌ಮಾರ್ಕ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹಾಲು ಕುಡಿದು ಹಾಗಲಕಾಯಿ ತಿಂದಂತೆ

ನಿಮ್ಮ ಪತ್ರಗಳು

ಗುಂಡ್ಲುಹೊಳೆಗೆ ಈ ಬಾರಿ ಜೀವಕಳೆ....!?



ಮಾನ್ಯರೆ,

ಈ ಬಾರಿ ರಾಜ್ಯಾದ್ಯಂತ ಆಗುತ್ತಿರುವ ಭಾರೀ ಮಳೆಯಿಂದಾಗಿ ಕೆರೆ ಕಟ್ಟೆಗಳೆಲ್ಲಾ ತುಂಬಿ ತುಳುಕುತ್ತಿವೆ. ಇದರಿಂದ ಜನರಿಗೆ ಸಾಕಷ್ಟು ಹಾನಿಯೂ ಉಂಟಾಗಿದೆ.

ಸದಾ ಬರದಿಂದಾಗಿ ಕಂಗೆಟ್ಟಿದ್ದ ನಮ್ಮ ಚಾಮರಾಜನಗರ ಜಿಲ್ಲೆಯ ಜನತೆಯಂತೂ ಈ ಸಲದ ಮಳೆಗೆ ಭಾರೀ ತತ್ತರಿಸಿ ಹೋಗಿದ್ದಾರೆ...!

ಗುಂಡ್ಲುಪೇಟೆ ತಾಲೂಕಿನಲ್ಲೂ ಸಹ ನಿರಂತರ ಸುರಿದ ಮಳೆಯಿಂದಾಗಿ ಹಲವು ಕೆರೆ ಕಟ್ಟೆಗಳು ತುಂಬಿ ಕೋಡಿ ಬಿದ್ದು, ಹರಿಯುತ್ತಿವೆ. ಜನರೆಲ್ಲಾ ಉತ್ಸಾಹದಿಂದ ತುಂಬಿದ ಕೆರೆ ಕಟ್ಟೆಗಳನ್ನು ಗುಂಪು ಗುಂಪಾಗಿ ಹೋಗಿ ನೋಡಿ ಬಂದು ಸಂಭ್ರಮಿಸುತ್ತಿದ್ದಾರೆ. ಕುತೂಹಲ ತಡೆಯಲಾರದೆ ನಾನು ಸಹ ನಮ್ಮ ಹೆಮ್ಮೆಯ "ಗುಂಡ್ಲು"ವಿನ ಉಗಮ ಸ್ಥಳವಾದ ಹಂಗಳ ಬಳಿಯ ಗೋಪಾಲಸ್ವಾಮಿ ಬೆಟ್ಟದ ತಪ್ಪಲಿನ "ಹಿರಿಕೆರೆ"ಗೆ ಭೇಟಿ ಕೊಟ್ಟು ಬಂದೆ. ಅಬ್ಬಾಬ್ಬ ಅದ್ಭುತ...! ಆ ಪ್ರಕೃತಿಯ ಸೌಂದರ್ಯದ ಸೊಬಗನ್ನು ವರ್ಣಿಸಲಾಗದು.

ಆ ನೀರಿನ ಜುಳು ಜುಳು ನಿನಾದಕ್ಕಂತೂ ಮನ ಸೋಲದವರೇ ಇಲ್ಲ. ಆ ನೀರಿನ ಮೊರೆತದ ರಭಸವಂತೂ ನೋಡುಗರ ಕಣ್ಮನ ಸೆಳೆದು ರೋಮಾಂಚನಗೊಳಿಸಿ ಬಿಡುತ್ತದೆ. ಪ್ರಕೃತಿಯ ಈ ವೈಭೋಗಕ್ಕೆ ಯಾರ ಮನ ತಾನೇ ಸೋಲುವುದಿಲ್ಲ ಹೇಳಿ...!?

ಈ ಬಾರಿ ಆದ ಮಳೆಯಿಂದಾಗಿ ನಮ್ಮ ತಾಲೂಕಿನ ಸಾಕಷ್ಟು ಕೆರೆಗಳು ತುಂಬಿ ಕೋಡಿ ಬಿದ್ದಿವೆ. ಇದನ್ನು ಕಂಡು ನಿಜಕ್ಕೂ ಒಂದು ಕಡೆ ಸಂತೋಷವಾಗುತ್ತಿದೆ. ಜೊತೆ ಜೊತೆಗೆ ಅಷ್ಟೇ ಬೇಸರವು ಸಹ, ಕೋಡಿಬಿದ್ದ ನೀರು ಕೆಲವು ರೈತರ ಜಮೀನುಗಳಿಗೆ ನುಗ್ಗಿ ಅವರು ಬೆಳೆದ ಬೆಳೆಗಳಿಗೆ ಹಾನಿ ಉಂಟುಮಾಡಿದೆ. ಇದನ್ನು ಹೊರತುಪಡಿಸಿ ಉಳಿದಂತೆ ತಾಲೂಕಿನಾದ್ಯಂತ ಸಂಭ್ರಮವೋ ಸಂಭ್ರಮ. ಬರದ ನಾಡಿಗೆ ಈಗ ಭಗೀರಥ ಬರಬೇಕಿಲ್ಲ ಬದಲಾಗಿ ತಾಲೂಕಿನ ಯುವಕರೆಲ್ಲ ಬರಿ "ಜಲಯೋಧರಾದರಷ್ಟೆ" ಸಾಕು. ಬತ್ತಿ ಹೋದ ಆ ಗುಂಡ್ಲು ಹೊಳೆಯನ್ನು ಪ್ರಕೃತಿಯ ಸಹಕಾರದೊಂದಿಗೆ ಮತ್ತೊಮ್ಮೆ ಹರಿಸಿ ಬಿಡಬಹುದು. ಏಕೆಂದರೆ ಈ ಬಾರಿ ನಮ್ಮ ಹೆಮ್ಮೆಯ ಗುಂಡ್ಲುಹೊಳೆಯ ಅಭಿಯಾನಕ್ಕೆ ಸ್ವತಃ ಮಳೆರಾಯನೇ ಕೈ ಜೋಡಿಸಿ ನಿಂತಿದ್ದಾನೆ. ಇದಂತೂ ಇಡೀ ತಾಲೂಕಿನ ಜನರ ಮುಖದಲ್ಲಿ ಮತ್ತಷ್ಟು ಮಂದಹಾಸ ಮೂಡಿಸಿ ಬಿಟ್ಟಿದೆ.

ವರುಣನ ಅವಕೃಪೆಯಿಂದಾಗಿ ಗುಂಡ್ಲುಪೇಟೆ ತಾಲೂಕಿನ ಅಸ್ಮಿತೆಯಂತಿದ್ದ "ಗುಂಡ್ಲುಹೊಳೆ" ಎಷ್ಟೋ ವರ್ಷಗಳಿಂದ ತನ್ನ ಇರುವಿಕೆಯನ್ನು ಕಳೆದುಕೊಂಡು ನಶಿಸಿ ಹೋಗುವ ಹಂಚಿನಲ್ಲಿದ್ದು ಅದು ಈ ಬಾರಿಯಾದರೂ ವರುಣನ ಕೃಪೆಯಿಂದ ಬೇಗ ಭರ್ತಿಯಾಗಿ ವರ್ಷಪೂರ್ತಿ ತುಂಬಿ ಹರಿಯುವಂತಾಗಲಿ. ಹಾಗೆಯೇ ನಮ್ಮ ತಾಲೂಕಿಗಿರುವ ನೀರಿನ ಬವಣೆಯನ್ನು ಅದು ಈ ಮೂಲಕ ನೀಗಿಸುವಂತಾಗಲಿ ಎಂಬುದು ನನ್ನಂತಹ ಸಾಕಷ್ಟು ಜನರ ಕಳಕಳಿ ಆಶಯ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.

ನಾರಾಯಣ ಶಾಸ್ತ್ರಿ ರಸ್ತೆ ಡಾಂಬರೀಕರಣಕ್ಕೆ ಮನವಿ

ಮಾನ್ಯರೆ,

ಮೈಸೂರು ನಗರಪಾಲಿಕೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಬಹುತೇಕ ರಸ್ತೆಗಳು ಹಳ್ಳ ಕೊಳ್ಳಗಳು ಅಪಾಯ ಗುಂಡಿಗಳಿಂದ ಕೂಡಿದೆ. ರಸ್ತೆಯಲ್ಲಿ ವಾಹನ ಸವಾರರು ಹರಸಾಹಸ ಪಡಬೇಕಾಗಿದೆ. ಪ್ರತಿನಿತ್ಯ ರಸ್ತೆ ಅಪಘಾತಗಳಾಗುತ್ತಿವೆ. ಅದರಂತೆಯೇ ನಾರಾಯಣ ಶಾಸ್ತ್ರಿ ರಸ್ತೆ, ಸಿದ್ದಪ್ಪ ಸ್ಕ್ವೇರ್ ಬಳಿ ಭಾರೀ ಅಪಾಯದ ಗುಂಡಿಗಳು ವಾಹನ ಸವಾರರ ಅಪಘಾತಕ್ಕೆ ತೆರೆದ ಬಾಗಿಲಿನಂತಿದೆ. ನಾರಾಯಣ ಶಾಸ್ತ್ರಿ ರಸ್ತೆಯ ಡಾಂಬರೀಕರಣಕ್ಕೆ ಜನಪ್ರತಿನಿಧಿಗಳು, ಅಧಿಕಾರಿಗಳು ಗುದ್ದಲಿ ಪೂಜೆ ನೆರವೇರಿಸಿ ತಿಂಗಳುಗಟ್ಟಲೇ ಕಳೆದರೂ ಇಲ್ಲಿಯವರೆಗೆ ಯಾವುದೇ ರಸ್ತೆಯ ಕಾಮಗಾರಿಯನ್ನು ಕೈಗೊಳ್ಳದ ನಗರಪಾಲಿಕೆಯ ಅಧಿಕಾರಿಗಳ ಕಾರ್ಯವೈಖರಿ ಬಗ್ಗೆ ನಾಗರಿಕರಿಗೆ ಬೇಸರ ತಂದಿದೆ. ಹೆರಿಗೆ ಆಸ್ಪತ್ರೆ, ಶಾಲಾ ಕಾಲೇಜಿಗೆ ಈ ರಸ್ತೆಯ ಮೂಲಕವೇ ಪ್ರತಿನಿತ್ಯ ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು ಹೆಚ್ಚಾಗಿ ಸಂಚರಿಸುತ್ತಾರೆ. ಹೆಚ್.ಡಿ.ಕೋಟೆ ಮಾನಂದವಾಡಿ ಮುಖ್ಯರಸ್ತೆಯೂ ಸಹ ಇದಾಗಿದ್ದು, ನೂರಾರು ಬಸ್‌ಗಳು, ಸಾವಿರಾರು ಭಾರೀ ವಾಹನಗಳು ಸಂಚರಿಸುವ ರಸ್ತೆಯಾಗಿದೆ. ಇನ್ನೊಂದು ವಾರದಲ್ಲಿ ನಗರಪಾಲಿಕೆ ನಾರಾಯಣ ಶಾಸ್ತ್ರಿ ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಾರಂಭಿಸದಿದ್ದರೆ ರಸ್ತೆಯಲ್ಲೇ ಗಿಡ ನೆಡುವ ಕಾರ್ಯಕ್ರಮ, ರಸ್ತೆ ತಡೆ ಹಂತ ಹಂತವಾಗಿ ನಾನಾ ಪ್ರತಿಭಟನೆ ಸ್ವರೂಪ ಹೆಚ್ಚಿಸಬೇಕಾಗುತ್ತದೆ.

–ಅಜಯ್ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ, ಮೈಸೂರು

ದುರಸ್ತಿ ಕಾಣದ ಅಶೋಕ ವೃತ್ತದ ಬಸ್ ನಿಲ್ದಾಣ

ಮಾನ್ಯರೆ,



ಮೈಸೂರಿನ ಅಶೋಕ ವೃತ್ತ, ಬುದ್ಧ ವಿಹಾರ ರಸ್ತೆ ಹಾಗೂ ಕಾಳಿದಾಸ ರಸ್ತೆಯನ್ನು ದುರಸ್ತಿ ಮಾಡಲು ಕ್ಷೇತ್ರದ ಶಾಸಕರು, ಇಬ್ಬರು ಪಾಲಿಕೆ ಸದಸ್ಯರು ಬಂದು ಗುದ್ದಲಿಪೂಜೆ ನೆರವೇರಿಸಿದರೂ, ಇನ್ನೂ ದುರಸ್ತಿ ಕಂಡಿಲ್ಲ. ಇಲ್ಲೇ ಇದ್ದಂತಹ ಬಸ್ ನಿಲ್ದಾಣವನ್ನು ಕೆಡವಿ ಹೈಟೆಕ್ ನಿಲ್ದಾಣ ನಿರ್ಮಾಣ ಮಾಡುತ್ತೇವೆ ಎಂದು ಫೋಟೋ ಫ್ರೇಮ್‌ನಲ್ಲಿ ಕಾಣಿಸಿಕೊಂಡು ಇನ್ನಾದರೂ ಈ ಕಡೆ ಗಮನ ಹರಿಸಿಲ್ಲ. ಶಾಸಕರು 56–60ರ ವಾರ್ಡ್‌ಗಳಿಗೆ ತಾರತಮ್ಯ ಮಾಡುತ್ತಿದ್ದಾರೆ. ಒಂದು ಬಾರಿಯಾದರೂ ಸಮಸ್ಯೆಯನ್ನು ಪರಿಶೀಲಿಸಿ ಕೂಡಲೇ ಬಗೆಹರಿಸಬೇಕೆಂದು ಈ ಮೂಲಕ ಮನವಿ.

– ಸಿ. ಶಿವಣ್ಣ, ಪ್ರಧಾನ ಕಾರ್ಯದರ್ಶಿ, ಪತ್ರಿಕಾ ವಿತರಕ ಕ್ಷೇಮಾಭಿವೃದ್ಧಿ ಸಂಘ, ಮೈಸೂರು.

ನಾಡಹಬ್ಬ ದಸರಾದ ಹಿರಿಮೆ



ಈ ಬಾರಿಯ ವಿಶ್ವ ವಿಖ್ಯಾತ ದಸರಾ ಮಹೋತ್ಸವವನ್ನು (ಸೆಪ್ಟೆಂಬರ್ 26ರಿಂದ ಅಕ್ಟೋಬರ್ 5) ದೇಶದ ಪ್ರಥಮ ಪ್ರಜೆಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸಲಿರುವುದು ಸಂತೋಷಕರ ಸಂಗತಿ. ಇದೇ ಪ್ರಥಮ ಬಾರಿಗೆ ದೇಶದ ರಾಷ್ಟ್ರಪತಿಗಳು ದಸರಾ ಮಹೋತ್ಸವವನ್ನು ಉದ್ಘಾಟಿಸುವ ಮೂಲಕ ನಾಡಹಬ್ಬ ದಸರಾದ ಹಿರಿಮೆಯನ್ನು ಹೆಚ್ಚಿಸಲಿದ್ದಾರೆ.

ಅವರೂ ಸಹ ಇತ್ತೀಚೆಗೆ ಅಂದರೆ ಕಳೆದ ಜುಲೈ 25ರಂದು ರಾಷ್ಟ್ರಪತಿಗಳಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ರಾಷ್ಟ್ರಪತಿಗಳ ಆಗಮನದ ಕಾರಣದಿಂದ ಈ ಬಾರಿಯ ದಸರಾ ಹಿಂದೆಂದೂ ಕಾಣದಿರುವಷ್ಟು ಭದ್ರತೆಯ ದಸರಾವಾಗಲಿದ್ದು ಪೊಲೀಸರ ಸರ್ಪಗಾವಲಿನಲ್ಲಿ ದಸರಾ ರಂಗೇರಲಿದೆ. ಬೆಳಕಿನ ಓಕುಳಿಯಿಂದ ಮಿಂದೇಳಲಿರುವ ಸಾಂಸ್ಕೃತಿಕ ನಗರಿ ಮೈಸೂರು ಇಂದ್ರನ ಅಮರಾವತಿಯನ್ನು ನಾಚಿಸುವಷ್ಟರ ಮಟ್ಟಿಗೆ ಕಳೆಗಟ್ಟಲಿದೆ.

ವರ್ಷದಿಂದ ವರ್ಷಕ್ಕೆ ದಸರಾ ಹಬ್ಬದ ಹಿರಿಮೆ ಹೆಚ್ಚುತ್ತಲೇ ಇದೆ. ಕೋವಿಡ್ ಸೋಂಕಿನಿಂದಾಗಿ ಕಳೆದ 2 ವರ್ಷಗಳಿಂದ ಸರಳ ದಸರಾ ಆಚರಿಸಿದ್ದ ರಾಜ್ಯ ಸರ್ಕಾರವು ಈ ಬಾರಿಯ ದಸರಾವನ್ನು ಸಾಕಷ್ಟು ಅದ್ಧೂರಿಯಾಗಿ ಆಚರಿಸಲು ಸಕಲ ಸಿದ್ಧತೆ ಮಾಡಿಕೊಂಡಿದೆ. ಈ ಹಿಂದೆಯೂ, ಅತಿವೃಷ್ಟಿ, ಅನಾವೃಷ್ಟಿ ಮುಂತಾದ ಪ್ರಾಕೃತಿಕ ವಿಕೋಪಗಳ ಕಾರಣಗಳಿಂದ ಸರಳ ರೀತಿಯಲ್ಲಿ ಅಥವಾ ಸಾಂಕೇತಿಕವಾಗಿ ದಸರಾ ಆಚರಿಸಿದ್ದೂ ಇದೆ. ಕೆಲವು ವಿಚಾರವಾದಿಗಳು ಕಳೆದ ಹತ್ತಾರು ವರ್ಷಗಳಿಂದ "ಮಹಿಷ ದಸರಾ" ಆಚರಿಸಬೇಕೆಂದು ಒತ್ತಾಯಿಸುತ್ತಾ ಬಂದಿದ್ದಾರೆ. ಅದು ಒಂದು ಕಡೆ ಇರಲಿ. ವಿಜಯನಗರದ ಅರಸರಿಂದ 1610ನೇ ಇಸವಿಯ ಸೆಪ್ಟೆಂಬರ್ ತಿಂಗಳಲ್ಲಿ ಪ್ರಾರಂಭಿಸಲ್ಪಟ್ಟ ದಸರಾ ಹಬ್ಬ ಮುಂದೆ ನಾನಾ ರೂಪಾಂತರಗಳನ್ನು ಹೊಂದಿದೆ. 1969ರವರೆಗೆ ಮೈಸೂರು ಸಂಸ್ಥಾನದ ಮಹಾರಾಜರೇ (ಒಡೆಯರು) ಆನೆಯ ಮೇಲೆ ಚಿನ್ನದ ಅಂಬಾರಿಯಲ್ಲಿ ಕುಳಿತು ರಾಜಬೀದಿಗಳಲ್ಲಿ ವಿಜಯದಶಮಿಯ ದಿನದಂದು ಜಂಬೂಸವಾರಿ ನಡೆಸುತ್ತಿದ್ದರು. ದಿವಂಗತ ಜಯಚಾಮರಾಜೇಂದ್ರ ಒಡೆಯರ್ ಕಡೆಯ ಬಾರಿ ಅಂದರೆ 1969ರಲ್ಲಿ ಚಿನ್ನದ ಅಂಬಾರಿಯಲ್ಲಿ ಕುಳಿತು ದಸರಾ ಮೆರವಣಿಗೆ ನಡೆಸಿದ್ದರು. ರಾಜ್ಯ ಸರ್ಕಾರದ ಮುಖ್ಯಸ್ಥರಾದ ಮುಖ್ಯಮಂತ್ರಿಗಳು ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿದ ನಂತರ ಅರಮನೆಯಿಂದ ಹೊರಡುವ ಈ ಜಂಬೂಸವಾರಿಯು ನಗರದ ಪ್ರಮುಖ ಮಾರ್ಗಗಳಲ್ಲಿ ಸಾಗಿ ಕಡೆಗೆ ಬನ್ನಿಮಂಟಪದ ತಲುಪುತ್ತದೆ. ನಂತರ ರಾತ್ರಿ "ಬನ್ನಿಮಂಟಪದಲ್ಲಿ ನಡೆಯುವ ಅತ್ಯಾಕರ್ಷಕ ಪಂಜಿನ ಕವಾಯತಿನಲ್ಲಿ ಅಶ್ವಾರೋಹಿಗಳ, ಮೋಟಾರ್ ಬೈಕ್ ಸವಾರರ ಮೈನವಿರೇಳಿಸುವ ಸಾಹಸ ಪ್ರದರ್ಶನ ನಡೆಯಲಿದ್ದು "ಲೇಸರ್ ಶೋ" ಪಂಜಿನ ಕವಾಯತಿನ ಪ್ರಮುಖ ಆಕರ್ಷಣೆ ಯಾಗಿದೆ. ರಾಜ್ಯದ ಮುಖ್ಯಸ್ಥರಾದ ರಾಜ್ಯಪಾಲರು ನಾನಾ ಪಡೆಗಳಿಂದ ಗೌರವ ವಂದನೆ ಸ್ವೀಕರಿಸುತ್ತಾರೆ. ಜಂಬೂ ಸವಾರಿಯನ್ನು ಖುದ್ದಾಗಿ ವೀಕ್ಷಿಸಲು ಲಕ್ಷಾಂತರ ಜನರು ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ನೆರೆದಿರುತ್ತಾರೆ.



ಹಸಿವು ಬಾಯಾರಿಕೆಗಳನ್ನು ಲೆಕ್ಕಿಸದೇ ಬೃಹತ್ ಕಟ್ಟಡಗಳ ಮೇಲೆ, ವೃಕ್ಷಗಳ ಮೇಲೆ, ವಾಹನಗಳ ಮೇಲೆ, ಮನೆಗಳ ಛಾವಣಿಗಳ ಮೇಲೆ ಹೀಗೆ ಎಲ್ಲೆಂದರಲ್ಲಿ ನೆರೆಯುವ ದೇಶದ ನಾನಾ ಭಾಗಗಳಿಂದ ಬರುವ ಜನರನ್ನು ನೋಡುವುದೇ ಬಲುಚೆಂದ. ಗ್ರಾಮೀಣ ಭಾಗಗಳಿಂದ ಬರುವ ಜನರು ತಮ್ಮ ತಲೆಯ ಮೇಲೋ ಅಥವಾ ಹೆಗಲಿನ ಮೇಲೋ ತಮ್ಮ ಪುಟ್ಟ ಮಕ್ಕಳಿಗೆ ಮೆರವಣಿಗೆ ತೋರಿಸುವುದನ್ನು ನೋಡುವುದು ಇನ್ನೂ ಚೆಂದ. ಈ ಅತ್ಯಾಕರ್ಷಕ ಮೆರವಣಿಗೆಯಲ್ಲಿ ನಾಡಿನ ಕಲೆ ಮತ್ತು ಸಂಸ್ಕೃತಿಯು ಅನಾವರಣಗೊಳ್ಳುವುದಲ್ಲದೇ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಾಧನೆಗಳನ್ನು ಬಿಂಬಿಸುವ ಸ್ತಬ್ಧ ಚಿತ್ರಗಳು, ದಾಸರ, ಶರಣರ, ಸ್ವಾತಂತ್ರ್ಯ ಹೋರಾಟಗಾರರ ವಿವಿಧ ಭಂಗಿಯ ಚಿತ್ರಗಳು, ಐತಿಹಾಸಿಕ ಮತ್ತು ಚಾರಿತ್ರಿಕ ಪುರುಷರ ಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಇದರ ಜೊತೆಗೆ ಹಲವಾರು ಸಾಮಾಜಿಕ ಅನಿಷ್ಟಗಳನ್ನು ತೊಡೆದು ಹಾಕುವ ಘೋಷಣೆಗಳು ಮೊಳಗುತ್ತವೆ. ಪೊಲೀಸರ ಸಾಮೂಹಿಕ ಕವಾಯತು, ಅಶ್ವಾರೋಹಿಗಳ ಕವಾಯಿತು, ಎನ್‌ಸಿಸಿ, ಸ್ಕೌಟ್, ಮುಂತಾದ ಪಡೆಗಳ ನಯನ ಮನೋಹರ ಕವಾಯತು, ಡೊಳ್ಳರ ಕುಣಿತ, ಸೋಮನ ಕುಣಿತ, ವೀರಗಾಸೆ, ಕಂಸಾಳೆ ಸೇರಿದಂತೆ ವಿವಿಧ ಶೈಲಿಯ ಕಲಾ ಪ್ರದರ್ಶನ ವೀಕ್ಷಕರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತದೆ. ರಾಜ ಮನೆತನಕ್ಕೆ ಸೇರಿದ ಪಟ್ಟದ ಕುದುರೆ, ಪಟ್ಟದ ಆನೆ, ಪಟ್ಟದ ಹಸು, ಫಿರಂಗಿ ಗಾಡಿ, ಗುಂಡು ಮದ್ದುಗಳ ವಾಹನ, ಮುಂತಾದವು ತಮ್ಮ ತಮ್ಮ ಸರತಿಯಲ್ಲಿ ಗಂಭೀರವಾಗಿ ಸಾಗುವ ನೋಟ ಎಂತಹವರ ಮನಸ್ಸನ್ನಾದರೂ ಸೆಳೆಯುತ್ತದೆ. ವಿವಿಧ ಬಣ್ಣಗಳಿಂದ ಸಿಂಗಾರಗೊಂಡ ಆನೆಗಳು ಜಂಬೂಸವಾರಿಯ ವಿಶೇಷವಾದ ಆಕರ್ಷಣೆ ಎನ್ನಬಹುದು. ಈ ಮೆರವಣಿಗೆಯಲ್ಲಿ ಇನ್ನೂ ಹಲವಾರು ರೀತಿಯ ವೈಶಿಷ್ಟ್ಯಪೂರ್ಣ ಹಾಗೂ ನಯನ ಮನೋಹರ ಕಲಾ ಪ್ರದರ್ಶನಗಳಿರುತ್ತವೆ. 1969ರ ನಂತರ ನಡೆದುಕೊಂಡು ಬರುತ್ತಿರುವ ಜನತಾ ಅಥವಾ ಸರ್ಕಾರಿ ದಸರಾಗಳಲ್ಲಿ ತಾಯಿ ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ಪೂಜಿಸಿ ಚಿನ್ನದ ಅಂಬಾರಿಯಲ್ಲಿ ಇಟ್ಟು ಮೆರವಣಿಗೆ ನಡೆಸಲಾಗುತ್ತದೆ. ಪದ್ಧತಿ ಬದಲಾದರೂ ಸಹ, ಎಲ್ಲಾ ಧಾರ್ಮಿಕ ವಿಧಿ ವಿಧಾನಗಳನ್ನು ಚಾಚೂ ತಪ್ಪದೇ ನಡೆಸಿಕೊಂಡು ಬರುತ್ತಿರುವುದು ಸಮಾಧಾನಕರ ಸಂಗತಿ.

ದಸರಾ ಹಬ್ಬದ ಕೇಂದ್ರ ಬಿಂದು ಜಗನ್ಮಾತೆ ತಾಯಿ ಚಾಮುಂಡೇಶ್ವರಿ. ಈ ಹಬ್ಬದ ಮೊದಲ ಒಂಬತ್ತು ದಿನಗಳು ನವರಾತ್ರಿಯಾದರೆ ಹತ್ತನೇ ದಿನ ವಿಜಯದಶಮಿ ಆಗುತ್ತದೆ. ದಸರಾ ಮಹೋತ್ಸವವನ್ನು ಮೈಸೂರಿನಲ್ಲಿ ಮಾತ್ರವಲ್ಲದೇ ದೇಶದ ನಾನಾ ಭಾಗಗಳಲ್ಲಿ ವಿವಿಧ ಹೆಸರಿಂದ ಆಚರಿಸಲಾಗುತ್ತದೆ. ದುಷ್ಟಶಕ್ತಿಯ ವಿರುದ್ಧ ದೈವೀಕ ಶಕ್ತಿ ಸಾಧಿಸುವ ವಿಜಯವನ್ನು ದಸರಾ ಹಬ್ಬ ಪ್ರತಿಬಿಂಬಿಸುತ್ತದೆ. ದೆಹಲಿಯ ರಾಮಲೀಲಾ ಮೈದಾನದಲ್ಲಿ ವಿಜಯ ದಶಮಿಯಂದು ಪಟಾಕಿಗಳನ್ನು ಸಿಡಿಸಿ, ರಾವಣನ ಹತ್ತು ತಲೆಗಳನ್ನು ಉರುಳಿಸುವುದನ್ನು ವೀಕ್ಷಿಸಲು ಲಕ್ಷಾಂತರ ಜನ ಸೇರುತ್ತಾರೆ.

ದಸರಾ ಹಬ್ಬ ನಾಡಹಬ್ಬ ಮಾತ್ರವಲ್ಲದೇ ನಾಡಿನ ಐತಿಹಾಸಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಹಿರಿಮೆಯ ದ್ಯೋತಕವಾಗಿದೆ. ಈ ಮಹೋತ್ಸವವನ್ನು ವೀಕ್ಷಿಸಲು ದೇಶದ ನಾನಾ ಭಾಗಗಳಿಂದ ಪ್ರವಾಸಿಗರು ಹರಿದು ಬರಲಿದ್ದು, ಇದರ ಜೊತೆಗೆ ಅಂತರರಾಷ್ಟ್ರೀಯ ಪ್ರವಾಸಿಗರೂ ಸೇರಿಕೊಂಡು ದಸರಾವನ್ನು ಒಂದು ಜಾಗತಿಕ ಉತ್ಸವದ ರೂಪದಲ್ಲಿ ನೋಡಬಹುದು. ಸ್ಥಳೀಯ ಕಲಾವಿದರ ಜೊತೆಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಕಲಾವಿದರೂ ಸಹ ಪಾಲ್ಗೊಳ್ಳುವ ಈ ನಾಡಹಬ್ಬ ಮೈಸೂರಿನ ಹೆಮ್ಮೆಯ ಗರಿಯಾಗಿದೆ. ಇದರ ಜೊತೆಗೆ ದಸರಾ ವಸ್ತು ಪ್ರದರ್ಶನ, ಫಲಪುಷ್ಪ ಪ್ರದರ್ಶನ, ಯುವ ದಸರಾ, ದಸರಾ ಕವಿಗೋಷ್ಠಿ, ದಸರಾ ಕುಸ್ತಿ ಪಂದ್ಯಾವಳಿ, ಕ್ರೀಡೆ, ಸಂಗೀತ, ನೃತ್ಯ, ನಾಟಕ, ಚಲನಚಿತ್ರ ಪ್ರದರ್ಶನ ಮುಂತಾದ ಹತ್ತು ಹಲವು ಆಕರ್ಷಣೆಗಳನ್ನು ತನ್ನ ಮಡಿಲಲ್ಲಿ ತುಂಬಿಕೊಂಡಿರುವ ದಸರಾ ಮಹೋತ್ಸವ ಯಾವುದೇ ನಿರ್ವಿಘ್ನ ಇಲ್ಲದೆ ಯಶಸ್ವಿಯಾಗಿ ನಡೆಯಲಿ ಎಂದು ತಾಯಿ ಚಾಮುಂಡೇಶ್ವರಿಯನ್ನು ಪ್ರಾರ್ಥಿಸೋಣ.



–ಡಾ.ಕೆ.ವಿ.ವಾಸು, ವಕೀಲರು, ನೋಟರಿ, ಮೈಸೂರು. ಮೊ. 9341731661



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರನ್ನು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು ಹಾಗೂ ಬಿಜೆಪಿ ಮುಖಂಡರು ಹೂಗುಚ್ಛ ನೀಡಿ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ಚೌಡಪ್ಪ ಇನ್ನಿತರರು ಉಪಸ್ಥಿತರಿದ್ದರು.

ಬೆನ್ನು ಮೂಳೆ ಉಚಿತ ತಪಾಸಣೆ ಶಿಬಿರ

ಮೈಸೂರು,ಸೆ. 12–ಮೈಸೂರಿನ ಸುಯೋಗ್ ಆಸ್ಪತ್ರೆಯಲ್ಲಿ ಸೆ.12ರಿಂದ 17ರವರೆಗೆ ಉಚಿತ ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಬೆನ್ನು ಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ತಜ್ಞವೈದ್ಯ ಡಾ.ರಾಜೇಶ್ ನೇತೃತ್ವದಲ್ಲಿ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಬೆನ್ನು ನೋವು, ಕುತ್ತಿಗೆ ನೋವು, ಕಾಲು ಮತ್ತು ಕೈಗಳಲ್ಲಿ ಮರಗಟ್ಟುವಿಕೆ, ನಡೆಯುವಾಗ ಬಾಗಿದ ಭಂಗಿ, ಹೆಚ್ಚು ದೂರ ನಡೆಯಲು ಸಾಧ್ಯವಾಗದಿರುವುದು ಈ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ವೈದ್ಯರು ಎಂಆರ್‌ಐ ಪರೀಕ್ಷೆಗೆ ಸೂಚಿಸಿದಲ್ಲಿ 50% ರಿಯಾಯತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದಾಗಿದೆ.

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು,ಸೆ.12–ಮೈಸೂರಿನ ಉತ್ತರಾದಿ ಮಠದ ರಸ್ತೆಯ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆಯಿಂದ ಅ.9ರಂದು ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಅ.8ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ. 9686205346, 9972703737 ಸಂಪರ್ಕಿಸಬಹುದು.

6 ಮಂದಿ ಸಾಧಕರಿಗೆ ಸನ್ಮಾನ



ಮೈಸೂರು, ಸೆ.12–ವಿವಿಧ ಕ್ಷೇತ್ರದ 6 ಮಂದಿ ಸಾಧಕರನ್ನು ಚೈತ್ರ ಫೌಂಡೇಷನ್ ವತಿಯಿಂದ ಸನ್ಮಾನಿಸಲಾಯಿತು. ಕುವೆಂಪುನಗರದ ಗಾನಭಾರತೀ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರಾದ ಕಲ್ಪನಾ, ರಿಜ್ವಾನಾ ಭಾನು, ರಂಗನಾಥ ಮೈಸೂರು, ಪ್ರಮೀಳಾ ಕುನ್ವರ್, ಚಂದಗಾಲು ರಮೇಶ್, ಡಾ.ಕಾಂತಿ ಹರೀಶ್ ಅವರನ್ನು ಹಿರಿಯ ಲೆಕ್ಕ ಪರಿಶೋಧಕ ರಘು ಇನ್ನಿತರರು ಸನ್ಮಾನಿಸಿದರು.

ಚೈತ್ರ ಫೌಂಡೇಷನ್‌ನ ಪದಾಧಿಕಾರಿಗಳು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ಡಾ.ಸುಧಾ ರಮೇಶ್ ದಂಪತಿ ಕಾರ್ಯ ಶ್ಲಾಘನೀಯ. ಬಹಳಷ್ಟು ಸಾಧಕರು, ಸಮಾಜದಿಂದ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುತ್ತಾರೆ. ಅಂತಹ ಸಾಧಕರನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸ ಸಂಘ–ಸಂಸ್ಥೆಗಳದ್ದು ಎಂದರು. ಈ ವೇಳೆ ಚೈತ್ರ ಫೌಂಡೇಷನ್‌ನ ಚಂದ್ರಶೇಖರ್, ವಿಜಯಲಕ್ಷ್ಮಿ ರಂಗನಾಥ್, ಕೆ.ರಮೇಶ್, ಪದ್ಮ ರಘು, ಪದ್ಮ ಆನಂದ್ ಇನ್ನಿತರರು ಉಪಸ್ಥಿತರಿದ್ದರು.

ಕೆಪಿಟಿಸಿಎಲ್ ಪರೀಕ್ಷಾ ಅಕ್ರಮ: ಅತಿಥಿ ಉಪನ್ಯಾಸಕನ ಬಂಧನ

ಬೆಳಗಾವಿ: ಕೆಪಿಟಿಸಿಎಲ್ ಪರೀಕ್ಷಾ ಅಕ್ರಮ ಹಗರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ಬಂಧನವಾಗಿದ್ದು, ಆ ಮೂಲಕ ಬಂಧಿತರ ಸಂಖ್ಯೆ 18ಕ್ಕೇರಿಕೆಯಾಗಿದೆ. ಬೆಳಗಾವಿಯಲ್ಲಿ ಪೊಲೀಸರು ನೆಟ್ ಎಕ್ಸಾಂನಲ್ಲಿ 46ನೇ ರ್‍ಯಾಂಕ್ ಪಡೆದಿದ್ದ, ಹುಕ್ಕೇರಿ ಸರ್ಕಾರಿ ಕಾಲೇಜಿನ ಅತಿಥಿ ಉಪನ್ಯಾಸಕ ಆದೇಶ್ ನಾಗನೂರಿ ಎಂಬಾತನನ್ನು ಬಂಧಿಸಿದ್ದಾರೆ. ಈಗಾಗಲೇ ಕೆಪಿಟಿಸಿಎಲ್ ಪರೀಕ್ಷಾ ಅಕ್ರಮದಲ್ಲಿ ಕಿಂಗ್ ಪಿನ್ ಸಂಜು ಭಂಡಾರಿ, ಎಲೆಕ್ಟ್ರಾನಿಕ್ ಡಿವೈಸ್ ಪೂರೈಸಿದ್ದ ಮಹಮ್ಮದ್ ಸೇರಿ 18 ಜನ ಆರೋಪಿಗಳನ್ನು ಬಂಧಿಸಿದ್ದಾರೆ. ವಿಶೇಷ ತಂಡಗಳು ಸದ್ಯದಲ್ಲೇ ಇನ್ನಷ್ಟು ಆರೋಪಿಗಳನ್ನ ಬಂಧಿಸುವ ಸಾಧ್ಯತೆಯಿದೆ.

ಬಿಜೆಪಿಯ ಸೋನಾಲಿ ಫೋಗಟ್ ಸಾವು ಸಿಬಿಐ ತನಿಖೆಗೆ ಆದೇಶಿಸಿದ ಕೇಂದ್ರ ಗೃಹ ಸಚಿವಾಲಯ

ನವದೆಹಲಿ: ಬಿಜೆಪಿ ನಾಯಕಿ ಸೋನಾಲಿ ಫೋಗಟ್ ಸಾವಿನ ತನಿಖೆಯನ್ನು ಕೇಂದ್ರ ತನಿಖಾ ದಳಕ್ಕೆ ಹಸ್ತಾಂತರಿಸುವ ಬಗ್ಗೆ ಕೇಂದ್ರ ಗೃಹ ಸಚಿವಾಲಯ ನಿರ್ಧರಿಸಿರುವ ಬಗ್ಗೆ ವರದಿಯಾಗಿದೆ. ತನಿಖೆಯನ್ನು ಸಿಬಿಐಗೆ ವಹಿಸುವಂತೆ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಸಚಿವಾಲಯಕ್ಕೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಲಾಗಿದೆ.


ನಾವು ರಾಜ್ಯ ಪೊಲೀಸರ ಮೇಲೆ ಸಂಪೂರ್ಣ ನಂಬಿಕೆ ಹೊಂದಿದ್ದೇವೆ ಆದರೆ ಸೋನಾಲಿ ಫೋಗಟ್ ಕುಟುಂಬದ ನಿರಂತರ ಬೇಡಿಕೆಯಿಂದಾಗಿ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸಲಾಗುವುದು. ಪ್ರಕರಣವನ್ನು ವರ್ಗಾಯಿಸಲು ನಾನು ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆಯುತ್ತೇನೆ ಎಂದು ಸಿಎಂ ಪ್ರಮೋದ್ ಸಾವಂತ್ ಹೇಳಿದ್ದರು.

ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಸೋನಾಲಿ ಫೋಗಟ್ ಅವರ ದೇಹದ ಮೇಲೆ ಅನೇಕ ಮೂಗೇಟುಗಳು ಕಂಡುಬಂದ ನಂತರ ಅವರ ಕುಟುಂಬವು ಸಿಬಿಐ ತನಿಖೆಗೆ ಒತ್ತಾಯಿಸಿತ್ತು. 43 ವರ್ಷದ ಆಪ್ತ ಸಹಾಯಕ ಸುಧೀರ್ ಸಾಂಗ್ವಾನ್ ಮತ್ತು ಆತನ ಸ್ನೇಹಿತ ಸುಖ್ವಿಂದರ್ ವಾಸಿ ಅತ್ಯಾಚಾರ ಮತ್ತು ಕೊಲೆ ಮಾಡಿದ್ದಾರೆ ಎಂದು ಕುಟುಂಬ ಆರೋಪಿಸಿದೆ. ಈ ಹಿಂದೆ ಸುಧೀರ್ ಸಾಂಗ್ವಾನ್ ತನ್ನ ಮೇಲೆ ಅತ್ಯಾಚಾರ ನಡೆಸಿದ್ದ ಬಗ್ಗೆ ಸೋನಾಲಿ ಫೋಗಟ್ ತನ್ನ ತಾಯಿಗೆ ದೂರು ನೀಡಿದ್ದಳು ಎಂದು ಕುಟುಂಬ ತಿಳಿಸಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣ

ದೆಹಲಿ ಪೊಲೀಸರಿಂದ ಜಾಕ್ವೆಲಿನ್ ಫರ್ನಾಂಡೀಸ್‌ಗೆ ಹೊಸ ಸಮನ್ಸ್

ನವದೆಹಲಿ: ಸುಕೇಶ್ ಚಂದ್ರಶೇಖರ್‌ಗೆ ಸಂಬಂಧಿಸಿದ 200 ಕೋಟಿ ರೂ. ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೆಪ್ಟೆಂಬರ್ 14ರಂದು ವಿಚಾರಣೆಗೆ ಹಾಜರಾಗುವಂತೆ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡೀಸ್ ಅವರಿಗೆ ದೆಹಲಿ ಪೊಲೀಸ್‌ನ ಆರ್ಥಿಕ ಅಪರಾಧ ವಿಭಾಗ(ಇಒಡಬ್ಲ್ಯು) ಸೋಮವಾರ ಹೊಸ ಸಮನ್ಸ್ ಜಾರಿ ಮಾಡಿದೆ.



ನಟಿ ಜಾಕ್ವೆಲಿನ್ ಇಂದು ವಿಚಾರಣೆಗೆ ಹಾಜರಾಗಬೇಕಿತ್ತು. ಆದರೆ 15 ದಿನ ಸಮಯ ಕೋರಿದ್ದರು. ಇದಕ್ಕೆ ಒಪ್ಪದ ದೆಹಲಿ ಪೊಲೀಸರು ಸೋಮವಾರ ನಿಗದಿಯಾಗಿದ್ದ ವಿಚಾರಣೆಯನ್ನು ಮುಂದೂಡಿದ್ದಾರೆ. ಆದರೆ ನಟಿಗೆ ಹೆಚ್ಚು ಸಮಯ ನೀಡದೇ ಬುಧವಾರ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ. ತನಿಖೆಗೆ ಹಾಜರಾಗುವಂತೆ ಫರ್ನಾಂಡಿಸ್‌ಗೆ ಪೊಲೀಸರು ಸಮನ್ಸ್ ಜಾರಿ ಮಾಡಿರುವುದು ಇದು ಮೂರನೇ ಬಾರಿ. ಸೆಪ್ಟೆಂಬರ್ 14 ರಂದು ಇಒಡಬ್ಲ್ಯು ಕಚೇರಿಯಲ್ಲಿ ಬೆಳಗ್ಗೆ 11 ಗಂಟೆ ಸುಮಾರಿಗೆ ವಿಚಾರಣೆಗೆ ಹಾಜರಾಗುವಂತೆ ಜಾಕ್ವೆಲಿನ್‌ಗೆ ಹೊಸದಾಗಿ ಸಮನ್ಸ್ ಜಾರಿ ಮಾಡಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಎಎನ್‌ಐಗೆ ಖಚಿತಪಡಿಸಿದ್ದಾರೆ.

ಜಾರಿ ನಿರ್ದೇಶನಾಲಯ ತನ್ನ ಚಾರ್ಜ್‌ಶೀಟ್‌ನಲ್ಲಿ ಚಂದ್ರಶೇಖರ್ ವಂಚಿಸಿದ ಹಣವನ್ನು ಹೇಗೆ ಬಳಸಿದ್ದಾರೆ ಎಂದು ಉಲ್ಲೇಖಿಸಿದೆ. ತನ್ನ ಪೂರಕ ಆರೋಪಪಟ್ಟಿಯಲ್ಲಿ, ಚಂದ್ರಶೇಖರ್ ಅವರು ವಂಚಿಸಿದ ಮೊತ್ತದಿಂದ 5 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಉಡುಗೊರೆಗಳನ್ನು ಜಾಕ್ವೆಲಿನ್ ಫರ್ನಾಂಡೀಸ್ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ. ಅಪರಾಧದ ಆದಾಯದಿಂದ ಉಡುಗೊರೆಗಳನ್ನು ಖರೀದಿಸಲಾಗಿದೆ ಎಂದು ಆಕೆಗೆ ತಿಳಿದಿತ್ತು ಎಂದು ಆರೋಪಿಸಿ ನಟಿಯನ್ನು ಆರೋಪಿ ಎಂದು ಹೆಸರಿಸಿದೆ.

ಹೊಸ ಆನೆಗಳಿಗಷ್ಟೇ ಸ್ವಲ್ಪ ಭಯ! ಹಳಬರು ಸ್ವಲ್ಪವೂ ಮಿಸುಕಾಡಿಲ್ಲ!!

ಸಿಡಿಮದ್ದು ತಾಲೀಮು ನಂತರ ಆನೆ ಉಸ್ತುವಾರಿ ಡಿಸಿಎಫ್ ಕರಿಕಾಳನ್ ಸಮಾಧಾನ

ಮೈಸೂರು,ಸೆ.12(ಎಂಟಿವೈ)–ನಾಡಹಬ್ಬ ದಸರಾಕ್ಕೆ ಕರೆತರಲಾಗಿರುವ ನಾಲ್ಕು ಹೊಸ ಆನೆಗಳನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಆನೆಗಳು ಸಿಡಿಮದ್ದು ತಾಲೀಮಿನಲ್ಲಿ ಅಲುಗಾಡಿಲ್ಲ ಎಂದು ಡಿಸಿಎಫ್ ಡಾ.ವಿ. ಕರಿಕಾಳನ್ ತಿಳಿಸಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈಗಾಗಲೇ 14 ಆನೆಗಳನ್ನು ಎರಡು ತಂಡಗಳಲ್ಲಿ ಕರೆತರಲಾಗಿದ್ದು, ಇಂದು ಎಲ್ಲಾ ಆನೆಗಳಿಗೂ ಮೊದಲ ಸುತ್ತಿನ ಸಿಡಿಮದ್ದು ತಾಲೀಮು ನಡೆಸಲಾಗಿದೆ. ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಗಜಪಡೆಗೆ ಕುಶಲತೋಪಿನ ಶಬ್ಧ ಮತ್ತು ಹೊಗೆಯ ಪರಿಚಯ ಮಾಡಿಸಿಕೊಡುವ ನಿಟ್ಟಿನಲ್ಲಿ ಪ್ರತಿವರ್ಷವೂ ದಸರಾ ವೇಳೆ ಆನೆಗಳಿಗೆ ಮೂರು ಬಾರಿ ಸಿಡಿಮದ್ದು ತಾಲೀಮು ನಡೆಸಲಾಗುತ್ತದೆ. ಈ ಬಾರಿ ಹೊಸ ಆನೆಗಳಾದ ಸುಗ್ರೀವ, ಪಾರ್ಥಸಾರಥಿ, ಶ್ರೀರಾಮ ಸೇರಿದಂತೆ 4 ಹೊಸ ಆನೆಗಳು ಸಿಡಿಮದ್ದಿನ ಶಬ್ಧಕ್ಕೆ ಸ್ವಲ್ಪ ಬೆಚ್ಚಿವೆ. ಉಳಿದ ಆನೆಗಳು ಅಲುಗಾಡಿಲ್ಲ. ಆನೆಗಳು ಭಾರೀ ಶಬ್ಧ ಕೇಳಿದಾಗ ಬೆಚ್ಚಿ ಹಿಂದಕ್ಕೆ ತಿರುಗಿ ಓಡಲು ಯತ್ನಿಸುವುದು ಸಾಮಾನ್ಯ. ಆನೆಗಳು ಎಡ–ಬಲಕ್ಕೆ ತಿರುಗಬಾರದು. ಒಂದು ವೇಳೆ ಎಡ–ಬಲಕ್ಕೆ ತಿರುಗಿದರೆ ಅಕ್ಕಪಕ್ಕ ನಿಂತಿರುವ ಆನೆಗಳಿಗೆ ಸಮಸ್ಯೆಯಾಗಲಿದೆ. ಆದರೆ ಇಂದು ಎಲ್ಲಾ ಆನೆಗಳು ಹಿಂದೆ–ಮುಂದೆ ಸರಿದಿವೆಯಾದರೂ ಅಕ್ಕಪಕ್ಕಕ್ಕೆ ತಿರುಗಿಲ್ಲ. ಇದರಿಂದ ಆನೆಗಳ ವರ್ತನೆ ತೃಪ್ತಿಕರವಾಗಿದೆ ಎಂದರು. ಅಶ್ವದಳದ ಕುದುರೆ ಬೆದರಿ ಆನೆಗಳತ್ತ ಬಂದ ಹಿನ್ನೆಲೆಯಲ್ಲಿ ಆನೆಗಳು ಕೊಂಚ ವಿಚಲಿತವಾದವು. ಇದು ಪ್ರಾಣಿಗಳಲ್ಲಿ ಸಾಮಾನ್ಯ. ಅದೇ ಮಾದರಿಯಲ್ಲಿ ಕೆಲವು ಕುದುರೆಗಳಿಗೆ ಆನೆ ಕಂಡರೆ ಭಯ ಈ ವೇಳೆ ಆನೆಯೇ ಕುದುರೆಗೆ ಜಾಗ ಬಿಟ್ಟು ಹಿಂದೆ ಸರಿದಿದೆ. ಈ ವೇಳೆ ಕುದುರೆ ಸವಾರ ಅದನ್ನು ಹತೋಟಿಗೆ ತಂದದ್ದು ಶ್ಲಾಘನೀಯ.



ದಸರಾ ಗಜಪಡೆಯ ಎಲ್ಲಾ ಆನೆಗಳು ಆರೋಗ್ಯದಿಂದಿವೆ. ಸೆ.16ರಂದು 2ನೇ, ಸೆ.23ರಂದು ಕೊನೆಯ ಸುತ್ತಿನ ತಾಲೀಮು ನಡೆಸಲಾಗುತ್ತದೆ. ಅರ್ಜುನನಿಗೆ 63 ವರ್ಷ ವಯಸ್ಸಾಗಿರುವ ಹಿನ್ನೆಲೆಯಲ್ಲಿ ಆ ಆನೆಗೆ ಯಾವ ಜವಾಬ್ದಾರಿ ನೀಡುವುದಿಲ್ಲ. ಏಳೆಂಟು ಬಾರಿ ಅಂಬಾರಿ ಹೊತ್ತಿರುವ ಅರ್ಜುನನ್ನು ಈ ಬಾರಿ ಜಂಬೂ ಸವಾರಿ ಮೆರವಣಿಗೆಯಲ್ಲಿ ನಿಶಾನೆ ಆನೆಯಾಗಿ ಕರೆದೊಯ್ದು, ಗೌರವ ಸಲ್ಲಿಸಲಾಗುತ್ತದೆ. ನೌಪತ್ ಮತ್ತು ಸಾಲಾನೆಗಳಾಗಿ ಯಾವ ಆನೆಗಳನ್ನು ಕರೆದೊಯ್ಯಬೇಕು ಎಂದು ಇನ್ನು ನಿರ್ಧರಿಸಿಲ್ಲ. ಶ್ರೀರಂಗಪಟ್ಟಣದ ದಸರಾಕ್ಕೆ 5 ಆನೆಗಳನ್ನು ಕಳುಹಿಸಿಕೊಡುವಂತೆ ಮಂಡ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲಾಧಿಕಾರಿಗಳಿಗೆ ಮತ್ತು ಅರಣ್ಯ ಇಲಾಖೆ ಸಿಎಫ್‌ಗೆ ಪತ್ರ ಬರೆದಿದ್ದಾರೆ. ನಾವು ಮೂರು ಆನೆಗಳನ್ನು ಕಳಿಸುವ ಬಗ್ಗೆ ಚಿಂತನೆ ನಡೆಸಿದ್ದು, ಇನ್ನೂ ಅಂತಿಮವಾಗಿಲ್ಲ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ದಸರಾ ಮಹೋತ್ಸವ-2022

ಮೇಯರ್‌ಗೆ ಕುದುರೆ ಸವಾರಿ ತರಬೇತಿ



ಮೈಸೂರು, ಸೆ. 12(ಆರ್‌ಕೆ)–ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿ ಮೆರವಣಿಗೆಯಲ್ಲಿ ಕುದುರೆ ಏರಿ, ಪಾಲ್ಗೊಳ್ಳಲಿರುವ ಮೈಸೂರಿನ ನೂತನ ಮೇಯರ್ ಶಿವಕುಮಾರ್ ಅವರಿಗೆ ಚಾಮುಂಡಿಬೆಟ್ಟದ ತಪ್ಪಲಿನ ಹಾರ್ಸ್‌ಪಾರ್ಕ್‌ನಲ್ಲಿ ಕುದುರೆ ಸವಾರಿ ತರಬೇತಿ ಆರಂಭವಾಗಿದೆ. ಅಶ್ವಾರೋಹಿ ದಳದ ಪೊಲೀಸರು ಇಂದು ಬೆಳಗ್ಗೆ ಮೇಯರ್ ಕುದುರೆಯೇರಿ ಸವಾರಿ ಮಾಡುವುದನ್ನು ಹೇಳಿಕೊಟ್ಟರು. ಟಿ–ಶರ್ಟ್, ಟ್ರ್ಯಾಕ್ ಪ್ಯಾಂಟ್, ಶೂ ಹಾಗೂ ಹೆಲ್ಮೆಟ್ ಧರಿಸಿ ಶಿವಕುಮಾರ್‌ಗೆ ತರಬೇತಿಯ ಮೊದಲ ದಿನವಾದ ಇಂದು ಕುದುರೆ ಏರುವುದು, ಲಗಾಮು ಹಿಡಿಯುವುದು, ಸವಾರಿ ವೇಳೆ ಎಚ್ಚರ ವಹಿಸುವುದು, ಇಳಿಯುವಾಗ ಅನುಸರಿಸಬೇಕಾದ ಕ್ರಮ ಇತ್ಯಾದಿ ವಿಷಯಗಳ ಬಗ್ಗೆ ಮೌಂಟೆಡ್ ಕಂಪನಿ ಸಿಬ್ಬಂದಿ ಹೇಳಿಕೊಟ್ಟರು.

ಆರಂಭದಲ್ಲಿ ಮೇಯರ್ ಏರಿದ ಕುದುರೆಯನ್ನು ಓರ್ವ ಸಿಬ್ಬಂದಿ ಹಿಡಿದು ಮೈದಾನದಲ್ಲಿ ಮೂರ್‍ನಾಲ್ಕು ಸುತ್ತು ಹಾಕಿಸಿದರು. ಈ ವೇಳೆ ಎಡ ಮತ್ತು ಬಲಭಾಗದಲ್ಲಿ ಇಬ್ಬರು ಪೊಲೀಸರು ಕುದುರೆ ಸವಾರಿ ಮಾಡಿದರು. ಬೆಳಗ್ಗೆ 6ರಿಂದ 7.30 ಗಂಟೆವರೆಗೆ ಮೇಯರ್‌ಗೆ ಕುದುರೆ ಸವಾರಿ ಕುರಿತು ತರಬೇತಿ ನೀಡಲಾಯಿತು. ಅದಕ್ಕೂ ಮೊದಲು ಕುದುರೆಯ ಸಾಮರ್ಥ್ಯ, ದೈಹಿಕ ಮತ್ತು ಅದರ ಗುಣಲಕ್ಷಣಗಳು, ಗಾತ್ರ, ಎತ್ತರ, ಆಹಾರ ಪದ್ಧತಿ ಕುರಿತಂತೆ ಮಾಹಿತಿ ನೀಡಿದ ಪೊಲೀಸರು, ಹೊಸಬರ ಬಗ್ಗೆ ಅದರ ಪ್ರತಿಕ್ರಿಯೆ, ಯಾವ ಸಂದರ್ಭದಲ್ಲಿ ಅದು ಬೆದರಬಹುದು ಎಂಬುದರ ಕುರಿತಂತೆಯೂ ಮೌಂಟೆಡ್ ಕಂಪನಿ ತರಬೇತುದಾರರಾದ ಶ್ರೀನಿವಾಸ, ಲೋಕೇಶ್ ಹಾಗೂ ಆನಂದಸಿಂಗ್ ಶಿವಕುಮಾರ್ ಅವರಿಗೆ ಮಾಹಿತಿ ನೀಡಿದರು.

ಈ ಸಂದರ್ಭ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೇಯರ್ ಶಿವಕುಮಾರ್, ಮೇಯರ್ ಆಗಿ ಆಯ್ಕೆಯಾಗುತ್ತಿದ್ದಂತೆಯೇ ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿಗೆ ಗಣ್ಯರೊಂದಿಗೆ ಪುಷ್ಪಾರ್ಚನೆ ಮಾಡುವ ಹಾಗೂ ಲಕ್ಷಾಂತರ ಜನರ ಸಮ್ಮುಖದಲ್ಲಿ ವಿಜಯದಶಮಿ ಮೆರವಣಿಗೆಯಲ್ಲಿ ಕುದುರೆ ಸವಾರಿ ಮಾಡುವ ಅವಕಾಶ ಲಭ್ಯವಾಗಿರುವುದು ನನ್ನ ಪೂರ್ವಜನ್ಮದ ಪುಣ್ಯ ಎಂದರು. ಜಂಬೂಸವಾರಿಗೆ 23 ದಿನ ಬಾಕಿ ಇರುವಾಗ ತರಬೇತಿ ಪಡೆಯಲೆಂದು ಬಂದು ಮೊದಲು ಕುದುರೆ ಮುಖವನ್ನು ಮುಟ್ಟಿದಾಗ ಭಯವಾಯಿತು. ಕುದುರೆಯೇರಿ ಒಂದೆರಡು ಸುತ್ತು ತರಬೇತುದಾರರೊಂದಿಗೆ ಸಾಗಿದ ನಂತರ ನಿಯಂತ್ರಣ ಬಂದಿತು. ಇನ್ನೆರಡು ದಿನಗಳಲ್ಲಿ ಆತ್ಮವಿಶ್ವಾಸ ಬರಲಿದೆ. ನಂತರ ನಾನೇ ಒಬ್ಬಂಟಿಯಾಗಿ ಸವಾರಿ ಮಾಡಬಲ್ಲೇ ಎಂದರು. ದಸರಾ ವಿಜಯದಶಮಿ ಮೆರವಣಿಗೆಯಲ್ಲಿ ಗೌನ್, ಮೈಸೂರು ಪೇಟ ಧರಿಸಿ ಗಜಪಡೆ, ಕುದುರೆಗಳು, ಸ್ತಬ್ಧಚಿತ್ರಗಳು, ಜಾನಪದ ಕಲಾ ತಂಡಗಳೊಂದಿಗೆ ಅರಮನೆ ಆವರಣದಿಂದ ರಾಜಮಾರ್ಗದಲ್ಲಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಮೇಯರ್ ಶಿವಕುಮಾರ್ ಕುದುರೆ ಮೇಲೆ ಕುಳಿತು ಲಕ್ಷಾಂತರ ಮಂದಿಯ ಸಮ್ಮುಖದಲ್ಲಿ ಸಾಗಿ ಐತಿಹಾಸಿಕ ಘಟನೆಗೆ ಸಾಕ್ಷಿಯಾಗಲಿದ್ದಾರೆ.

ಆಡಳಿತದಲ್ಲಿ ಸುಧಾರಣೆ ತರಲು ಸಹಕರಿಸಿ ಪಾಲಿಕೆ ಅಧಿಕಾರಿಗಳಿಗೆ ನೂತನ ಮೇಯರ್ ಶಿವಕುಮಾರ್ ಕಿವಿಮಾತು

ಮೈಸೂರು, ಸೆ.12(ಆರ್‌ಕೆ)– ಆಡಳಿತದಲ್ಲಿ ಸುಧಾರಣೆ ತರಲು ಪ್ರತಿಯೊಬ್ಬರೂ ಸಹಕರಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ನೂತನ ಮೇಯರ್ ಶಿವಕುಮಾರ್ ತಿಳಿಸಿದ್ದಾರೆ. ಪಾಲಿಕೆ ಕಚೇರಿಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಅಧಿಕಾರಿಗಳೊಂದಿಗೆ ಪ್ರಥಮ ಸಭೆ ನಡೆಸಿದ ಅವರು, ಕಚೇರಿಗಳಲ್ಲಿ ಕುಳಿತು ಕಾಲಹರಣ ಮಾಡದೇ ವಾರ್ಡ್‌ಗಳಿಗೆ ಹೋಗಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ನಿಮ್ಮ ಕಾರ್ಯವೈಖರಿಯನ್ನು ಬದಲಿಸಿಕೊಳ್ಳಬೇಕು. ಇಲ್ಲವೇ ಬೇರೆಡೆಗೆ ಹೋಗಲು ಸಿದ್ಧರಾಗಿ ಎಂದು ವಾರ್ನಿಂಗ್ ನೀಡಿದರು.

ಈವರೆಗೆ ಏನಾಯಿತು ಎಂಬುದರ ಬಗ್ಗೆ ಚರ್ಚಿಸುವುದಿಲ್ಲ. ನನ್ನ ಅವಧಿಯಲ್ಲಿ ಕ್ರಿಯಾಶೀಲರಾಗಿ ಆಡಳಿತದಲ್ಲಿ ಸುಧಾರಣೆ ತಂದು ಅಭಿವೃದ್ಧಿ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡಬೇಕೆಂಬುದೇ ನನ್ನ ಧ್ಯೇಯವಾಗಿದೆ. ಮುಂದಿನ ದಿನಗಳಲ್ಲಿ ಕಾರ್ಯವೈಖರಿ ಬದಲಿಸಿಕೊಂಡು ಜನಸ್ನೇಹಿಯಾಗಿ ಕೆಲಸ ಮಾಡಿ ಎಂದು ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು. ಸಭೆಯಲ್ಲಿ ತಪ್ಪು ಮಾಹಿತಿ ನೀಡುವುದು, ಸಮಸ್ಯೆಗಳನ್ನು ಮುಚ್ಚಿಡುವುದು, ವಾಸ್ತವಕ್ಕೆ ದೂರವಾದ ಅಂಶಗಳನ್ನು ವಿವರಿಸುವುದರಿಂದ ಸಮಸ್ಯೆಗಳು ಹೆಚ್ಚಾಗುತ್ತವೆಯೇ ಹೊರತು, ನಿವಾರಣೆಯಾಗುವುದಿಲ್ಲ. ಮೀಟಿಂಗ್‌ಗಳಿಗೆ ಬಂದು ಟೀ–ಕಾಫಿ ಕುಡಿದು, ತಿಂಡಿ ತಿಂದು ಹೋಗುವ ಮನಸ್ಥಿತಿಯನ್ನು ಬಿಡಬೇಕು ಎಂದು ಶಿವಕುಮಾರ್ ತಾಕೀತು ಮಾಡಿದರು.

ತೆರಿಗೆ ಸಂಗ್ರಹ: ನಾಗರಿಕರ ಮೂಲ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಒಳಚರಂಡಿ, ಬೀದಿದೀಪ, ಸ್ಮಶಾನ, ಉದ್ಯಾನವನಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಬೇಕಾದರೆ ಪಾಲಿಕೆಗೆ ಆರ್ಥಿಕ ಸಂಪನ್ಮೂಲ ಅತೀ ಮುಖ್ಯವಾಗಿರುವುದರಿಂದ ಆಸ್ತಿ ತೆರಿಗೆ, ನೀರಿನ ಶುಲ್ಕ, ಟ್ರೇಡ್ ಲೈಸೆನ್ಸ್ ಶುಲ್ಕ ಸೇರಿದಂತೆ ಆದಾಯದ ಮೂಲಗಳನ್ನು ಸದೃಢಪಡಿಸಬೇಕೆಂದು ಮೇಯರ್ ಸೂಚನೆ ನೀಡಿದರು.

ಕಂದಾಯ ವಿಭಾಗದ ಉಪ ಆಯುಕ್ತ ದಾಸೇಗೌಡರು ಪ್ರತಿಕ್ರಿಯೆ ನೀಡಿ ಪ್ರಸಕ್ತ ಸಾಲಿನಲ್ಲಿ 120 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸಲಾಗಿದ್ದು, ವರ್ಷಾಂತ್ಯಕ್ಕೆ 165 ಕೋಟಿ ರೂ. ವಸೂಲಿ ಮಾಡುವ ಗುರಿ ಹೊಂದಿದ್ದೇವೆ ಎಂದರು. ತೆರಿಗೆ ಸಂಗ್ರಹಿಸುವ ಆರ್‌ಐಗಳು, ಬಿಲ್ ಕಲೆಕ್ಟರ್‌ಗಳು ಸೇರಿ 138 ಹುದ್ದೆಗಳಲ್ಲಿ ಶೇ. 50ರಷ್ಟು ಮಾತ್ರ ಇದ್ದರೂ 5 ತಿಂಗಳಲ್ಲಿ ಶೇ.60ರಷ್ಟು ಆಸ್ತಿ ತೆರಿಗೆ ಸಂಗ್ರಹಿಸಿದ್ದೇವೆ ಎಂದು ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು. ಆನ್‌ಲೈನ್ ತೆರಿಗೆ ಪಾವತಿ ವಿಧಾನದಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿದ್ದು, ಸರಿಪಡಿಸಲು ಏಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದ ಮೇಯರ್‌ಗೆ ಉತ್ತರಿಸಿದ ಆಯುಕ್ತರು, ಈಗ ಸಂಗ್ರಹವಾಗಿರುವ 120 ಕೋಟಿ ರೂ. ಆಸ್ತಿ ತೆರಿಗೆಯಲ್ಲಿ 45 ಕೋಟಿ ರೂ. ತೆರಿಗೆ ಆನ್‌ಲೈನ್ ಪೇಮೆಂಟ್ ಮೂಲಕವೇ ಸಂಗ್ರಹವಾಗಿದೆ ಎಂದರು. ಪಾಲಿಕೆ ವ್ಯಾಪ್ತಿಯ ಮಾರುಕಟ್ಟೆಗಳಲ್ಲಿನ 2111 ಮಳಿಗೆಗಳ ಬಾಡಿಗೆಯನ್ನು ಹೆಚ್ಚಿಸಬೇಕು, ಚಾಮರಾಜ ಜೋಡಿ ರಸ್ತೆ, ಕಾಳಿದಾಸ ರಸ್ತೆಗಳಲ್ಲಿ ಮತ್ತಷ್ಟು ಮಳಿಗೆ ನಿರ್ಮಿಸಿದಲ್ಲಿ ವರಮಾನ ಬರುತ್ತದೆ. ಈ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳಲು ಕೌನ್ಸಿಲ್ ಸಭೆಯಲ್ಲಿ ಮಂಡಿಸಿ ಎಂದು ಮೇಯರ್ ತಿಳಿಸಿದರು.

ದಸರಾ ಆರಂಭಕ್ಕೂ ಮುನ್ನ ರಸ್ತೆ ಗುಂಡಿ ಮುಚ್ಚಿಸಿ

ಅಧಿಕಾರಿಗಳಿಗೆ ಮೇಯರ್ ತಾಕೀತು



ಮೈಸೂರು, ಸೆ. 12(ಆರ್‌ಕೆ)– ದಸರಾ ಮಹೋತ್ಸವ ಉದ್ಘಾಟನೆಯಾಗುವ ಮುನ್ನವೇ ಮೈಸೂರು ನಗರದಾದ್ಯಂತ ಉಂಟಾಗಿರುವ ರಸ್ತೆ ಗುಂಡಿಗಳನ್ನು ಮುಚ್ಚಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ನೂತನ ಮೇಯರ್ ಶಿವಕುಮಾರ್ ತಾಕೀತು ಮಾಡಿದ್ದಾರೆ. ಮೇಯರ್ ಆಗಿ ಅಧಿಕಾರ ವಹಿಸಿಕೊಂಡ ಬಳಿಕ ಮೈಸೂರು ಮಹಾನಗರ ಪಾಲಿಕೆ ಕಚೇರಿ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ನಡೆಸಿದ ಪ್ರಥಮ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ನಗರದಾದ್ಯಂತ ಎಲ್ಲಾ ರಸ್ತೆಗಳು ಗುಂಡಿ ಬಿದ್ದು ಹಾಳಾಗಿವೆ. ಇತ್ತೀಚೆಗೆ ಮಳೆ ಸುರಿದ ನಂತರವಂತೂ ವಾಹನಗಳು ಓಡಾಡದಂತಾಗಿವೆ. ನವೆಂಬರ್‌ವರೆಗೂ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ಅತೀ ಬೇಗ ಕಾಮಗಾರಿ ಆರಂಭಿಸಿ, ಒಂದು ವೇಳೆ ಮಳೆ ಮುಂದುವರಿದರೆ ಕೋಲ್ಡ್ ಮಿಕ್ಸ್ ತಂತ್ರಜ್ಞಾನ ಬಳಸಿ ರಸ್ತೆಗಳ ಗುಂಡಿಗಳನ್ನು ಮುಚ್ಚಿಸಿ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಪಾಲಿಕೆ ಎಕ್ಸಿಕ್ಯೂಟಿವ್ ಇಂಜಿನಿಯರ್, ಮೂರ್‍ನಾಲ್ಕು ದಿನ ಮಳೆ ಬರುವುದಿಲ್ಲ ಎಂಬ ಮಾಹಿತಿ ಇರುವುದರಿಂದ ಆ ಅವಧಿಯಲ್ಲಿ ಗುಂಡಿ ಮುಚ್ಚಲು ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ವಾಕಿ–ಟಾಕಿಗೆ ಮರುಜೀವ: ಆಡಳಿತ ಪರಿಣಾಮಕಾರಿಯಾಗಿರಬೇಕು, ಪಾರದರ್ಶಕವಾಗಿ ಸೇವೆ ಒದಗಿಸಲು ಸಹಾಯವಾಗಲೆಂದು ನೀಡಿರುವ ವಾಕಿ–ಟಾಕಿ ಉಪಕರಣಗಳನ್ನು ಬಳಸದಿರುವುದರಿಂದ ಯಾವ ಅಧಿಕಾರಿ ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆಂಬುದೇ ತಿಳಿಯುತ್ತಿಲ್ಲ ಎಂದು ಗರಂ ಆದ ಮೇಯರ್, ನಾಳೆ (ಮಂಗಳವಾರ)ಯಿಂದಲೇ ಪಾಲಿಕೆಯ ಎಲ್ಲಾ ಅಧಿಕಾರಿಗಳೂ ಕಡ್ಡಾಯವಾಗಿ ವಾಕಿ–ಟಾಕಿಗಳನ್ನು ಜೊತೆಯಲ್ಲಿಟ್ಟುಕೊಂಡು ಬಳಸಬೇಕು ಎಂದು ತಾಕೀತು ಮಾಡಿದರು.

ಪ್ರಥಮ ಸ್ವಚ್ಛನಗರ ಗುರಿ: ಮೈಸೂರು ಪ್ರಥಮ ಸ್ವಚ್ಛನಗರ ಎಂಬ ಹೆಗ್ಗಳಿಕೆ ಕಾಪಾಡಿಕೊಳ್ಳಬೇಕು, ಪ್ಲಾಸ್ಟಿಕ್ ನಿಷೇಧ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಶಿಸ್ತಿನಿಂದ ಕೆಲಸ ಮಾಡಿ, ಪರಿಸರ ಇಂಜಿನಿಯರ್‌ಗಳು, ಆರೋಗ್ಯ ಶಾಖೆ ಅಧಿಕಾರಿಗಳು ನಿರಂತರವಾಗಿ ಸ್ಥಳ ಪರಿಶೀಲನೆ ನಡೆಸಿ, ಎಲ್ಲರೂ ಡೈರಿ ನಿರ್ವಹಿಸಬೇಕು. ಆಗ ಮಾತ್ರ ರಾಷ್ಟ್ರೀಯ ಸ್ವಚ್ಛತಾ ಅಭಿಯಾನದಲ್ಲಿ ಮೈಸೂರಿಗೆ ಸ್ವಚ್ಛತಾ ಪ್ರಶಸ್ತಿ ಬರಲು ಸಾಧ್ಯ ಎಂದು ಮೇಯರ್ ತಿಳಿಸಿದರು.

ಮೇಯರ್ ಹೌಸ್ ರಿಪೇರಿ: ಒಂಟಿಕೊಪ್ಪಲಿನಲ್ಲಿರುವ ಮೇಯರ್ ಹೌಸ್ ಶಿಥಿಲಾವಸ್ಥೆಯಲ್ಲಿದ್ದು, ಅದರ ಒಳಗೆ ಕಾಲಿಡಲೂ ಸಾಧ್ಯವಾಗದಷ್ಟು ಹಾಳಾಗಿದೆ. ಪ್ರಥಮ ಪ್ರಜೆಯ ನಿವಾಸವೇ ಹೀಗಿದ್ದರೆ ಬೇರೆ ನಿಮ್ಮಿಂದ ಏನನ್ನು ಸುಸ್ಥಿತಿಯಲ್ಲಿಡಲು ಸಾಧ್ಯ ಎಂದು ಪ್ರಶ್ನಿಸಿದ ಶಿವಕುಮಾರ್, ಅದನ್ನು ದುರಸ್ತಿ ಮಾಡಿಸಿ, ಸಾಧ್ಯವಾಗದಿದ್ದರೆ ಕೆಡವಿ ಹೊಸ ಕಟ್ಟಡ ನಿರ್ಮಿಸಲು ಶೀಘ್ರ ಕ್ರಿಯಾ ಯೋಜನೆ ತಯಾರಿಸಿ ಎಂದು ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಸೂಚಿಸಿದರು.

ಕಪ್ಪು ಪಟ್ಟಿಗೆ ಸೇರಿಸಿ: ಪಾಲಿಕೆ ವಿರುದ್ಧ ನ್ಯಾಯಾಲಯಕ್ಕೆ ಹೋಗುವ ಜಾಹಿರಾತು ಸಂಸ್ಥೆಗಳನ್ನು ಕಪ್ಪು ಪಟ್ಟಿಗೆ ಸೇರಿಸಿ, ಅವರಿಂದ ದಂಡ ಸಮೇತ ಜಾಹೀರಾತು ಹಣ ವಸೂಲು ಮಾಡುವ ಜೊತೆಗೆ ಅವರಿಗೆ ಮುಂದೆ ಜಾಹೀರಾತು ಫಲಕ ಅಳವಡಿಸಲು ಅನುಮತಿ ನೀಡಬಾರದು. ಈ ಬಗ್ಗೆ ಕೌನ್ಸಿಲ್ ಸಭೆಗಳಲ್ಲಿ ಚರ್ಚೆಯಾಗಿರುವುದನ್ನು ಅಧಿಕಾರಿಗಳು ಗಮನಿಸಬೇಕು. ಕೆಲವೆಡೆ ಯಥೇಚ್ಛವಾಗಿ ಜಾಹೀರಾತು ಫಲಕ ಹಾಕಲಾಗಿದೆ, ಅವರು ಶುಲ್ಕ ಪಾವತಿಸಿದ್ದಾರೋ, ಇಲ್ಲವೋ ಎಂಬುದನ್ನು ಪರಿಶೀಲಿಸಿ ಅನಧಿಕೃತ ಫಲಕಗಳನ್ನು ತೆರವುಗೊಳಿಸಿ ಎಂದು ಸೂಚಿಸಿದರು.

ಉಪ ಮೇಯರ್ ಡಾ.ಜಿ.ರೂಪಾ, ಪಾಲಿಕೆ ಹೆಚ್ಚುವರಿ ಆಯುಕ್ತ ಎಂ.ಕೆ.ಸವಿತಾ, ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ, ವಾಣಿವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸುವರ್ಣ, ಒಳಚರಂಡಿ ವಿಭಾಗದ ಸಿಂಧು, ತಾಂತ್ರಿಕ ವಿಭಾಗದ ಮಧುಸೂದನ್ ಸೇರಿದಂತೆ ಹಲವರು ಸಭೆಯಲ್ಲಿ ಹಾಜರಿದ್ದರು.

ಪ್ಲಾಸ್ಟಿಕ್ ಮುಕ್ತ ದಸರಾ ಆಚರಣೆಗೆ ಸಂಕಲ್ಪ ತೊಡೋಣ: ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ನಾಗರಾಜ್ ಮನವಿ



ಮೈಸೂರು, ಸೆ.12 (ಆರ್‌ಕೆಬಿ)– ಈ ಬಾರಿ ಪ್ಲಾಸ್ಟಿಕ್‌ಮುಕ್ತ ದಸರಾ ಆಚರಣೆಯ ಸಂಕಲ್ಪ ತೊಡುವ ಮೂಲಕ ಪರಿಸರಕ್ಕೆ ಮೈಸೂರಿನ ಜನರು ಕೊಡುಗೆ ನೀಡುವಂತೆ ಮೈಸೂರು ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ನಾಗರಾಜ್ ಮನವಿ ಮಾಡಿದರು. ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಮಂಡಿ ಮೊಹಲ್ಲಾದ ಚಿಕ್ಕ ಮಾರ್ಕೆಟ್ ಹಾಗೂ ಸುತ್ತಮುತ್ತ ಅಂಗಡಿ ಮುಂಗಟ್ಟುಗಳಿಗೆ ತೆರಳಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ನಿಷೇಧದ ಬಗ್ಗೆ ವ್ಯಾಪಾರಸ್ಥರು ಹಾಗೂ ಗ್ರಾಹಕರಿಗೆ ಪ್ಲಾಸ್ಟಿಕ್‌ನಿಂದ ಆಗುವ ಅನಾಹುತಗಳ ಬಗ್ಗೆ ಕರಪತ್ರ ಹಾಗೂ ಬಟ್ಟೆ ಬ್ಯಾಗ್ ವಿತರಿಸುವ ಮೂಲಕ ಜನ ಜಾಗೃತಿ ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಸಾಂಸ್ಕೃತಿಕ ರಾಜಧಾನಿ ಮೈಸೂರಿಗೆ ದೇಶ ವಿದೇಶಗಳಿಂದ ಭೇಟಿ ನೀಡುವವರು ಮೈಸೂರು ನಗರ ಸ್ವಚ್ಛ ನಗರ ಪ್ರಶಸ್ತಿ ಪಡೆದಿದೆ. ಆದರೆ ಪ್ಲಾಸ್ಟಿಕ್ ಬಳಕೆ ನಿಷೇಧ ಮಾಡಿಲ್ಲವೇಕೆ ಎಂದು ಪ್ರಶ್ನಿಸುತ್ತಿದ್ದಾರೆ. ಪ್ಲಾಸ್ಟಿಕ್ ಶಾಪಿಂಗ್ ಮಾಲ್‌ವರೆಗೂ ವ್ಯಾಪಿಸಿ, ಪರಿಸರದ ಅಸಮತೋಲನಕ್ಕೆ ಕಾರಣವಾಗುತ್ತಿದೆ. ಹಾಗಾಗಿ ನಗರಪಾಲಿಕೆ ಪ್ಲಾಸ್ಟಿಕ್ ಬಳಕೆ ನಿಷೇಧದ ಬಗ್ಗೆ ಜಾಗೃತಿ ಮೂಡಿಸುತ್ತ ಬಂದಿದೆ. ಆದರೆ ಅದು ಯಶಸ್ವಿಯಾಗಬೇಕಾದರೆ ಜನಾಂದೋಲನವಾದರೆ ಮಾತ್ರ ಸಾಧ್ಯ. ಹೀಗಾಗಿ ಜನಸಾಮಾನ್ಯರು ಪ್ಲಾಸ್ಟಿಕ್ ಬಳಕೆಯನ್ನು ಬಿಡಬೇಕು. ಗ್ರಾಹಕರು ಮನೆಯಿಂದಲೇ ಬರುವಾಗ ಬಟ್ಟೆ ಬ್ಯಾಗ್ ತಂದು ವ್ಯಾಪಾರಸ್ಥರೊಂದಿಗೆ ಸಹಕರಿಸಬೇಕು. ಈ ಬಾರಿ ದಸರಾವನ್ನು ಸಂಪೂರ್ಣವಾಗಿ ಪ್ಲಾಸ್ಟಿಕ್ ಮುಕ್ತವಾಗಿ ಆಚರಿಸುವ ಸಂಕಲ್ಪ ಮಾಡಬೇಕು ಎಂದರು.

ಮೈಸೂರು ರಕ್ಷಣಾ ವೇದಿಕೆಯ ಕಾರ್ಯದರ್ಶಿ ರಾಕೇಶ್ ಭಟ್ ಮಾತನಾಡಿ, ದಸರಾಗೆ ಸಜ್ಜಾಗುತ್ತಿರುವ ಮೈಸೂರು ಹೆಚ್ಚು ಪ್ರವಾಸಿಗರನ್ನು ಸೆಳೆಯುವ ನಿರೀಕ್ಷೆ ಇದೆ. ಪಾಲಿಕೆಯ ಪೌರ ಕಾರ್ಮಿಕರು ಸ್ವಚ್ಛತೆ ಕಾಪಾಡಲು ಹಗಲಿರುಳು ಶ್ರಮಿಸುತ್ತಿದ್ದಾರೆ. ಮೈಸೂರಿನ ಜನರು ಸಾಮಾಜಿಕ ಹೊಣೆಗಾರಿಕೆ ಅರಿತು ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಂಡಿ ಪೊಲೀಸ್ ಠಾಣೆಯ ಉಪ ನಿರೀಕ್ಷಕ ವಿಶ್ವನಾಥ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸುಚೀಂದ್ರ, ಸದಾಶಿವ, ಸ್ಥಳೀಯ ಆರೋಗ್ಯ ನಿರೀಕ್ಷಕ ಬಸವರಾಜು, ಸುಬ್ರಹ್ಮಣ್ಯ, ಕೇಬಲ್ ವಿಜಿ, ಕಿರಣ್, ಚಂದ್ರ, ರಾಜು ಇನ್ನಿತರರು ಉಪಸ್ಥಿತರಿದ್ದರು.

ಸ್ಮಾರಕಗಳ ಸಂರಕ್ಷಣಾ ಛಾಯಾಚಿತ್ರ ಪ್ರದರ್ಶನ

ಮೈಸೂರು, ಸೆ.12– ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ 2022–23ನೇ ಸಾಲಿನ ದಸರಾ ಮಹೋತ್ಸವದ ಅಂಗವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ಹಿರಿಯ ನಾಗರಿಕರಿಗೆ, ಜನಸಾಮಾನ್ಯರಿಗೆ ಹಾಗೂ ಪ್ರವಾಸಿಗರಿಗೆ ಮೈಸೂರಿನ ಇತಿಹಾಸ, ಪಾರಂಪರಿಕ ಕಟ್ಟಡಗಳ ಹಿನ್ನೆಲೆ ಪ್ರಾಮುಖ್ಯತೆ ಹಾಗೂ ವಾಸ್ತುಶಿಲ್ಪ ಶೈಲಿಯ ಮಹತ್ವದ ಬಗ್ಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮಗಳ ಪಟ್ಟಿ: 2022ರ ಸೆಪ್ಟೆಂಬರ್ 26ರಂದು ಬೆಳಗ್ಗೆ 10 ಗಂಟೆಗೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರ ಇಲಾಖೆ, ದಸರಾ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ಸ್ಮಾರಕಗಳ ಸಂರಕ್ಷಣಾ ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸೆಪ್ಟೆಂಬರ್ 29 ರಂದು ಬೆಳಗ್ಗೆ 7 ಗಂಟೆಗೆ ಮೈಸೂರು ಪುರಭವನದ ಆವರಣದಲ್ಲಿ ಪಾರಂಪರಿಕ ಸೈಕಲ್ ಸವಾರಿ (ಟ್ರಿಣ್ ಟ್ರಿಣ್) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸೆಪ್ಟೆಂಬರ್ 30ರಂದು ಬೆಳಗ್ಗೆ 7 ಗಂಟೆಗೆ ಮೈಸೂರು ಪುರಭವನದ ಆವರಣದಲ್ಲಿ ಪಾರಂಪರಿಕ ಉಡುಗೆಯಲ್ಲಿ ದಂಪತಿಗಳಾಗಿ ಪಾರಂಪರಿಕ ಟಾಂಗಾ ಸವಾರಿಯನ್ನು ಏರ್ಪಡಿಸಲಾಗಿದೆ. ಅಕ್ಟೋಬರ್ 1 ರಂದು ಬೆಳಗ್ಗೆ 7 ಗಂಟೆಗೆ ಮೈಸೂರು ಪುರಭವನದ ಆವರಣದಲ್ಲಿ ಪಾರಂಪರಿಕ ನಡಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತರು ಸೆಪ್ಟೆಂಬರ್ 12 ರಿಂದ 21 ರವರೆಗೆ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯೊಳಗಾಗಿ ಉಪನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರ ಇಲಾಖೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ ದೊಡ್ಡಕೆರೆ ಮೈದಾನ, ಮೈಸೂರು ಇಲ್ಲಿ ನೇರವಾಗಿ, ದೂರವಾಣಿ ಮೂಲಕ ಅಥವಾ ಕಚೇರಿಯ ಇ–ಮೇಲ್ ವಿಳಾಸ commr_amh@yahoo.in ಮತ್ತು ddheritagemysore@gmail.com ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಕಡ್ಡಾಯವಾಗಿ ದೂರವಾಣಿ ಮೊಬೈಲ್ ಸಂಖ್ಯೆಗಳನ್ನು ನಮೂದಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 0821–2424671, 2424673 ಹಾಗೂ ಡಾ. ಸಿ.ಎನ್. ಮಂಜುಳಾ ಮೊಬೈಲ್ ಸಂಖ್ಯೆ: 8310250733 ಸಂಪರ್ಕಿಸಿ ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾರ್ಸ್‌ಪಾರ್ಕ್‌ನಲ್ಲಿ ಟೆಂಟ್ ಪೆಗ್ಗಿಂಗ್ ತರಬೇತಿ



ಮೈಸೂರು, ಸೆ. 12(ಆರ್‌ಕೆ)– ದಸರಾ ಜಂಬೂ ಸವಾರಿ ಮೆರವಣಿಗೆಯಂದು ಅರಮನೆ ಆವರಣ ಮತ್ತು ಬನ್ನಿಮಂಟಪದ ಟಾರ್ಚ್‌ಲೈಟ್ ಪರೇಡ್ ಮೈದಾನದಲ್ಲಿ ನಡೆಯಲಿರುವ ಪಥಸಂಚಲನ ಹಾಗೂ ಸಾಹಸ ಪ್ರದರ್ಶನಗಳಿಗೆ ಮೌಂಟೆಡ್ ಪೊಲೀಸ್ ಸಿಬ್ಬಂದಿಗಳನ್ನು ಸಜ್ಜುಗೊಳಿಸಲಾಗುತ್ತಿದೆ.

ಮೌಂಟೆಡ್ ಕಂಪನಿ ಟ್ರೈನರ್‌ಗಳು ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಪೊಲೀಸ್ ಹಾರ್ಸ್‌ಪಾರ್ಕ್‌ನಲ್ಲಿ ಅಶ್ವಾರೋಹಿ ದಳದ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ. ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರ ನಿರ್ದೇಶನದಂತೆ ಕಳೆದ ಒಂದು ವಾರದಿಂದ ಟೆಂಟ್ ಪೆಗ್ಗಿಂಗ್ ಸಾಹಸ ಪ್ರದರ್ಶನ ತರಬೇತಿ ನೀಡಲಾಗುತ್ತಿದ್ದು, ಯಾವುದೇ ಲೋಪವಾಗದಂತೆ ಸಿಬ್ಬಂದಿಗಳನ್ನು ತಯಾರು ಮಾಡಲಾಗುತ್ತಿದೆ. ಮುಖ್ಯಮಂತ್ರಿಗಳು, ಕೇಂದ್ರ ಸಚಿವರು, ರಾಜ್ಯಪಾಲರು, ಸುಪ್ರೀಂಕೋರ್ಟ್, ಹೈಕೋರ್ಟ್ ನ್ಯಾಯಮೂರ್ತಿಗಳೂ ಸೇರಿದಂತೆ ಹಲವು ಅತೀ ಗಣ್ಯರು, ಗಣ್ಯರು ಪಂಜಿನ ಕವಾಯತು, ಸಾಹಸ ಪ್ರದರ್ಶನ ವೀಕ್ಷಿಸುವುದರಿಂದ ಕಾರ್ಯಕ್ರಮ ಯಶಸ್ವಿಗೊಳಿಸಲು ಮೌಂಟೆಡ್ ಕಂಪನಿಯ ಅಧಿಕಾರಿಗಳು ಹಾಗೂ ಟ್ರೈನರ್‌ಗಳು, ಸಿಬ್ಬಂದಿಗಳನ್ನು ಸರ್ವ ರೀತಿಯಲ್ಲಿ ಸಜ್ಜುಗೊಳಿಸುತ್ತಿದ್ದಾರೆ. ಅದೇ ರೀತಿ ಪ್ರದರ್ಶನದಲ್ಲಿ ಪಾಲ್ಗೊಳ್ಳಲಿರುವ ಕುದುರೆಗಳಿಗೂ ಈ ಹಿಂದಿನ ದಸರಾ ಪಂಜಿನ ಕವಾಯತಿನಲ್ಲಿ ಆಯೋಜಿಸಿದ್ದ ಸಾಹಸ ಪ್ರದರ್ಶನ ಕಾರ್ಯಕ್ರಮಕ್ಕನುಸಾರ ಈ ಬಾರಿಯೂ ಆಯೋಜಿಸುವುದರಿಂದ ಅದೇ ಮಾದರಿಯ ತರಬೇತಿ ನೀಡಲಾಗುತ್ತಿದೆ.

ಅರಮನೆ ಆವರಣದಲ್ಲಿ ನಡೆಯಲಿರುವ ಪೊಲೀಸ್ ಪಥಸಂಚಲನದಲ್ಲಿ ಪಾಲ್ಗೊಳ್ಳಲಿರುವ ಪೊಲೀಸ್ ತುಕಡಿಗಳಿಗೂ ಹಾರ್ಸ್‌ಪಾರ್ಕ್‌ನಲ್ಲಿ ತರಬೇತಿ ನೀಡಲಾಗುತ್ತಿದ್ದು, ಇನ್ನೂ ಒಂದು ವಾರ ಮುಂದುವರೆಯಲಿದೆ. ನಂತರ ಅಂತಿಮವಾಗಿ ಮೂರು ದಿನಗಳ ಕಾಲ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲೇ ತಾಲೀಮು ನಡೆಸಲಾಗುವುದು ಎಂದು ಡಾ. ಚಂದ್ರಗುಪ್ತ ತಿಳಿಸಿದ್ದಾರೆ.

ವಿದೇಶಿಗರು ಜಂಬೂಸವಾರಿ ವೀಕ್ಷಿಸಲು ಉಚಿತ ಪಾಸ್

ಮೈಸೂರು,ಸೆ.12(ಪಿಎಂ)– ವಿದೇಶಿ ಪ್ರವಾಸಿಗರು ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆ ವೀಕ್ಷಿಸಲು ಜಿಲ್ಲಾಡಳಿತದ ಸಹಕಾರದೊಂದಿಗೆ ಕಲ್ಪವೃಕ್ಷ ಟ್ರಸ್ಟ್ ಪ್ರತಿವರ್ಷದಂತೆ ಹೊರತಂದಿರುವ ಈ ಬಾರಿಯ ಉಚಿತ ಪಾಸ್‌ಗಳನ್ನು ಸೋಮವಾರ ಮೇಯರ್ ಶಿವಕುಮಾರ್ ಬಿಡುಗಡೆ ಮಾಡಿದರು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಮೈಸೂರು ಮಹಾನಗರ ಪಾಲಿಕೆಯ ತಮ್ಮ ಕೊಠಡಿಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಉಚಿತ ಪಾಸ್‌ಗಳ ಮಾದರಿಯ ಪೋಸ್ಟರ್ ಪ್ರದರ್ಶಿಸುವ ಮೂಲಕ ಪಾಸ್‌ಗಳನ್ನು ಮೇಯರ್ ಶಿವಕುಮಾರ್ ಬಿಡುಗಡೆಗೊಳಿಸಿದರು. ಇದೇ ವೇಳೆ ಮಾತನಾಡಿದ ಟ್ರಸ್ಟ್ ಸಂಚಾಲಕ ದೇವರಾಜು, ನಮ್ಮ ಟ್ರಸ್ಟ್ ಕಳೆದ 10 ವರ್ಷಗಳಿಂದ ವಿದೇಶಿ ಪ್ರವಾಸಿಗರು ಉಚಿತವಾಗಿ ಜಂಬೂ ಸವಾರಿ ಮೆರವಣಿಗೆ ವೀಕ್ಷಿಸಲು ಅನುಕೂಲ ಕಲ್ಪಿಸುತ್ತಿದೆ. ಇದಕ್ಕಾಗಿ ಜಿಲ್ಲಾಡಳಿತವು ಟ್ರಸ್ಟ್‌ಗೆ ಸಯ್ಯಾಜಿರಾವ್ ರಸ್ತೆಯ ಸರ್ಕಾರಿ ಆಯುರ್ವೇದ ಕಾಲೇಜಿನ ಮುಂಭಾಗ ಸ್ಥಳಾವಕಾಶ ನೀಡುತ್ತಿದೆ. ಇಲ್ಲಿ ಸಾವಿರ ಮಂದಿ ಆಸೀನರಾಗಿ ಜಂಬೂ ಸವಾರಿ ಮೆರವಣಿಗೆ ವೀಕ್ಷಿಸಲು ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು. ಅಂತೆಯೇ ಈ ವರ್ಷವೂ ವಿದೇಶಿ ಗರು ಜಂಬೂಸವಾರಿ ವೀಕ್ಷಣೆಗೆ ಇಂದು ಪಾಸ್ ಬಿಡುಗಡೆ ಮಾಡಲಾಗಿದೆ. ಹೋಟೆಲ್ ಮಾಲಿಕರು, ಯೋಗ ಕೇಂದ್ರಗಳು, ವಿದ್ಯಾ ಸಂಸ್ಥೆಗಳು ಕಲ್ಪವೃಕ್ಷ ಟ್ರಸ್ಟ್‌ನ ಪದಾಧಿಕಾರಿಗಳನ್ನು ಸಂಪರ್ಕಿಸಿ (ದೇವರಾಜು–91648 37773, ಪದ್ಮಾ–99458 91099, ಪ್ರಶಾಂತ್–98444 05624) ತಮ್ಮಲ್ಲಿ ವಾಸ್ತವ್ಯ ಹೂಡುವ ವಿದೇಶಿ ಪ್ರವಾಸಿಗರಿಗೆ ಉಚಿತ ಪಾಸ್ ಪಡೆಯಬಹುದು ಎಂದರು.

ಶಾಮಿಯಾನ, ಕುರ್ಚಿ ವ್ಯವಸ್ಥೆ ಮಾಡಿ ಅವರಿಗೆ ಉಚಿತವಾಗಿ ಬಿಸ್ಕತ್ತು, ನೀರು ಹಾಗೂ ಉಪಹಾರ ನೀಡಿ ಸತ್ಕರಿಸಲಾಗುವುದು. ಅಲ್ಲದೆ, ಇಂಗ್ಲಿಷ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಜಂಬೂಸವಾರಿ ಮೆರವಣಿಗೆಯ ವೀಕ್ಷಕ ವಿವರಣೆ ನೀಡಲಾಗುವುದು. ಹೀಗೆ ಮೈಸೂರು ನಗರದ ಘನತೆಯನ್ನು ಎತ್ತಿ ಹಿಡಿಯುವ ಕಾರ್ಯ ಮಾಡುತ್ತಿದ್ದೇವೆ ಎಂದು ತಿಳಿಸಿದರು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಸದಸ್ಯೆ ಲಕ್ಷ್ಮೀದೇವಿ, ಪಾಲಿಕೆ ನಾಮನಿರ್ದೇಶಿತ ಸದಸ್ಯೆ ಆಶಾಸಿಂಗ್, ಕಲ್ಪವೃಕ್ಷ ಟ್ರಸ್ಟ್ ಖಜಾಂಚಿ ಪದ್ಮಾ ಮತ್ತಿತರರು ಹಾಜರಿದ್ದರು.



ಮೈಸೂರು ಮಹಾನಗರ ಪಾಲಿಕೆ ತಮ್ಮ ಕಚೇರಿಯಲ್ಲಿ ವಿದೇಶಿ ಪ್ರವಾಸಿಗರು ಜಂಬೂಸವಾರಿ ಮೆರವಣಿಗೆ ವೀಕ್ಷಿಸಲು ಹೊರತಂದಿರುವ ಉಚಿತ ಪಾಸ್‌ಗಳನ್ನು ಮೇಯರ್ ಶಿವಕುಮಾರ್ ಸೋಮವಾರ ಬಿಡುಗಡೆ ಮಾಡಿದರು.

ಮಂಡ್ಯದ ವಿ.ಸಿ.ಫಾರಂನಲ್ಲಿ 10.5 ಕೋಟಿ ರೂ. ವೆಚ್ಚದ ಕಾಮಗಾರಿ ಉದ್ಘಾಟನೆ

ಮಳೆಹಾನಿ: ಜಿಲ್ಲೆಯಲ್ಲಿ 378.30 ಹೆಕ್ಟೇರ್ ಬೆಳೆ ಹಾನಿ

● ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾಹಿತಿ ● ಮುಂಗಾರು ಹಂಗಾಮಿನಡಿ ಜಿಲ್ಲೆಯಲ್ಲಿ 31,687 ರೈತರು ಬೆಳೆ ವಿಮೆಗೆ ನೋಂದಣಿ

ಮಂಡ್ಯ, ಸೆ.12– ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಈ ಬಾರಿ ಹೆಚ್ಚಿನ ಪ್ರಮಾಣದ ಮಳೆಯಾಗಿದ್ದು, ಅಂದಾಜು 378.30 ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ಹಾನಿಯಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.



ನಗರದ ವಿ.ಸಿ.ಫಾರಂನಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರ ವಸತಿ ನಿಲಯ, ಕಮಾನು, ಡಿಪ್ಲೋಮಾ ಕಾಲೇಜಿನ ವಸತಿ ನಿಲಯ, ಪ್ರಯೋಗಾಲಯ ಹಾಗೂ ವಿವಿಧ ಕಾಮಗಾರಿ ಸೇರಿದಂತೆ ಒಟ್ಟು 10.5 ಕೋಟಿ ರೂ. ವೆಚ್ಚದ ಕಾಮಗಾರಿ ಉದ್ಘಾಟಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆಯು 698.9 ಮಿ.ಮೀ. ಇದ್ದು, ಇದುವರೆಗೂ ಜಿಲ್ಲೆಯಲ್ಲಿ 1077.7 ಮಿ.ಮೀ.ಗೂ ಅಧಿಕ ಮಳೆಯಾಗಿದೆ. ಇದರಿಂದ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ಬೆಳೆಹಾನಿಯಾಗಿದೆ ಎಂದು ಮಾಹಿತಿ ನೀಡಿದರು.

14.19 ಕೋಟಿ ಶಿಷ್ಯ ವೇತನ: ಅಮೃತ ಮಹೋತ್ಸವದ ಅಂಗವಾಗಿ ಮುಖ್ಯಮಂತ್ರಿಗಳು ರೈತ, ಕಾರ್ಮಿಕ ಮಕ್ಕಳಿಗೂ ಸಹ ವಿದ್ಯಾರ್ಥಿ ವೇತನವನ್ನು ನೀಡಬೇಕು ಎಂಬುವಂತಹ ವಿಶೇಷವಾದಂತಹ ಘೋಷಣೆ ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಜಿಲ್ಲೆಯಲ್ಲಿ ಇದುವರೆಗೆ 32,340 ವಿದ್ಯಾರ್ಥಿಗಳಿಗೆ 14.19 ಕೋಟಿ ರೂ. ಶಿಷ್ಯ ವೇತನ ನೀಡಲಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ ಎಂಬ ಹೊಸ ಕಾರ್ಯಕ್ರಮವನ್ನು ರೈತರ ಮಕ್ಕಳಿಗೆ ನೀಡಲು ಆರಂಭಿಸಿ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ವೃತ್ತಿಪರ ಪದವಿಗಳಿಗೆ 2 ಸಾವಿರದಿಂದ ಹನ್ನೊಂದು ವರೆ ಸಾವಿರದವರೆಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ. ಇದರ ಜೊತೆಗೆ 8 ರಿಂದ 10ನೇ ತರಗತಿ ಓದುತ್ತಿರುವ ರೈತರ ಹೆಣ್ಣು ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದ್ದು, ಕಳೆದ ವರ್ಷ 10 ಲಕ್ಷ ಮಕ್ಕಳಿಗೆ 469 ಕೋಟಿ ರೂ. ಅನ್ನು ಮುಖ್ಯಮಂತ್ರಿ ವಿದ್ಯಾರ್ಥಿ ನಿಧಿಯಿಂದ ನೀಡಲಾಗಿದೆ ಎಂದರು.

ರೈತ ಗೀತೆ ಕಡ್ಡಾಯ

ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲಿ ರೈತ ಗೀತೆಯನ್ನು ಕಡ್ಡಾಯಗೊಳಿಸಲಾಗುವುದು. ರೈತನ ಸ್ಥಾನವನ್ನು ಯಾರು ತುಂಬಲು ಸಾಧ್ಯವಿಲ್ಲ. ರೈತನಿದ್ದರೆ ಮಾತ್ರ ದೇಶ. ಜೈ ಕಿಸಾನ್ ಎಂದು ಎಲ್ಲರಿಗೂ ನಮಸ್ಕರಿಸಿ. ಇದರಿಂದ ರೈತನಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಸಚಿವ ಬಿ.ಸಿ.ಪಾಟೀಲ್ ಕಿವಿಮಾತು ಹೇಳಿದರು.

ಗೊಬ್ಬರದ ಕೊರತೆ ಇಲ್ಲ: ಜಿಲ್ಲೆಯಲ್ಲಿ ಇದುವರೆಗೆ 63,031 ಮೆಟ್ರಿಕ್ ಟನ್ ರಸಗೊಬ್ಬರವನ್ನು ವಿತರಿಸಲಾಗಿದೆ. 32,437 ಮೆಟ್ರಿಕ್ ಟನ್ ವಿವಿಧ ರೀತಿಯ ರಸಗೊಬ್ಬರದ ದಾಸ್ತಾನು ಮಾಡಲಾಗಿದ್ದು, ಗೊಬ್ಬರದ ಕೊರತೆ ಇಲ್ಲ ಎಂದು ಮಾಹಿತಿ ನೀಡಿದರು.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್‌ನಿಧಿ ಯೋಜನೆಯಡಿ ಜಿಲ್ಲೆಗೆ ಇದುವರೆಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 2,70,572 ಅರ್ಹ ಫಲಾನುಭವಿಗಳಿಗೆ ಒಟ್ಟು 494.99 ಕೋಟಿ ರೂಗಳನ್ನು ನೀಡಿದ್ದೇವೆ ಪಿಎಂಎಫ್ ಎಂಇ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಶೇ.35ರಷ್ಟು ಹಾಗೂ ರಾಜ್ಯ ಸರ್ಕಾರದಿಂದ ಶೇ.15ರಷ್ಟು ಒಟ್ಟು ಶೇ.50ರಷ್ಟು ಸಹಾಯಧನ ಒದಗಿಸಲಾಗುತ್ತಿದೆ. ಇದರಲ್ಲಿ ಜಿಲ್ಲೆಗೆ 67 ರೈತ ಉದ್ಯಮದಾರರಿಗೆ 19.16 ಕೋಟಿ ರೂ. ಮೊತ್ತದ ಸಾಲ ಮಂಜೂರು ಮಾಡಲಾಗಿದೆ ಎಂದರು. ಜಿಲ್ಲೆಯಲ್ಲಿ ಇದುವರೆಗೂ 31,687 ರೈತರು 10,832 ಹೆಕ್ಟೇರ್ ಪ್ರದೇಶದ ಮುಂಗಾರು ಹಂಗಾಮಿನ ಅಧಿಸೂಚಿಸಿದ ಬೆಳೆಗಳಿಗೆ ವಿಮೆಯನ್ನು ಮಾಡಿಸಿದ್ದಾರೆ. ಕಳೆದ 3 ವರ್ಷಗಳಲ್ಲಿ ಜಿಲ್ಲೆಯ ಎಲ್ಲಾ ಹಂಗಾಮುಗಳಲ್ಲಿ 55,571 ರೈತರು 47,286 ಹೆಕ್ಟೇರ್ ಪ್ರದೇಶದ ಬೆಳೆಗಳಿಗೆ ವಿಮೆ ಮಾಡಿಸಲಾಗಿದ್ದು, 137.6ಲಕ್ಷ ರೂ. ಪ್ರೀಮಿಯಂ ಪಾವತಿ ಮಾಡಿದ್ದಾರೆ. 2,087.43 ಲಕ್ಷ ರೂ. ಮೊತ್ತದ ವಿಮೆ ಪರಿಹಾರವನ್ನು ರೈತರು ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ. ರೈತರಿಗೆ ಸಹಕರಿಸಲು ಹೆಚ್ಚು ಯೋಜನೆಗಳು ರೂಪಿಸಬೇಕು. ಕೃಷಿ ಲಾಭದಾಯಕವಾಗಿ ಮಾರ್ಪಡಿಸಬೇಕು. ಆಗ ಮಾತ್ರ ಹೆಚ್ಚಿನ ಜನರು ಕೃಷಿಯಲ್ಲಿ ತೊಡಗಿಕೊಳ್ಳುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ.ಎಸ್.ರಾಜೇಂದ್ರಪ್ರಸಾದ್, ಡೀನ್ ಡಾ.ಎಸ್.ಎಸ್.ಪ್ರಭು, ಸಹ ಸಂಶೋಧನಾ ನಿರ್ದೇಶಕ ಡಾ.ಎನ್.ಶಿವಕುಮಾರ್, ಸಹ ವಿಸ್ತರಣಾ ನಿರ್ದೇಶಕ ಡಾ.ಡಿ.ರಘುಪತಿ, ಕೃಷಿ ವಿವಿ ವ್ಯವಸ್ಥಾಪನ ಮಂಡಳಿಯ ಸದಸ್ಯರಾದ ಡಾ.ರಾಮಾಂಜನಿಗೌಡ, ಟಿ.ಎಂ.ಅರವಿಂದ್, ದಯಾನಂದ, ಸುರೇಶ್, ಶ್ರೀರಾಮ ಇದ್ದರು.

46 ಲಕ್ಷ ರೈತರಿಂದ ಬೆಳೆ ಸಮೀಕ್ಷೆ

ರೈತ ಶಕ್ತಿ ಯೋಜನೆಯಡಿ ರೈತರಿಗೆ 10 ಲೀಟರ್ ಡೀಸೆಲ್‌ಗೆ 250 ರೂ. ಸಬ್ಸಿಡಿ ನೀಡಲಾಗುವುದು. 'ನನ್ನ ಬೆಳೆ ನನ್ನ ಹಕ್ಕು' ಎಂದು ಬೆಳೆ ಸಮೀಕ್ಷೆ ಆ್ಯಪ್ ಮೂಲಕ ಪ್ರಾರಂಭಿಸಲಾಯಿತು. ಅಂದು ಕೇವಲ 3,000 ರೈತರು ಮಾತ್ರ ತಮ್ಮ ಬೆಳೆ ಸಮೀಕ್ಷೆ ಮಾಡಿದರು. ಇಂದು ರಾಜ್ಯದಲ್ಲಿ 2.10 ಕೋಟಿ ಪ್ಲಾಟ್‌ಗಳಿದ್ದು, 46 ಲಕ್ಷ ರೈತರು ಖುದ್ದು ತಮ್ಮ ಬೆಳೆ ಸಮೀಕ್ಷೆ ಮಾಡಿದ್ದಾರೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆ ಸಮೀಕ್ಷೆಯಲ್ಲಿ ಭಾಗ ವಹಿಸುತ್ತಿದ್ದಾರೆ. ಇದನ್ನು ಪ್ರೋತ್ಸಾಹಿಸಲು ಕೃಷಿ ವಿದ್ಯಾರ್ಥಿಗಳು ಒಂದೊಂದು ಗ್ರಾಮವನ್ನು ಆಯ್ಕೆ ಮಾಡಿ, ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

ಪಂಪ್‌ಸೆಟ್‌ಗೆ ಮೀಟರ್ ಅಳವಡಿಕೆ ವಿರೋಧಿಸಿ ಪ್ರತಿಭಟನೆ



ಶ್ರೀರಂಗಪಟ್ಟಣ, ಸೆ12– ರೈತರ ಜಮೀನಿನಲ್ಲಿರುವ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಲು ಮುಂದಾಗಿರುವ ಕ್ರಮವನ್ನು ವಿರೋಧಿಸಿ ಪಟ್ಟಣದಲ್ಲಿ ಸೋಮವಾರ ರೈತ ಸಂಘಟನೆಯಿಂದ ಪ್ರತಿಭಟನೆ ನಡೆಯಿತು. ಇಲ್ಲಿನ ತಾಲೂಕು ಕಚೇರಿ ಮುಂಭಾಗ ಸಮಾವೇಶಗೊಂಡ ರೈತರು ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತರು ಪಂಪ್‌ಸೆಟ್‌ಗಳನ್ನು ಆಶ್ರಯಿಸಿಕೊಂಡು ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆ ಮಾಡುತ್ತಿದ್ದಾರೆ. ಆದರೆ, ಇಂದಿನ ಸರ್ಕಾರ ರೈತರ ಪರ ನಾವಿದ್ದೇವೆ ಎನ್ನುತ್ತಲೇ ರೈತ ವಿರೋಧಿ ಕೆಲಸಕ್ಕೆ ಮುಂದಾಗಿದೆ. ರೈತರ ಜಮೀನಿನಲ್ಲಿರುವ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಲು ಮುಂದಾಗಿರುವುದು ಖಂಡನೀಯವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಮಗಳಲ್ಲಿ ನಲ್ಲಿ ನೀರಿನ ಸಂಪರ್ಕಕ್ಕೂ ಮೀಟರ್ ಅಳವಡಿಕೆ ಮಾಡಲಾಗುತ್ತಿದೆ. ಬಡವರಿಗೆ ಉಚಿತವಾಗಿ ವಿದ್ಯುತ್ ನೀಡುತ್ತೇವೆ ಎಂದು ಹೇಳಿ ಎಲ್ಲವನ್ನು ವಾಪಸ್ ಪಡೆದುಕೊಳ್ಳುತ್ತಿರುವ ಸರ್ಕಾರದ ಮರ್ಮವೇನು? ಎಂದು ರೈತರು ಚಿಂತೆಯಲ್ಲಿದ್ದಾರೆ. ಈ ಸರ್ಕಾರ ಉಳ್ಳವರ ಪರ ಇರುವ ಸರ್ಕಾರವಾಗಿದ್ದು, ಹೊಸ ಹೊಸ ಕಾನೂನು ರೂಪಿಸುವ ಮೂಲಕ ದೇಶಕ್ಕೆ ಅನ್ನಕೊಡುವ ರೈತರನ್ನು ಸಂಕಷ್ಟಕ್ಕೆ ದೂಡುತ್ತಿದ್ದಾರೆ ಎಂದು ದೂರಿದರು.

ಕೂಡಲೇ ಸರ್ಕಾರ ಹೊಸ ಆದೇಶಗಳನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಬೀದಿಗಿಳಿದು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಅಧ್ಯಕ್ಷ ಮರಳಗಾಲ ಕೃಷ್ಣೇಗೌಡ, ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜೇಶ್‌ಗೌಡ, ಸಂಘದ ಜಿಲ್ಲಾ ಉಪಾಧ್ಯಕ್ಷ ಮೇಳಾಪುರ ಸ್ವಾಮೀಗೌಡ, ಮುಖಂಡರಾದ ಶಂಕರೇಗೌಡ, ಬಾಲಕೃಷ್ಣ, ರಮೇಶ್, ಪಾಂಡು, ಕುಬೇರಪ್ಪ, ರವಿಚಂದ್ರ, ಸುರೇಶ್, ಜಯರಾಮು, ಶಂಭುಗೌಡ, ಚಂದ್ರು ಇದ್ದರು.

ಆಲಂಬಾಡಿ ಕೃಷಿ ಪತ್ತಿನ ಸಂಘಕ್ಕೆ 3.5 ಲಕ್ಷ ರೂ. ನಿವ್ವಳ ಲಾಭ

ಕೆ.ಆರ್.ಪೇಟೆ, ಸೆ.12– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಅಲಂಬಾಡಿ ಕಾವಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2021–22ನೇ ಸಾಲಿನಲ್ಲಿ 3.5ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಎ.ಟಿ.ಕರಿಶೆಟ್ಟಿ ಮಾಹಿತಿ ನೀಡಿದರು.



ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನದ ಚೆಕ್ ವಿತರಿಸಲಾಯಿತು.

ಸಂಘದ ಕಚೇರಿಯಲ್ಲಿ ಸೋಮವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ಸಂಘವು ಸುಮಾರು ಒಂದು ಕೋಟಿಯಷ್ಟು ವ್ಯವಹಾರ ನಡೆಸಿದೆ. ಇದರಿಂದ ಹೆಚ್ಚಿನ ನಿವ್ವಳ ಲಾಭ ಬಂದಿದೆ ಎಂದು ತಿಳಿಸಿದರು.

ಜಿಪಂ ಮಾಜಿ ಸದಸ್ಯ ಬಿ.ನಾಗೇಂದ್ರಕುಮಾರ್ ಮಾತನಾಡಿ, ರೈತರ ಜೀವನಾಡಿಯಾಗಿರುವ ಸಹಕಾರ ಸಂಘಗಳನ್ನು ಉಳಿಸಿ ಬೆಳೆಸಬೇಕು ಎಂದು ಮನವಿ ಮಾಡಿದರು.

ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ. ಅಶೋಕ್ ಮಾತನಾಡಿ, ವಾಣಿಜ್ಯ ಬ್ಯಾಂಕ್‌ಗಳಿಗಿಂತ ಸಹಕಾರ ಸಂಘಗಳು ರೈತರ ಬೆನ್ನೆಲುಬಾಗಿ ನಿಂತಿವೆ. ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಸಂಸ್ಥೆಯಾಗಿದೆ. ಹಾಗಾಗಿ ಶೇರುದಾರರು ಸಹಕಾರ ಬ್ಯಾಂಕ್‌ಗಳಲ್ಲಿ ಹೆಚ್ಚು ಠೇವಣಿ ಇಟ್ಟು ಬ್ಯಾಂಕ್ ಬೆಳೆಯುವಲ್ಲಿ ಪ್ರಮುಖ ಪಾತ್ರವಹಿಸಬೇಕು ಎಂದು ಮನವಿ ಮಾಡಿದರು.

ಜೆರಾಕ್ಸ್‌ಗೆ ಅಗತ್ಯಕ್ಕಿಂತ ಹೆಚ್ಚು ವೆಚ್ಚ: ಗ್ರಾಮದ ಯುವ ಮುಖಂಡರಾದ ಪುನೀತ್ ಕುಮಾರ್, ಗಣೇಶ್, ಧರ್ಮ, ಮಂಜು, ರಾಜು, ಪ್ರವೀಣ್ ಮಾತನಾಡಿ, ಸಂಘದಲ್ಲಿ ದಾಖಲೆಗಳ ಜೆರಾಕ್ಸ್ ಮಾಡಿಸಲು ವರ್ಷದಲ್ಲಿ 60 ಸಾವಿರ ವೆಚ್ಚ ಮಾಡಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ವರ್ಷಕ್ಕೆ ಇಷ್ಟೊಂದು ಜೆರಾಕ್ಸ್‌ಗಾಗಿ ವೆಚ್ಚ ಮಾಡುವ ಬದಲು ಜೆರಾಕ್ಸ್ ಯಂತ್ರವನ್ನೇ ಖರೀದಿಸಿ ಅನಗತ್ಯ ವೆಚ್ಚ ಕಡಿಮೆ ಮಾಡಿ ಉಳಿತಾಯ ಸಾಧಿಸಬೇಕು ಎಂದು ಆಗ್ರಹಿಸಿದರು. ಇದಕ್ಕೆ ಉತ್ತರಿಸಿದ ಅಧ್ಯಕ್ಷ ಕರಿಶೆಟ್ಟಿ ಈ ಬಗ್ಗೆ ಆಡಳಿತ ಮಂಡಳಿಯಲ್ಲಿ ತೀರ್ಮಾನ ಕೈಗೊಂಡು ಮಿತವ್ಯಯ ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಐಪನಹಳ್ಳಿ ನಾಗೇಂದ್ರ ಕುಮಾರ್, ತಾಪಂ ಮಾಜಿ ಸದಸ್ಯರಾದ ಎ.ಎಂ.ಸಂಜೀವಪ್ಪ, ಮುತ್ತಮ್ಮ ನಾಗರಾಜು, ಟಿಎಪಿಸಿಎಂಎಸ್ ನಿರ್ದೇಶಕ ಮೋಹನ್, ಸಂಘದ ಮಾಜಿ ಅಧ್ಯಕ್ಷ ಜಿ.ಎ.ರಾಯಪ್ಪ, ಮೇಲ್ವಿಚಾರಕ ಜಲೇಂದ್ರ, ಸಂಘದ ಉಪಾಧ್ಯಕ್ಷ ರಾಜಾನಾಯಕ್, ನಿರ್ದೇಶಕರಾದ ಸಂಜೀವಪ್ಪ ಡಿ.ಸುರೇಶ್, ಮಹದೇವಪ್ಪ, ನಾಗೇಗೌಡ, ಎ.ಎಂ.ಪುಟ್ಟಶೆಟ್ಟಿ, ಜಿ.ಎಸ್.ಕುಮಾರ್, ಎ.ಎನ್.ಆಶಾ, ಶಾಂತಮ್ಮ, ರಾಜೇಗೌಡ, ಅಬ್ದುಲ್ ಸಿದ್ದಿಕ್, ಸಂಘದ ಸಿಇಓ ಕಾಳೇಗೌಡ, ಗುಮಾಸ್ತ ಧರ್ಮ ಇದ್ದರು.


ಮೇಲುಕೋಟೆ: ಗರುಡ ವಾಹನದಲ್ಲಿ ಚೆಲುವನಾರಾಯಣಸ್ವಾಮಿಯ ವೈಭವ

ಮೇಲುಕೋಟೆ, ಸೆ.12– ಶ್ರೀಚೆಲುವನಾರಾಯಣಸ್ವಾಮಿಗೆ ಸೋಮವಾರ ಗರುಡ ವಾಹನೋತ್ಸವ ಸಂಭ್ರಮದಿಂದ ನೆರವೇರಿತು. ಈ ಮೂಲಕ ಮೇಲುಕೋಟೆಯಲ್ಲಿ ತಿರುಪವಿತ್ರೋತ್ಸವ ಸಂಪನ್ನಗೊಂಡಿತು.

ಚಿನ್ನಲೇಪನ ದೊಡ್ಡಗರುಡನ ಮೇಲೆ ವಿರಾಜಮಾನನಾದ ಚೆಲುವನಾರಾಯಣ ಸ್ವಾಮಿಯ ಉತ್ಸವ ನಾಲ್ಕೂ ಪ್ರಮುಖ ಉತ್ಸವ ಬೀದಿಗಳಲ್ಲಿ ನೆರವೇರಿತು. ಭವ್ಯವಾದ ಪುಷ್ಪ ಹಾರಗಳಿಂದ ಅಲಂಕೃತನಾಗಿ ಗರುಡರೂಢನಾದ ಸ್ವಾಮಿಯನ್ನು ನೂರಾರು ಭಕ್ತರು ದರ್ಶನ ಮಾಡಿ ಪುನೀತರಾದರು. ಮಹೋತ್ಸವದ ಅಂಗವಾಗಿ ಮಂಡಲ ಮತ್ತು ಕಳಸಗಳನ್ನು ಸ್ಥಾಪಿಸಿ ಯಾಗ ಶಾಲೆಯಲ್ಲಿ ಎರಡೂ ವೇಳೆ ಯಜ್ಞಕಾರ್ಯ ನಡೆಸಿ ವೇದ–ಮಂತ್ರಗಳೊಂದಿಗೆ ಪವಿತ್ರೋತ್ಸವವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು.



ಸುಬ್ಬೇಗೌಡರು ನಿಧನ



ಕೆ.ಆರ್.ಪೇಟೆ, ಸೆ.12– ತಾಲೂಕಿನ ಬೂಕನಕೆರೆ ಹೋಬಳಿಯ ದೊಡ್ಡಾಡಿಗನಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ಯಜಮಾನ್ ಸುಬ್ಬೇಗೌಡರು(78) ಸೋಮವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಗ್ರಾಪಂ ಸದಸ್ಯ ರಂಗರಾಜು ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೆ. 13ರಂದು ಮಂಗಳವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ದೊಡ್ಡಗಾಡಿಗನಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನರಚನಹಳ್ಳಿ ಗ್ರಾಪಂನಲ್ಲಿ ಜಮಾಬಂಧಿ ಕಾರ್ಯಕ್ರಮ



ಭೇರ್ಯ, ಸೆ.12– ಗ್ರಾಪಂನಲ್ಲಿ ಎಷ್ಟೆಷ್ಟು ಅನುದಾನ ಖರ್ಚಾಗಿದೆ ಎಂಬ ಬಗ್ಗೆ ಜನಸಾಮಾನ್ಯರಿಗೆ ತಿಳಿಸುವ ವೇದಿಕೆಯೇ ಜಮಾಬಂಧಿ ಕಾರ್ಯಕ್ರಮ ಎಂದು ನರಚನಹಳ್ಳಿ ಗ್ರಾಪಂ ಅಧ್ಯಕ್ಷ ವಡ್ಡರಕೊಪ್ಪಲು ಮೋಹನ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಮಿರ್ಲೆ ಹೋಬಳಿ ನರಚನಹಳ್ಳಿ ಗ್ರಾಪಂನಲ್ಲಿ ಹಮ್ಮಿಕೊಂಡಿದ್ದ ಜಮಾಬಂಧಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 2021–22ನೇ ಸಾಲಿನಲ್ಲಿ ಸರ್ಕಾರದಿಂದ 1.8 ಕೋಟಿ ಅನುದಾನ ಬಂದಿದ್ದು, ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಬಳಸಿಕೊಳ್ಳಲಾಗಿದೆ. ಈ ಹಿಂದೆ ಇದ್ದ ಪ್ರಾರಂಭಿಕ ಶುಲ್ಕ 24.30 ಲಕ್ಷದಲ್ಲಿ ಸ್ವಲ್ಪ ಹಣ ಬಳಸಲಾಗಿದೆ ಎಂದರು.

ನರೇಗಾ ಯೋಜನೆಯಡಿ ಕೆರೆಕಟ್ಟೆಗಳ ಅಭಿವೃದ್ಧಿ, ಗ್ರಾಮಸ್ಥರ ಕೊಟ್ಟಿಗೆ ನಿರ್ಮಾಣ, ಕೃಷಿಹೊಂಡ, ಜಮೀನು ಅಭಿವೃದ್ಧಿ ಸೇರಿದಂತೆ ಅನೇಕ ಕಾಮಗಾರಿ ಮಾಡಲು 51.61 ಲಕ್ಷ ರೂ. ಕೂಲಿ ಕಾರ್ಮಿಕರಿಗೆ ನೀಡಲಾಗಿದೆ. 15ನೇ ಹಣಕಾಸು ಯೋಜನೆಯಡಿ 47 ಲಕ್ಷ ಅನುದಾನದಲ್ಲಿ ಚರಂಡಿ, ಅಂಗನವಾಡಿ, ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿ ಮಾಡಲಾಗಿದೆ ಎಂದರು.

ಹೊಸದಾಗಿ ಶೌಚಾಲಯಕ್ಕೆ ಅರ್ಜಿ ನೀಡಿದ ಫಲಾನುಭವಿಗಳಿಗೆ 2.10 ಲಕ್ಷ ರೂ.ಗಳನ್ನು ಶೌಚಾಲಯ ನಿರ್ಮಾಣಕ್ಕೆ ನೀಡಲಾಗಿದ್ದು, ಸದಸ್ಯರ ಗೌರವಧನ 2.74 ಲಕ್ಷ ಬಳಕೆ ಮಾಡಲಾಗಿದೆ. ಇತರೆ 38 ಸಾವಿರ ಖರ್ಚು ಮಾಡಲಾಗಿದೆ ಎಂದು ಸಂಕ್ಷಿಪ್ತವಾಗಿ ಮಾಹಿತಿ ನೀಡಿದರು.

ತಾಲೂಕು ನೋಡಲ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅಶೋಕ್ ಮಾತನಾಡಿ, ಎಲ್ಲಾ ಕಾಮಗಾರಿಗಳ ಖರ್ಚು–ವೆಚ್ಚದ ಬಗ್ಗೆ ಜನರಿಗೆ ಹಾಗೂ ಸದಸ್ಯರಿಗೆ ಸಭೆಯಲ್ಲಿ ಓದಿ ಹೇಳಲಾಗಿದೆ. ಆಕ್ಷೇಪಣೆ ಬಂದಲ್ಲಿ ಪರಿಶೀಲಿಸಿ ಅನುಮಾನ ಪರಿಹರಿಸಿಕೊಳ್ಳಬಹುದು. ನಮಗಳ ಸಮ್ಮುಖದಲ್ಲಿ ಜನರು ಪರಿಶೀಲಿಸುವುದೇ ಜಮಾಬಂಧಿ, ಇಲ್ಲಿ ಜನರು ನೇರವಾಗಿ ತಿಳಿದುಕೊಳ್ಳಲು ಅವಕಾಶವಿದೆ. ಗ್ರಾಮಗಳಲ್ಲಿ ನಡೆಯುವ ಕಾಮಗಾರಿಗಳಲ್ಲಿ ಅವ್ಯವಹಾರ, ಅನುಮಾನ ಬಂದಲ್ಲಿ ಜನರು ತಿಳಿದು ಪರಿಶೀಲಿಸುವ ಅವಕಾಶವಿರುವುದರಿಂದ ಗ್ರಾಮಸ್ಥರು ತಮ್ಮ ಅಭಿಪ್ರಾಯ ತಿಳಿಸಬಹುದು ಎಂದರು.

2021–22ನೇ ಸಾಲಿನಲ್ಲಿ ನಡೆದಿರುವ ಕಾಮಗಾರಿಗಳ ಪಟ್ಟಿಯನ್ನು ಪಿಡಿಓ ಗೋವಿಂದರಾಜು ಓದಿ ಸಭೆಯಲ್ಲಿ ಮಂಡಿಸಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಉಪಾಧ್ಯಕ್ಷೆ ನಾಗಮಣಿ, ಸದಸ್ಯರಾದ ಅರುಣಕುಮಾರ್, ಸುಪ್ರಿತಾ, ಕೃಷ್ಣಯ್ಯ, ಸುಜಾತಾ, ಪ್ರಮೀಳಾ, ನವೀನ, ಶಿವಮ್ಮ, ಮಂಜು, ರುಕ್ಮಿಣಿ, ಕೆ.ಎಂ.ಮಂಜುನಾಥ್ ಹಾಗೂ ಪಂಚಾಯತಿ ಸಿಬ್ಬಂದಿ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು ಭಾಗವಹಿಸಿದ್ದರು.

ಯುವ ಪೀಳಿಗೆ ಮಾನಸಿಕ, ದೈಹಿಕ ಆರೋಗ್ಯ ಕಾಪಾಡಿಕೊಳ್ಳಿ

ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಚಾಲನೆ



ನಂಜನಗೂಡು, ಸೆ.12– ಯುವ ಪೀಳಿಗೆ ಚಟಗಳಿಗೆ ಬಲಿಯಾಗದೆ ಕ್ರೀಡೆಗಳಲ್ಲಿ ಭಾಗವಹಿಸುವ ಮೂಲಕ ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್ ತಿಳಿಸಿದರು.

ತಾಲೂಕಿನ ಹೆಮ್ಮರಗಾಲದಲ್ಲಿ ಗ್ರಾಮ ದೇವತೆ ಮಾಲಸರಮ್ಮ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಜಿಲ್ಲಾ ಮಟ್ಟದ ಕಬ್ಬಡಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸಲಾಗುತ್ತಿತ್ತು. ಪ್ರಸ್ತುತ ಯುವಕರು ಕ್ರಿಕೆಟ್ ಸೇರಿದಂತೆ ಇತರ ಕ್ರೀಡೆಗಳಲ್ಲಿ ಹೆಚ್ಚಾಗಿ ಭಾಗವಹಿಸುತ್ತಿದ್ದು, ಗ್ರಾಮೀಣ ಕ್ರೀಡೆಗೆ ಪ್ರೋತ್ಸಾಹ ಇಲ್ಲದಂತಾಗಿದೆ. ಹೆಮ್ಮರಗಾಲ ಗ್ರಾಮ ರಾಜ್ಯ ಮಟ್ಟದ ಕಬ್ಬಡಿ, ವಾಲಿವಾಲ್ ಕ್ರೀಡಾಪಟುಗಳಿಗೆ ಹೆಸರಾಗಿತ್ತು ಆದ್ದರಿಂದ ಗ್ರಾಮೀಣ ಯುವಕರು ತಮ್ಮ ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಪ್ರತಿಯೊಂದು ಕ್ರೀಡೆಗಳಲ್ಲಿ ಭಾಗವಹಿಸಬೇಕು ಎಂದರು.


ಹಿಂದುಳಿದ ವರ್ಗದ ಮೋರ್ಚಾ ಕಾರ್ಯದರ್ಶಿ ಸೋಮಣ್ಣ ಮಾತನಾಡಿ, ಯುವಕರು ಗ್ರಾಮೀಣ ಸೊಗಡಿನ ಆಟಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಬೇಕು. ಕ್ರೀಡೆಯಿಂದ ಮನುಷ್ಯನಿಗೆ ಉತ್ತಮ ಆರೋಗ್ಯ ದೊರಕುತ್ತದೆ ಎಂದು ಕಿವಿಮಾತು ಹೇಳಿದರು.

ಈ ವೇಳೆ ಬಿಜೆಪಿ ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ, ತಾಪಂ ಮಾಜಿ ಸದಸ್ಯ ಶಿವಣ್ಣ, ಎಸ್‌ಐ ಮಹೇಂದ್ರ, ಗ್ರಾಪಂ ಸದಸ್ಯರಾದ ರಘು, ರವಿಕುಮಾರ್, ನಾಗರಾಜ್, ಮಹದೇವು, ಕರಿಯಪ್ಪ ಮುಖಂಡರಾದ ಮಾದಶೆಟ್ಟಿ, ಶಿವಯ್ಯಶೆಟ್ಟಿ ಸೇರಿದಂತೆ ಇತರರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಹುಣಸೂರು, ಸೆ.12– ಹುಣಸೂರು, ಹೊಸೂರು ಗೇಟ್ ಮತ್ತು ಬನ್ನಿಕುಪ್ಪೆ ವಿದ್ಯುತ್ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಹುಣಸೂರು ನಗರ, ಕಟ್ಟೆಮಳಲವಾಡಿ, ಹರವೆ, ಚಿಲ್ಕುಂದ, ಗುರುಪುರ, ಉಮ್ಮತ್ತೂರು, ಗೋವಿಂದನಹಳ್ಳಿ ಮತ್ತು ಬನ್ನಿಕುಪ್ಪೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೆ.13 ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನೇಮಕ



ತಿ.ನರಸೀಪುರ, ಸೆ12– ವರುಣಾ ವಿಧಾನ ಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಾರ್ಯದರ್ಶಿಯಾಗಿ ಅಲಗೂಡು ಎಂ. ವೆಂಕಟರಮಣಶೆಟ್ಟಿ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಂಚ ಕೇಳುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಎಚ್ಚರಿಕೆ



ಹೆಚ್.ಡಿ.ಕೋಟೆ, ಸೆ12– ಮಳೆಯಿಂದಾಗಿ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಮನೆ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಅಧಿಕಾರಿಗಳು ಲಂಚ ಕೇಳುತ್ತಿದ್ದಾರೆ ಎಂಬ ದೂರುಗಳು ಕೇಳಿ ಬಂದಿದ್ದು, ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಎಚ್ಚರಿಕೆ ನೀಡಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಪ್ರಕೃತಿ ವಿಕೋಪ ನಿರ್ವಹಣಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಹಾನಿಗೊಳಗಾಗಿರುವ ಮನೆಗಳನ್ನು ಪರಿಶೀಲಿಸಿ, ಹೊಸದಾಗಿ ಮನೆ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಫಲಾನುಭವಿಗಳಿಂದ ಅಧಿಕಾರಿಗಳು ಲಂಚ ಕೇಳುತ್ತಿದ್ದಾರೆ ಎಂಬ ಬಗ್ಗೆ ಸಾಕಷ್ಟು ದೂರುಗಳು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಮನೆ ಕಳೆದುಕೊಂಡು ಸಾಕಷ್ಟು ಕುಟುಂಬಗಳು ಬೀದಿ ಪಾಲಾಗಿದ್ದು, ಅವರ ಬಳಿ ಹಣ ವಸೂಲಿ ಮಾಡುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ತಹಸೀಲ್ದಾರ್ ಸೂಚಿಸಿದರು.

ಎರಡೂ ತಾಲೂಕಿನಲ್ಲಿಯೂ ಸುಮಾರು ಎರಡೂವರೆ ಸಾವಿರ ಮನೆಗಳು ಹಾನಿಗೊಳಗಾಗಿವೆ. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಹಾನಿಗೊಳಗಾಗಿರುವ ಫಲಾನುಭವಿಗಳಿಗೆ ಮನೆ ನೀಡಲು ಕ್ರಮ ಕೈಗೊಳ್ಳಬೇಕು ಎಂದರು. ತಹಸೀಲ್ದಾರ್ ರತ್ನಾಂಬಿಕಾ ಮಾತನಾಡಿ, ಫಲಾನುಭವಿಗಳ ಹತ್ತಿರ ಮನೆ ನಿರ್ಮಾಣಕ್ಕೆ ಅಧಿಕಾರಿಗಳು ಲಂಚ ಕೇಳಿದರೆ ನನಗೆ ಮಾಹಿತಿ ನೀಡಿ. ಅಂತವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಸೆ.30 ರವರೆಗೂ ಅರ್ಜಿ ಹಾಕಲು ಕಾಲಾವಕಾಶವಿದ್ದು, ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು.

ಸಭೆಯಲ್ಲಿ ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಇಓ ಸುರೇಶ್ ಜೆರಾಲ್ಡ್, ಸುಷ್ಮಾ, ತಾಲೂಕು ಆರೋಗ್ಯ ಅಧಿಕಾರಿ ರವಿಕುಮಾರ್, ಕೃಷಿ ಅಧಿಕಾರಿ ರಂಗಸ್ವಾಮಿ, ರಾಮೇಗೌಡ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಆರ್‌ಐ ಮಹೇಶ್, ಯೋಗೇಂದ್ರ, ಮೋಹನಸ್ರಿ, ಪುರಸಭಾ ಸದಸ್ಯ ಹೆಚ್.ಸಿ. ನರಸಿಂಹಮೂರ್ತಿ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ ಇತರರಿದ್ದರು.

ಸದಸ್ಯರು ಸಕಾಲದಲ್ಲಿ ಸಾಲ ಮರುಪಾವತಿಸಿ

● ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಮಹದೇವಣ್ಣ ● ಸೆ.17ರಂದು ವಾರ್ಷಿಕ ಮಹಾಸಭೆ



ತಿ.ನರಸೀಪುರ, ಸೆ.12– ಸಾಲ ಪಡೆದ ಸದಸ್ಯರು ಸಕಾಲದಲ್ಲಿ ಮರುಪಾವತಿಸಿ, ಬಡ್ಡಿ ಸಹಾಯಧನ ಸೌಲಭ್ಯ ಪಡೆದುಕೊಳ್ಳುವಂತೆ ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಎಂ.ಮಹದೇವಣ್ಣ ತಿಳಿಸಿದರು.

ತಿ.ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಸಭಾಂಗಣದಲ್ಲಿ ನಡೆದ ನಿರ್ದೇಶಕರ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬ್ಯಾಂಕ್‌ನ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರದ ಕಾರಣ ಸಾಲ ಪಡೆದ ರೈತರು, ಸುಸ್ತಿಯಾದಲ್ಲಿ ಯಾವ ಬಡ್ಡಿ ರಿಯಾಯಿತಿ ಸೌಲಭ್ಯಗಳೂ ಇರುವುದಿಲ್ಲ. ಆದ್ದರಿಂದ ಸಾಲ ಮರುಪಾವತಿ ಮಾಡುವ ಮೂಲಕ ಬ್ಯಾಂಕ್‌ನ ಆರ್ಥಿಕ ಸುಧಾರಣೆಗೆ ಸಹಕರಿಸುವಂತೆ ಕೋರಿದರು.

ಬ್ಯಾಂಕ್ ವ್ಯವಸ್ಥಾಪಕ ಎನ್.ಮಹೇಶ್ ಮಾತನಾಡಿ, ನಮ್ಮ ಬ್ಯಾಂಕ್‌ನಲ್ಲಿ ಛಾಪಕಾಗದ ವ್ಯವಸ್ಥೆ ಕಲ್ಪಿಸಲಾಗಿದ್ದು, ರೈತರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದ ಅವರು ಸೆ.17ರಂದು ಬೆಳಗ್ಗೆ 11 ಗಂಟೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಹಿಂಭಾಗವಿರುವ ಗುರುಭವನದಲ್ಲಿ 2021–2022ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಕರೆಯಲಾಗಿದ್ದು, ಎಲ್ಲಾ ಸದಸ್ಯರು ಸಭೆಗೆ ಆಗಮಿಸಿ ಸಭೆ ಯಶಸ್ವಿಗೊಳಿಸಬೇಕಾಗಿ ಮನವಿ ಮಾಡಿದರು. ಸದಸ್ಯತ್ವ ಪಡೆಯಲು ಎ ತರಗತಿ ಷೇರು 500 ರೂ. ನಿಂದ 1000 ರೂ.ಗೆ ಹೆಚ್ಚಿಸಿ ಬೈಲಾ ತಿದ್ದುಪಡಿ ಮಾಡಲಾಗಿದೆ ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ಬಿ.ಎಂ.ಲಿಂಗರಾಜು, ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ನಿರ್ದೇಶಕರಾದ ಎಂ.ಎಸ್.ಶಿವಮೂರ್ತಿ, ಬಿ.ಸಿ.ಪಾರ್ಥಸಾರಥಿ, ಎನ್.ಎನ್.ಮಹದೇವಸ್ವಾಮಿ, ಟಿ.ಎಸ್.ಸಿದ್ದರಾಜು, ಎನ್.ಲಿಂಗಪ್ಪಾಜಿ, ಎಂ.ನಾಗರತ್ನ, ಗಂಗಮ್ಮ, ವಿರೂಪಾಕ್ಷ, ಪ್ರೇಮಕುಮಾರ್, ಸುಂದರ್, ಕೆ.ವಿ.ಸಿದ್ದಮಲ್ಲಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಎನ್‌ಎಸ್‌ಎಸ್ ಘಟಕ ಉದ್ಘಾಟನೆ



ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಅನಿಕೇತನ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕ ಉದ್ಘಾಟಿಸಲಾಯಿತು. ಕಾಲೇಜು ಪ್ರಾಂಶುಪಾಲ ಬಸವರಾಜ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ನಿವೃತ್ತ ಶಿಕ್ಷಣ ಇಲಾಖಾಧಿಕಾರಿ ಗೊರಳ್ಳಿ ಮರಿಯಪ್ಪ, ಪತ್ರಕರ್ತರಾದ ಶಿವದೇವ್ ಜೆ.ಎನ್.ಲೋಕೇಶ್, ರಾಮೇಗೌಡ ಮಾಗಳಿ, ಬಿ.ಎಸ್. ಪ್ರಸನ್ನ, ಸಂಸ್ಥೆ ಕಾರ್ಯದರ್ಶಿ ಸೋಮಣ್ಣ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.



ಬನ್ನೂರಿನ ಎಸ್‌ಬಿಐ ಕಚೇರಿಯಲ್ಲಿ ಸೋಮವಾರ ಸಾರ್ವಜನಿಕರಿಗೆ ತಿಳುವಳಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ವ್ಯವಸ್ಥಾಪಕ ಭಾದುಸಿಂಗ್ ಮತ್ತು ಸಹಾಯಕ ವ್ಯವಸ್ಥಾಪಕ ಪ್ರಸನ್ನಕುಮಾರ್ ಸೇರಿದಂತೆ ಗ್ರಾಹಕರು ಉಪಸ್ಥಿತರಿದ್ದರು.

ನಾಚಿಮುತ್ತುಗೌಡ ನಿಧನ



ಕಂಪಲಾಪುರ, ಸೆ.12– ಕಂಪಲಾಪುರ ಗ್ರಾಪಂ ಉಪಾಧ್ಯಕ್ಷ ಕೆ.ಎನ್.ರಾಮಲಿಂಗಂ ಅವರ ತಂದೆ ನಾಚಿಮುತ್ತುಗೌಡ (83) ಭಾನುವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮಾಜಿ ಸಚಿವ ಕೆ.ವೆಂಕಟೇಶ್ ಸೇರಿದಂತೆ ಅನೇಕ ಗಣ್ಯರು ಮೃತರ ಅಂತಿಮ ದರ್ಶನ ಪಡೆದರು. ಸೋಮವಾರ ಗ್ರಾಮದ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹುಲಿ ಸೆರೆ ಕಾರ್ಯಾಚರಣೆ ಪ್ರಾರಂಭ



ಸಿದ್ದಾಪುರ, ಸೆ.12– ಹಾಡಹಗಲೇ ಹಸುವೊಂದರ ಮೇಲೆ ಹುಲಿ ದಾಳಿ ನಡೆಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮಸ್ಥರು ಹುಲಿಯನ್ನು ಸೆರೆ ಹಿಡಿಯಬೇಕೆಂದು ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯಿಂದ ಕಾರ್ಯಾಚರಣೆ ಪ್ರಾರಂಭವಾಗಿದೆ. ಮಾರ್ಗೋಲ್ಲಿ ತೋಟದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ದುಬಾರೆ ಸಾಕಾನೆ ಶಿಬಿರದ 4 ಆನೆಗಳ ಸಹಕಾರದಿಂದ ಕಾರ್ಯಾಚರಣೆ ಪ್ರಾರಂಭಿಸಿದ್ದು, ಸ್ಥಳದಲ್ಲಿ 10 ಕ್ಯಾಮರಾ ಹಾಗೂ 2 ಬೋನ್ ಅಳವಡಿಸಲಾಗಿದೆ.

50ಕ್ಕೂ ಹೆಚ್ಚು ಸಿಬ್ಬಂದಿ ತಂಡದಿಂದ ಹುಲಿಯ ಚಲನ-ವಲನ ಹೆಜ್ಜೆ ಗುರುತು ಪತ್ತೆ ಕಾರ್ಯಾಚರಣೆ ಚುರುಕುಗೊಂಡಿದ್ದು, ಅಧಿಕಾರಿಗಳು ಮೊಕ್ಕಾಂ ಹೂಡಿದ್ದಾರೆ.

ಮೂಲ ಸೌಕರ್ಯಕ್ಕೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ



ಮಡಿಕೇರಿ,ಸೆ.12– ಮಡಿಕೇರಿ ನಗರಸಭಾ ಆಡಳಿತ ಜನತೆಯ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿದ್ದು, ತಕ್ಷಣವೇ ನಗರದ ಮೂಲ ಸಮಸ್ಯೆಗಳಿಗೆ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಮಡಿಕೇರಿ ನಗರ ಕಾಂಗ್ರೆಸ್ ಪ್ರತಿಭಟನೆ ನಡೆಸಿತು.

ಕಾಂಗ್ರೆಸ್ ನಗರಾಧ್ಯಕ್ಷ ಬಿ.ವೈ.ರಾಜೇಶ್ ನೇತೃತ್ವದಲ್ಲಿ ಕಾಂಗ್ರೆಸ್ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಮಳೆಯ ನಡುವೆಯೇ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ನಗರ ಸಭೆ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿ, ನಗರಸಭೆಗೆ ಮುತ್ತಿಗೆ ಹಾಕಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

ತೆರಿಗೆ ಪಾವತಿಗಾಗಿ ಬರುವ ನಾಗರಿಕರನ್ನು ನಗರಸಭಾ ಕಚೇರಿಗೆ ಅನಗತ್ಯವಾಗಿ ಅಲೆದಾಡಿಸಲಾಗುತ್ತಿದೆ. ಸಾರ್ವಜನಿಕ ಶೌಚಾಲಯಗಳು ಅಶುಚಿತ್ವದಿಂದ ಕೂಡಿದ್ದು, ಇವುಗಳನ್ನು ಶುಚಿಗೊಳಿಸಬೇಕು. ಸಾರ್ವಜನಿಕ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಬೇಕು. ಬೀದಿದೀಪಗಳ ನಿರ್ವಹಣೆ ಮಾಡಬೇಕು, ಮಡಿಕೇರಿ ನಗರಸಭಾ ವ್ಯಾಪ್ತಿಯ ಜ.ಕೆ.ಎಸ್.ತಿಮ್ಮಯ್ಯ ವೃತ್ತ ಮತ್ತು ಹಳೇ ಖಾಸಗಿ ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಮಳೆ ಕಳೆದ ಕೂಡಲೆ ಹದಗೆಟ್ಟ ರಸ್ತೆಗಳನ್ನು ಸರ್ವಋತು ರಸ್ತೆಗಳನ್ನಾಗಿ ಅಭಿವೃದ್ಧಿಪಡಿಸಬೇಕು, ರಾಜಕಾಲುವೆಗಳ ಒತ್ತುವರಿ ತೆರವಿಗೆ ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಶ್ವೇತಪತ್ರ ಹೊರಡಿಸಿ: ನಗರಸಭೆ ವ್ಯಾಪ್ತಿಯಲ್ಲಿ ಸಹಸ್ರಾರು ವಸತಿ ರಹಿತರಿದ್ದು, ಹಲವು ವರ್ಷಗಳಿಂದ ನಿವೇಶನಕ್ಕಾಗಿ ನಗರಸಭೆಗೆ ಅರ್ಜಿಗಳನ್ನು ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಇಲ್ಲಿಯವರೆಗೆ ಯಾರಿಗೂ ಸೂರಿನ ಭಾಗ್ಯ ದೊರೆತಿಲ್ಲ. ಈ ಹಿನ್ನೆಲೆಯಲ್ಲಿ ನಿವೇಶನ ರಹಿತರ ಅರ್ಜಿಗಳಿಗೆ ಯಾವ ರೀತಿ ಸ್ಪಂದಿಸಲಾಗಿದೆ ಎನ್ನುವ ಬಗ್ಗೆ 'ಶ್ವೇತಪತ್ರ' ಹೊರಡಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮ್ಮದ್, ನಗರವಾಸಿಗಳ ಯಾವೊಂದು ಸಮಸ್ಯೆಗಳಿಗೆ ನಗರಸಭಾ ಆಡಳಿತ ಸೂಕ್ತ ಸ್ಪಂದನೆ ನೀಡುತ್ತಿಲ್ಲ. ಒಟ್ಟು ಆಡಳಿತ ವ್ಯವಸ್ಥೆ ಸಂಪೂರ್ಣ ನಿಷ್ಕ್ರಿಯವಾಗಿದೆ. ನಗರದ ಮೂಲ ಸಮಸ್ಯೆಗಳ ಬಗೆಹರಿಕೆಗೆ ನಿರಾಸಕ್ತವಾಗಿರುವ ನಗರಸಭೆ ಆಡಳಿತ ಕೇವಲ ಅಧಿಕಾರಕ್ಕಾಗಿ ಮಾತ್ರ ಇರುವಂತಿದೆ ಎಂದು ಆರೋಪಿಸಿದರು.

ಪಕ್ಷದ ಪ್ರಮುಖರಾದ ಟಿ.ಎಂ. ಅಯ್ಯಪ್ಪ ಮಾತನಾಡಿ, ಕಳೆದ ಎರಡು ವರ್ಷಗಳಿಂದ ನಗರಸಭೆಯ ಆಡಳಿತ 'ಕೋಮಾ' ಸ್ಥಿತಿಗೆ ತಲುಪಿದೆ, ನಗರಸಭೆಯಲ್ಲಿ ಪ್ರತಿಯೊಂದು ಕೆಲಸಕ್ಕೂ ಜನ ಸಾಮಾನ್ಯರನ್ನು ಸತಾಯಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಡಿಕೇರಿ ನಗರ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಯಲ್ಲಪ್ಪ ಮಾತನಾಡಿ, ನಗರದ ಜನತೆಯ ಸಮಸ್ಯೆಗಳಿಗೆ ನಗರಸಭಾ ಆಡಳಿತ ಸೂಕ್ತ ಸ್ಪಂದನವನ್ನು ನೀಡದಿದ್ದಲ್ಲಿ ಮುಂದೆಯೂ ಪಕ್ಷದಿಂದ ಹೋರಾಟವನ್ನು ರೂಪಿಸುವುದಾಗಿ ಎಚ್ಚರಿಸಿದರು. ಇದೇ ಸಂದರ್ಭ ಸ್ಥಳಕ್ಕಾಗಮಿಸಿದ ಪೌರಾಯುಕ್ತ ವಿಜಯ ಅವರಿಗೆ ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಲಾಯಿತು. ನಗರಸಭಾ ವ್ಯಾಪ್ತಿಯ ಆಸ್ತಿಗಳಿಗೆ ಸಂಬಂಧಿಸಿದಂತೆ ಫಾರಂ ನಂ.3 ಅನ್ನು ನೀಡುವಲ್ಲಿ ಅಧಿಕಾರಿಗಳು ಅನಗತ್ಯ ವಿಳಂಬ ಮಾಡುತ್ತಿರುವ ಬಗ್ಗೆ ರಾಜೇಶ್ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಪೌರಾಯುಕ್ತರನ್ನು ಒತ್ತಾಯಿಸಿದರು. ಖಾತೆ ವರ್ಗಾವಣೆ ಕಡತಗಳನ್ನು ವರ್ಷಾನುಗಟ್ಟಲೆ ವಿಲೇವಾರಿ ಮಾಡದೆ ಸತಾಯಿಸಲಾಗುತ್ತಿದ್ದು, ಲಂಚದ ಬೇಡಿಕೆ ಇಡುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿದೆ. ಖಾತೆ ವರ್ಗಾವಣೆಗೆ ಸರ್ಕಾರ ನಿಗದಿಪಡಿಸಿದ ಅವಧಿಯೊಳಗೆ ನೀಡಲು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಮಾಧ್ಯಮ ಸಂವಾಹ ವಕ್ತಾರ ಟಿ.ಪಿ.ರಮೇಶ್, ಸಾಮಾಜಿಕ ಜಾಲತಾಣದ ಜಿಲ್ಲಾ ಉಪಾಧ್ಯಕ್ಷ ಆರ್.ಪಿ. ಚಂದ್ರಶೇಖರ್, ಉಪಾಧ್ಯಕ್ಷ ಪ್ರಕಾಶ್ ಆಚಾರ್ಯ, ಸೇವಾದಳ ಜಿಲ್ಲಾಧ್ಯಕ್ಷ ಕಾನೆಹಿತ್ಲು ಮೊಣ್ಣಪ್ಪ, ಮಾಜಿ ಸೈನಿಕರ ಘಟಕದ ಅಧ್ಯಕ್ಷ ಗಣೇಶ್, ಅಲ್ಪಸಂಖ್ಯಾತರ ಘಟಕದ ಬ್ಲಾಕ್ ಅಧ್ಯಕ್ಷ ಖಲೀಲ್ ಬಾಷ, ನಗರಾಧ್ಯಕ್ಷ ಕೆ.ಜಿ.ಪೀಟರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುರಯ್ಯ ಅಬ್ರಾರ್, ಪ್ರಧಾನ ಕಾರ್ಯದರ್ಶಿ ಮಿನಾಜ್ ಪ್ರವೀಣ್, ನಗರಾಧ್ಯಕ್ಷೆ ಹೊಟ್ಟೆಯಂಡ ಫ್ಯಾನ್ಸಿ ಬೆಳ್ಯಪ್ಪ, ಸದಾಮುದ್ದಪ್ಪ ಮತ್ತಿತ್ತರರು ಪಾಲ್ಗೊಂಡಿದ್ದರು.

ಒಂದೇ ರಾತ್ರಿ ಮೂರು ದೇವಾಲಯಗಳಲ್ಲಿ ಕಳವು



ಮಡಿಕೇರಿ, ಸೆ.12– ಒಂದೇ ರಾತ್ರಿಯಲ್ಲಿ ಜಿಲ್ಲೆಯ ವಿವಿಧ ಕಡೆಗಳ ಪುರಾತನ ಕಾಲದ 3 ದೇವಾಲಯಗಳಲ್ಲಿ ಕಳ್ಳತನ ನಡೆದಿದ್ದು, ಭಕ್ತರು ಬೆಚ್ಚಿ ಬಿದ್ದಿದ್ದಾರೆ. ಒಂದೇ ತಂಡ ಈ ಕೃತ್ಯ ಎಸಗಿರಬಹುದು ಎಂದು ಪೊಲೀಸರು ಶಂಕಿಸಿದ್ದು, ಕಳವು ಪ್ರಕರಣದ ತನಿಖೆ ಚುರುಕುಗೊಳಿಸಲಾಗಿದೆ.

ಇತಿಹಾಸ ಪ್ರಸಿದ್ಧ ನಾಪೋಕ್ಲು ಬೇತು ಗ್ರಾಮದಲ್ಲಿರುವ ಶ್ರೀಮಕ್ಕಿ ಸಾಸ್ತಾವು ದೇವಾಲಯದ ಆವರಣದಲ್ಲಿದ್ದ 13, 12 ಹಾಗೂ 5 ಕೆಜಿ ಭಾರವಿದ್ದ ತೂಗು ಗಂಟೆಗಳು ಸೇರಿದಂತೆ ಶ್ರೀ ಮಕ್ಕಿ ಸಾಸ್ತಾವು ದೇವಾಲಯದಲ್ಲಿ ಒಟ್ಟು 30 ಗಂಟೆಗಳನ್ನು ಕಳವು ಮಾಡಲಾಗಿದೆ. ಭಾನುವಾರ ರಾತ್ರಿ ದೇವಾಲಯದ ಆವರಣದಲ್ಲಿದ್ದ ಸಿಸಿ ಕ್ಯಾಮರಾಗಳನ್ನು ಧ್ವಂಸ ಮಾಡಿದ ಬಳಿಕ ಗಂಟೆಗಳನ್ನು ಕಳವು ಮಾಡಲಾಗಿದೆ.

ಈ ಕುರಿತು ದೇವಾಲಯ ಆಡಳಿತ ಮಂಡಳಿ ನಾಪೋಕ್ಲು ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಘಟನಾ ಸ್ಥಳಕ್ಕೆ ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಸದಾಶಿವ ಮತ್ತು ಸಿಬ್ಬಂದಿಗಳು ತೆರಳಿ ಪರಿಶೀಲನೆ ನಡೆಸಿದ್ದು, ತಕ್ಷಣವೇ ಆರೋಪಿಗಳನ್ನು ಬಂಧಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ವಿರಾಜಪೇಟೆ ಕೆದಮಳ್ಳೂರು ಗ್ರಾಮದ ದಾರಾ ಮಹದೇಶ್ವರ ದೇವಾಲಯ ಮತ್ತು ಕೊಟ್ಟೋಳಿ ಗ್ರಾಮದಲ್ಲಿರುವ ಈಶ್ವರ ದೇವಾಲಯದಲ್ಲಿಯೂ ಗಂಟೆ ಕಳವು ಮಾಡಲಾಗಿದೆ. ವಿರಾಜಪೇಟೆ ದಾರಾ ಮಹದೇಶ್ವರ ದೇವಾಲಯದ ಆವರಣದಲ್ಲಿದ್ದ 15 ಗಂಟೆಗಳ ಸಹಿತ ಒಂದು ದೀಪ ಹಾಗೂ ಕೊಟ್ಟೋಳಿ ಗ್ರಾಮದ ಈಶ್ವರ ದೇವಾಲಯದಲ್ಲಿದ್ದ 8 ತೂಗು ಗಂಟೆಗಳನ್ನು ಕಳವು ಮಾಡಲಾಗಿದೆ. ಘಟನಾ ಸ್ಥಳಕ್ಕೆ ವಿರಾಜಪೇಟೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. 2 ದೇವಾಲಯಗಳ ಗಂಟೆಗಳು ಹಾಗೂ 1 ದೀಪ ಕಳವು ಘಟನೆಗೆ ಸಂಬಂಧಿಸಿದಂತೆ ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ರಸಗೊಬ್ಬರದ ಜೊತೆ ಲಘು ಪೋಷಕಾಂಶ ಮಾರಾಟಕ್ಕೆ ಒತ್ತಡ ಹಿಂದೆ ಅಧಿಕಾರಿಗಳ ಕೈವಾಡ

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ ಆರೋಪ



ಗೋಣಿಕೊಪ್ಪ, ಸೆ.12– ರಸಗೊಬ್ಬರದ ಜತೆಯಲ್ಲಿ ಲಘು ಪೋಷಕಾಂಶ ಮಾರಾಟಕ್ಕೆ ಒತ್ತಡ ಹೇರುತ್ತಿರುವ ಜಾಲದ ಹಿಂದೆ ಜಿಲ್ಲೆಯ ಕೃಷಿ ಅಧಿಕಾರಿಗಳ ಕೈವಾಡವಿದೆ ಎಂದು ಆರೋಪಿಸಿರುವ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ, ಜಿಲ್ಲೆಯ ಸಹಕಾರಿ ಸಂಘಗಳ ಸಹಕಾರದಲ್ಲಿ ಕಚೇರಿ ಮುತ್ತಿಗೆ ಹಾಕುವ ಎಚ್ಚರಿಕೆ ನೀಡಿದ್ದಾರೆ.

ಸಾಗಾಟ ದರ ಹೆಚ್ಚಾಗುತ್ತದೆ ಎಂದು ರಸಗೊಬ್ಬರದ ಜತೆಯಲ್ಲಿ ಲಘು ಪೋಷಕಾಂಶವನ್ನು ರಸಗೊಬ್ಬರ ಉತ್ಪಾದನಾ ಕಂಪೆನಿಗಳು ಒತ್ತಾಯವಾಗಿ ವಿತರಿಸುತ್ತಿವೆ. ಯಾವ ಸಹಕಾರಿ ಸಂಘಗಳೂ ಲಘು ಪೋಷಕಾಂಶಕ್ಕೆ ಬೇಡಿಕೆ ಇಟ್ಟಿಲ್ಲ. ಹೀಗಾಗಿ ರಸಗೊಬ್ಬರ ಕಂಪೆನಿಗಳಿಗೆ ಲಘು ಪೋಷಕಾಂಶ ವಿತರಣೆ ಮಾಡದಂತೆ ನಿಯಂತ್ರಣ ಮಾಡಲಿ. ಸ್ಪಂದಿಸದಿದ್ದಲ್ಲಿ ಕೃಷಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಸೋಮವಾರ ಸುದ್ದಿಗೋಷ್ಠಿ ಯಲ್ಲಿ ಎಚ್ಚರಿಸಿದರು.

ಇಲಾಖೆ 37 ವರ್ಷದ ಹಿಂದಿನ (1985ನೇ ಇಸವಿಯ) ಆದೇಶವನ್ನು ಇಟ್ಟುಕೊಂಡು ಸಹಕಾರಿ ಸಂಘಗಳ ಮೇಲೆ ಒತ್ತಡ ಹೇರುತ್ತಿದೆ. ಎಲ್ಲ ಕಂಪೆನಿಗಳು ಮುಂಗಡ ಹಣ ಪಡೆದು ಗೊಬ್ಬರ ವಿತರಣೆ ಮಾಡುತ್ತಿವೆ ನಮ್ಮ ಬೇಡಿಕೆಗೆ ಅನುಗುಣವಾಗಿ ವಿತರಣೆ ಮಾಡದೆ, ಲಘು ಪೋಶಕಾಂಶವನ್ನು ವಿತರಣೆ ಮಾಡುತ್ತಿವೆ. ಇದರಿಂದ ಸಂಘಗಳನ್ನು ಇಕ್ಕಟ್ಟಿಗೆ ಸಿಲುಕಿಸಿದಂತಾಗಿದೆ. ಮೈಸೂರು, ಹಾಸನ, ಮಂಗಳೂರು ಭಾಗದಿಂದ ವಿತರಣೆಯಾಗುತ್ತಿರುವ ರಸಗೊಬ್ಬರ ಸಾಗಿಸಲು ಲಾರಿಗಳು ಹಿಂದೇಟು ಹಾಕುತ್ತಿವೆ ಎಂಬ ನೆಪವೊಡ್ಡಿ ಹೆಚ್ಚುವರಿ ಬಾಡಿಗೆ ಕೂಡ ಪಡೆಯುತ್ತಿವೆ. ಸಹಕಾರಿ ಸಂಘಕ್ಕೆ ಲಾಭದ ಪ್ರಮಾಣ ಕೂಡ ತೀರಾ ಕಡಿಮೆಯಾಗಿದೆ. ಇದನ್ನು ಕೃಷಿ ಇಲಾಖೆ ನಿಯಂತ್ರಿಸಬೇಕಿದೆ. ಈ ಬಗ್ಗೆ ಉಸ್ತುವಾರಿ ಸಚಿವ, ಸಹಕಾರಿ ಸಚಿವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ರೈತರ ಬೇಡಿಕೆಗೆ ಅನುಗುಣವಾಗಿ ಮನವೊಲಿಸಿ ಲಘು ಪೋಶಕಾಂಶ ನೀಡಲು ಕೃಷಿ ಇಲಾಖೆ ಜಂಟಿ ನಿರ್ದೇಶಕಿ ಶಬಾನಾ ಶೇಕ್ ತಿಳಿಸಿದ್ದರು. ಇದೀಗ ಇದೇ ಇಲಾಖೆಯಿಂದ ಸಹಕಾರ ಸಂಘಗಳ ಪರವಾನಗಿ ರದ್ದು ಪಡಿಸುವ ಎಚ್ಚರಿಕೆ ನೀಡಿರುವುದನ್ನು ತಿರಸ್ಕರಿಸುತ್ತೇವೆ. ಬೆದರಿಸುತ್ತಿರುವ ಕೃಷಿ ಇಲಾಖೆ, ಗೊಬ್ಬರ ಕಂಪೆನಿಗಳ ನಡುವಿನ ಒಪ್ಪಂದವಿದ್ದು, ಪರಿಹಾರಕ್ಕೆ ಜಿಲ್ಲಾಧಿಕಾರಿ ನೇತೃತ್ವದ ಸಭೆಗೆ ಸಹಕಾರ ಸಂಘಗಳ ಅಧ್ಯಕ್ಷರನ್ನು ಸೇರಿಸಿ ಸಭೆ ಕರೆಯಲಿದೆ. ರೈತರಿಗೆ ಅನಾವಶ್ಯಕ ನಷ್ಟ ಮಾಡಲು ಸಹಕಾರ ಸಂಘದ ಚಿಂತನೆಯಲ್ಲಿಲ್ಲ. ಎಲ್ಲರೂ ಕೂಡ ರೈತ ವೃತ್ತಿಯ ಮೂಲ ಹೊಂದಿದ್ದೇವೆ ಪರಿಹಾರ ಕ್ರಮಕ್ಕೆ ಮುಂದಾಗದಿದ್ದಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು.

ಮಾರ್ಕೆಟಿಂಗ್ ಫೆಡರೇಷನ್ ನಿರ್ದೇಶಕ ಕೊಕ್ಕಂಡ ಕುಶ, ಗೋಣಿಕೊಪ್ಪ ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಮತ್ತು ಪರಿವರ್ತನಾ ಸಂಘದ ಅಧ್ಯಕ್ಷ ಕುಪ್ಪಂಡ ಚಿಟ್ಟಿಯಪ್ಪ, ನಿರ್ದೇಶಕರಾದ ಕಬ್ಬಚ್ಚೀರ ಸುಬ್ರಮಣಿ, ವೇದಪಂಡ ಕಿರಣ್, ಎನ್.ಎಂ.ಪ್ರತ್ವಿರಾಜ್, ಎಚ್. ಮಣಿಕಂಟ, ಚೆಪ್ಪುಡೀರ ಮುದ್ದಪ್ಪ ಇದ್ದರು.

ಬಿಲ್ಲವ ಸಮಾಜದಿಂದ ನಾರಾಯಣ ಗುರು ಜಯಂತಿ ಆಚರಣೆ



ವಿರಾಜಪೇಟೆ ಸೆ12– ವಿರಾಜಪೇಟೆ ತಾಲೂಕು ಬಿಲ್ಲವ ಸೇವಾ ಸಮಾಜದ ವತಿಯಿಂದ ಶ್ರೀ ನಾರಾಯಣ ಗುರು ಜಯಂತಿ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಸಮೀಪದ ಅಂಬಟ್ಟಿಯಲ್ಲಿರುವ ನಾರಾಯಣ ಗುರು ದೇವಾಲಯದಲ್ಲಿ ನಡೆಯಿತು.

ನಾರಾಯಣ ಗುರು ಜಯಂತಿ ಪ್ರಯುಕ್ತ 2022ರ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಹತ್ತನೇ ತರಗತಿಯ 12 ವಿದ್ಯಾರ್ಥಿಗಳಾದ ಬಿ.ವಿ.ಚೈತನ್ಯ, ಬಿ.ಎಸ್.ಜೀವಿತ ಅಂಚನ್, ಬಿ.ವಿ.ರುಷ್, ಬಿ.ಜೆ.ನಿಖಿತ, ಸುವರ್ಣ, ಪ್ರೇಕ್ಷಿತ ಬಿ.ಜೆ.ಅಶೋಕ್, ಬಿ.ಜೆ.ಅಭಿಜ್ಞ, ಬಿ.ಜೆ. ಹರ್ಷಿಕಾ, ಬಿ.ಕೆ.ಭೂಮಿಕ, ಬಿ.ಡಿ.ಕೌಶಿಕ್, ಬಿ.ಡಿ.ನಿಶ್ಚಲ್, ಬಿ.ಪಿ.ವರ್ಷ ಹಾಗೂ ದ್ವಿತೀಯ ಪಿಯುಸಿಯ ಬಿ.ಜೆ.ಲಾಸ್ಯ, ಬಿ.ಆರ್.ಪ್ರಮಲ್, ಜಯಶ್ರೀ ಇವರುಗಳನ್ನು ಸನ್ಮಾನಿಸಲಾಯಿತು.

ಬಿಲ್ಲವ ಸಮಾಜದ ತಾಲೂಕು ಅಧ್ಯಕ್ಷ ಬಿ.ಎಂ.ಗಣೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ವಿರಾಜಪೇಟೆ ಎಸ್‌ಎನ್‌ಡಿಪಿ ಸದಸ್ಯ ರಾಜನ್, ಬಿ.ಎಸ್. ನಾರಾಯಣ, ಬಿಲ್ಲವ ಸಮಾಜದ ಗೌ.ಅಧ್ಯಕ್ಷ ರಾಜ, ಉಪಾಧ್ಯಕ್ಷ ಪುರುಶೋತ್ತಮ, ಖಜಾಂಚಿ ಬಿ.ಎಂ.ಸತೀಶ್, ಕಾರ್ಯದರ್ಶಿ ಜನಾರ್ಧನ ಮತ್ತು ಮಣಿ, ನಿರ್ದೇಶಕಿ ಅನಿತಾ, ದಾನಿಗಳಾದ ಗೋಣಿಕೊಪ್ಪ ಗ್ರಾಪಂ ಮಾಜಿ ಅಧ್ಯಕ್ಷ ಬಿ.ಡಿ.ಮುಕುಂದ, ಉದ್ಯಮಿ ಬೋಜಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಲಿಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ಖಾಸಗೀಕರಣ ಕಾಯ್ದೆ ಹಿಂಪಡೆಯಲು ಒತ್ತಾಯಿಸಿ ರಸ್ತೆತಡೆ



ಚಾಮರಾಜನಗರ, ಸೆ.12–ಕೇಂದ್ರ ಜಾರಿಗೊಳಿಸಲು ಹೊರಟಿರುವ ವಿದ್ಯುತ್ ಖಾಸಗೀಕರಣ ಕಾಯ್ದೆಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿ ರೈತ ಸಂಘ ಹಾಗೂ ಹಸಿರುಸೇನೆ ಕಾರ್ಯಕರ್ತರು ತಾಲೂಕಿನ ಪಣ್ಯದಹುಂಡಿಯಲ್ಲಿ ರಸ್ತೆತಡೆ ನಡೆಸಿದರು.

ಚಾಮರಾಜನಗರ–ನಂಜನಗೂಡು ಮಾರ್ಗದ ನಡುವೆ ಇರುವ ಪಣ್ಯದಹುಂಡಿ ಗ್ರಾಮದ ಸರ್ಕಲ್‌ನಲ್ಲಿ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಜಮಾಯಿಸಿ ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು ರಾಷ್ಟ್ರೀಯ ಹೆದ್ದಾರಿಯ ಮಧ್ಯದಲ್ಲೇ ಕುಳಿತಿದ್ದರಿಂದ ಕೆಲ ಸಮಯ ಚಾ.ನಗರ–ನಂಜನಗೂಡು ಮಾರ್ಗದ ಸಂಚಾರ ಅಸ್ತವ್ಯಸ್ತವಾಯಿತು.

ಕೇಂದ್ರ ಸರ್ಕಾರ ಜಾರಿಗೊಳಿಸಲು ಹೊರಟಿರುವ ನೂತನ ವಿದ್ಯುತ್ ಕಾಯ್ದೆ ತಿದ್ದುಪಡಿಯು ದೇಶದ ರೈತರು, ಬಡವರಿಗೆ ಮಾರಕವಾಗಿದೆ. ಬೆಳೆಗೆ ಸೂಕ್ತ ಮಾರುಕಟ್ಟೆ, ಬೆಲೆ ಸಿಗದೆ ಬಡವಾಗಿರುವ ರೈತನಿಗೆ ಈ ವಿದ್ಯುತ್ ತಿದ್ದುಪಡಿ ಕಾಯ್ದೆ ಮರಣಶಾಸನವಾಗುತ್ತಿದೆ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಫಲಾನುಭವಿಗಳಿಗೆ ಉಚಿತ ವಿದ್ಯುತ್ ಸಿಗದಂತಾಗುತ್ತದೆ ಹಾಗೂ ಕೃಷಿ ಚಟುವಟಿಕೆ ಅಸಾಧ್ಯವಾಗುತ್ತದೆ. ಆದ್ದರಿಂದ ನೂತನ ವಿದ್ಯುತ್ ವಿಧೇಯಕವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಈ ವರ್ಷ ಹಿಂದಿನ ವರ್ಷಗಳಿಗಿಂತ ಶೇ.40 ಹೆಚ್ಚು ಮಳೆಯಾಗಿದೆ. ಸುಮಾರು 500 ಕೋಟಿ ರೂ. ರೈತರಿಗೆ ನಷ್ಟವಾಗಿದೆ. ಜನ, ಜಾನುವಾರುಗಳು ನೆರೆಯಿಂದಾಗಿ ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಅಪಾರ ಆಸ್ತಿ–ಪಾಸ್ತಿ ನಷ್ಟವಾಗಿದ್ದು, ಈ ನಷ್ಟವನ್ನು ತುಂಬಿಕೊಡುವಂತೆ ಒತ್ತಾಯಿಸಿದರು.

ಸ್ವಾಮಿನಾಥನ್ ವರದಿ ಜಾರಿಗೊಳಿಸಿ, ರೈತರ ಬೆಳೆಗೆ ಸೂಕ್ತ ವೈಜ್ಞಾನಿಕ ಬೆಲೆ ನೀಡಬೇಕು. ಕಬ್ಬಿನ ಬಾಕಿ ಹಣ ತಕ್ಷಣ ಪಾವತಿಸಬೇಕು. ಟನ್ ಕಬ್ಬಿಗೆ 5 ಸಾವಿರ ರೂ. ನಿಗದಿ ಮಾಡಬೇಕು. ಸ್ಥಳೀಯವಾಗಿ ನಿಷ್ಕ್ರಿಯಗೊಂಡಿರುವ ಗಣಿ ಇಲಾಖೆ, ಆರ್‌ಟಿಒ, ಪಿಡಬ್ಲ್ಯೂಡಿ ಇಲಾಖೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳ ಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಬಸವರಾಜು ಅವರಿಗೆ ಮನವಿ ಸಲ್ಲಿಸಲಾಯಿತು. ರೈತ ಸಂಘದ ಜಿಲ್ಲಾ ಅಧ್ಯಕ್ಷ ಹೊನ್ನೂರು ಪ್ರಕಾಶ್, ಸಂಘಟನಾ ಕಾರ್ಯದರ್ಶಿ ಹೊನ್ನೂರು ಬಸವಣ್ಣ, ಮುಖಂಡರಾದ ಮೇಲಾಜಿಪುರ ಕುಮಾರ್, ಹೆಗ್ಗೋಠಾರ ವಿಜಯಕುಮಾರ್, ಅಶೋಕ್, ಕಲ್ಪುರ ಪಾಪು, ಕುಂದಕೆರೆ ಸಂಪತ್ತು ಕಡುಬೂರು ಮಂಜುನಾಥ್, ಮಹೇಶ್, ಮಹೇಂದ್ರ, ಶಿವಮೂರ್ತಿ ಸೇರಿದಂತೆ ಇನ್ನಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹಳೇ ಜಿಲ್ಲಾಸ್ಪತ್ರೆಯಲ್ಲಿ ಓಪಿಡಿ ಕಾರ್ಯಾರಂಭ

ಮೊದಲ ದಿನ 451 ಮಂದಿಗೆ ಚಿಕಿತ್ಸೆ





ಚಾಮರಾಜನಗರ, ಸೆ.12–ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ಹಳೇ ಜಿಲ್ಲಾಸ್ಪತ್ರೆ ಕಟ್ಟಡದಲ್ಲಿ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧನಾ ಆಸ್ಪತ್ರೆ(ಸಿಮ್ಸ್) ಎಲ್ಲಾ ಹೊರ ರೋಗಿ ವಿಭಾಗ (ಓಪಿಡಿ)ಗಳನ್ನು ಸೋಮವಾರದಿಂದ ಆರಂಭಿಸಲಾಯಿತು. ಮೊದಲ ದಿನ ನೂರಾರು ರೋಗಿಗಳು ಆಗಮಿಸಿ ಚಿಕಿತ್ಸೆ ಪಡೆದರು.

ಜಿಲ್ಲಾಸ್ಪತ್ರೆಯಲ್ಲಿ ಎಲ್ಲಾ ಹೊರ ರೋಗಿ ವಿಭಾಗಳ ಚುಚ್ಚುಮದ್ದು ಕೇಂದ್ರ, ಮಾತ್ರೆ ವಿತರಣಾ ಕೇಂದ್ರ ಆರಂಭವಾಗಿದ್ದು, 451 ಮಂದಿ ಚಿಕಿತ್ಸೆ ಪಡೆದಿದ್ದಾರೆ. ಯಡಬೆಟ್ಟದ ತಪ್ಪಲಿನಲ್ಲಿರುವ ಸಿಮ್ಸ್ ಬೋಧನಾ ಆಸ್ಪತ್ರೆಯಲ್ಲಿ 421 ಮಂದಿ ಚಿಕಿತ್ಸೆ ಪಡೆದಿದ್ದಾರೆ ಎಂದು ಜಿಲ್ಲಾ ಸರ್ಜನ್ ಡಾ.ಹೆಚ್.ಎಸ್. ಕೃಷ್ಣಪ್ರಸಾದ್ ತಿಳಿಸಿದ್ದಾರೆ.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧನ ಆಸ್ಪತ್ರೆ ಉದ್ಘಾಟನೆ ಆದ ಬಳಿಕ ಹೆರಿಗೆ ಮತ್ತು ಮಕ್ಕಳ ವಿಭಾಗ ಬಿಟ್ಟು ಉಳಿದೆಲ್ಲ ವಿಭಾಗಗಳನ್ನು ನೂತನ ಬೋಧನಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ನಗರದಿಂದ ಸುಮಾರು 8 ಕಿಮೀ ದೂರದಲ್ಲಿರುವ ಯಡಬೆಟ್ಟದ ತಪ್ಪಲಿನಲ್ಲಿರುವ ಸಿಮ್ಸ್ ಬೋಧನಾ ಆಸ್ಪತ್ರೆಯಲ್ಲಿ 11 ತಿಂಗಳಿನಿಂದ ಚಿಕಿತ್ಸೆ ನೀಡಲಾಗುತ್ತಿತ್ತು. ನಗರದಿಂದ ದೂರವಿರುವ ಈ ಆಸ್ಪತ್ರೆಗೆ ಹೋಗಿ ಬರಲು ರೋಗಿಗಳು ಹಾಗೂ ಸಂಬಂಧಿಕರಿಗೆ ತೊಂದರೆಯಾಗುತ್ತಿತ್ತು. ಇದರಿಂದ ನಗರದ ಹಳೇ ಜಿಲ್ಲಾಸ್ಪತ್ರೆ ಕಟ್ಟಡದಲ್ಲಿ ಮತ್ತೆ ಚಿಕಿತ್ಸೆ ಆರಂಭಿಸಬೇಕು ಎಂದು ಒತ್ತಾಯಿಸಿ ಅನೇಕ ಸಂಘಟನೆಗಳು ಪ್ರತಿಭಟಿಸಿದ್ದವು. ಸಾರ್ವಜನಿಕರಿಂದಲೂ ಒತ್ತಾಯ ಕೇಳಿ ಬಂದಿತ್ತು ಇದಕ್ಕೆ ಸ್ಪಂದಿಸಿದ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಹಳೇ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಆರಂಭಕ್ಕೆ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದವರಿಗೆ ಸೂಚಿಸಿದ್ದರು.

ಸಂಘಟನೆಗಳಿಂದ ಸಂಭ್ರಮಾಚರಣೆ: ನಗರದ ಹಳೇ ಜಿಲ್ಲಾಸ್ಪತ್ರೆಯಲ್ಲಿ ಹೊರ ರೋಗಿಗಳ ವಿಭಾಗಗಳು ಆರಂಭವಾದ ಹಿನ್ನೆಲೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಸಂಭ್ರಮ ಆಚರಿಸಿದರು. ಆಸ್ಪತ್ರೆ ಮುಂಭಾಗದ ಜೋಡಿ ರಸ್ತೆಯಲ್ಲಿ ಪಟಾಕಿ ಸಿಡಿಸಿ, ವೈದ್ಯರಿಗೆ ಸಿಹಿ ಹಾಗೂ ಗುಲಾಬಿ ಹೂ ನೀಡಿ ಸಂತೋಷ ಹಂಚಿಕೊಂಡರು. ಈ ವೇಳೆ ಮುಖಂಡರಾದ ನಿಜಧ್ವನಿ ಗೋವಿಂದರಾಜು, ಎನ್. ಅಂಬರೀಶ್, ಪ್ರಶಾಂತ್, ವಕೀಲ ಪ್ರಸನ್ನ ಕುಮಾರ್, ವಿಷಕಂಠ, ಶಂಭುನಾಯಕ, ಸಿದ್ದೇಶ್, ಅಸಾದುಲ್ಲಾಖಾನ್, ಲಿಂಗರಾಜು, ಸಿದ್ಧಾರ್ಥ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದರು. ಜಿಲ್ಲಾ ಸರ್ಜನ್ ಡಾ.ಕೃಷ್ಣಪ್ರಸಾದ್, ಡಿಹೆಚ್‌ಓ ಡಾ.ವಿಶ್ವೇಶ್ವರಯ್ಯ, ಜಿಲ್ಲಾ ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್, ಡಾ. ನವೀನ್ ಚಂದ್ರ, ಡಾ.ಮಾರುತಿ ಉಪಸ್ಥಿತರಿದ್ದರು.

ತುರ್ತು ಚಿಕಿತ್ಸಾ ಘಟಕ ಆರಂಭಕ್ಕೆ ಡಿಸಿ ಸೂಚನೆ

ಚಾಮರಾಜನಗರ: ನಗರದ ಜಿಲ್ಲಾಸ್ಪತ್ರೆಯಲ್ಲಿ ಮತ್ತೆ ಹೊರರೋಗಿಗಳ ವಿಭಾಗಗಳು ಆರಂಭವಾದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

ಪ್ರತಿ ವಿಭಾಗಕ್ಕೂ ತೆರಳಿ ಎಷ್ಟು ರೋಗಿಗಳು ಭೇಟಿ ನೀಡಿದ್ದಾರೆ. ಯಾವ ಚಿಕಿತ್ಸೆ ಪಡೆದಿದ್ದಾರೆ ಎಂದು ಪೂರ್ಣ ವಿವರ ಪಡೆದ ಜಿಲ್ಲಾಧಿಕಾರಿ, ಈ ಕಟ್ಟಡದಲ್ಲಿಯೇ ಒಳರೋಗಿಗಳ ಚಿಕಿತ್ಸೆ ತೀವ್ರ ನಿಗಾ ಘಟಕವನ್ನು ಇನ್ನೆರೆಡು ದಿನಗಳಲ್ಲಿ ಆರಂಭಿಸುವಂತೆ ಸೂಚಿಸಿದರಲ್ಲದೆ, ಅದಕ್ಕೆ ಬೇಕಿರುವ ಅಗತ್ಯ ಸೌಕರ್ಯ ಕಲ್ಪಿಸುವ ಕುರಿತು ಹಿರಿಯ ವೈದ್ಯಾಧಿಕಾರಿಗಳೊಂದಿಗೆ ಸಮಾಲೋಚಿಸಿದರು. ಇದೇ ವೇಳೆ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿರುವ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ವಹಣೆಯ ಸಖಿ ಕೇಂದ್ರ ಹಾಗೂ ಶಿಶುಪಾಲನ ಕೇಂದ್ರಕ್ಕೆ ಭೇಟಿ ನೀಡಿ ಜಿಲ್ಲಾಧಿಕಾರಿ ವೀಕ್ಷಿಸಿದರು.

ಸಿಡಿಲಿಗೆ ಮೃತಪಟ್ಟಿದ್ದ ವ್ಯಕ್ತಿ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ವಿತರಣೆ



ಹನೂರು, ಸೆ.12–ಸಿಡಿಲು ಬಡಿದು ಕೆಲ ದಿನಗಳ ಹಿಂದೆ ಮೃತಪಟ್ಟಿದ್ದ ಮೀಣ್ಯಂ ಗ್ರಾಮದ ಮಾದಪ್ಪ ಅವರ ಕುಟುಂಬದವರಿಗೆ ಶಾಸಕ ಆರ್.ನರೇಂದ್ರ ಅವರು 5 ಲಕ್ಷ ರೂ. ಚೆಕ್ ವಿತರಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಸಂತ್ರಸ್ತ ಕುಟುಂಬದವರಿಗೆ ಪರಿಹಾರದ ಚೆಕ್ ವಿತರಿಸಿ ಮಾತನಾಡಿದ ಅವರು, ಕೆಲ ದಿನಗಳ ಹಿಂದೆ ಸಿಡಿಲು ಬಡಿದು ಮೀಣ್ಯಂ ಗ್ರಾಮದ ಮಾದಪ್ಪ ಹಾಗೂ ಅವರಿಗೆ ಸೇರಿದ 6 ಕುರಿಗಳು ಸ್ಥಳದಲ್ಲೇ ಸಾವನ್ನಪ್ಪಿದ್ದವು. ಈ ಬಗ್ಗೆ ಸರ್ಕಾರಕ್ಕೆ ಪರಿಹಾರ ಕೋರಿ ಮನವಿ ಸಲ್ಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪರಿಹಾರ ವಿತರಿಸಲಾಗುತ್ತಿದೆ. ಜೊತೆಗೆ ಪಶು ಇಲಾಖೆಯಿಂದ ಕೂಡ 35 ಸಾವಿರ ರೂ. ಪರಿಹಾರ ಧನ ನೀಡಲಾಗುತ್ತಿದೆ. ಸಂತ್ರಸ್ತ ಕುಟುಂಬಸ್ಥರಿಗೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ ಎಂದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಆನಂದಯ್ಯ, ಗ್ರಾಮಲೆಕ್ಕಿಗ ಶರವಣ ಸೇರಿದಂತೆ ಸಂತ್ರಸ್ತ ಕುಟುಂಬಸ್ಥರು ಹಾಜರಿದ್ದರು.

ರಾಜೇಂದ್ರ ಶ್ರೀಗಳಿಂದ ಶಿಕ್ಷಣ ಕ್ರಾಂತಿ



ಗುಂಡ್ಲುಪೇಟೆ, ಸೆ.12–ಸುತ್ತೂರು ರಾಜೇಂದ್ರ ಶ್ರೀಗಳ ನಿಸ್ವಾರ್ಥ ಸೇವೆಯಿಂದ ಗ್ರಾಮೀಣ ಪ್ರದೇಶಗಳಲ್ಲಿಯೂ ಶಿಕ್ಷಣ ಕ್ರಾಂತಿ ಸಾಧ್ಯವಾಯಿತು ಎಂದು ಶಾಸಕ ಸಿ.ಎಸ್. ನಿರಂಜನಕುಮಾರ್ ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ವೀರಶೈವ ಲಿಂಗಾಯತ ಸಂಘಟನೆಗಳಿಂದ ಪಟ್ಟಣದ ಜೆಎಸ್‌ಎಸ್ ಅನುಭವ ಮಂಟಪದಲ್ಲಿ ಆಯೋಜಿಸಿದ್ದ ಡಾ.ಶಿವರಾತ್ರಿ ರಾಜೇಂದ್ರಸ್ವಾಮಿಗಳ 107ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಾತೃ ಹೃದಯ ಹೊಂದಿದ್ದ ಶ್ರೀಗಳು ಸಮಾಜ ಸುಧಾರಣೆಗೆ ಶಿಕ್ಷಣ ಮುಖ್ಯವೆಂದು ಅರಿತಿದ್ದರು. ಹಾಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಶಾಲೆ ತೆರೆದು ಶಿಕ್ಷಣ ಕ್ರಾಂತಿಗೆ ನಾಂದಿಯಾಡಿದರು ಎಂದರು.

ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್, ಮುಖ್ಯ ಭಾಷಣಕಾರ ನಿವೃತ್ತ ಪ್ರಾಧ್ಯಾಪಕ ಡಿ.ಎಸ್.ಸದಾಶಿವ ಮೂರ್ತಿ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಎಸ್.ಪಿ. ಮಂಜುನಾಥ್ ಮಾತನಾಡಿದರು.

ಇದಕ್ಕೂ ಮುನ್ನ ರಾಜೇಂದ್ರ ಶ್ರೀಗಳ ಭಾವಚಿತ್ರವನ್ನು ಬೆಳ್ಳಿಯ ಸಾರೋಟಿನಲ್ಲಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ವೀರಶೈವ ಮಹಾಸಭಾ ಗೌರವಾಧ್ಯಕ್ಷ ಸಿದ್ದಮಲ್ಲ ಸ್ವಾಮೀಜಿ, ಚಿಕ್ಕತುಪ್ಪೂರು ಚನ್ನವೀರ ಸ್ವಾಮೀಜಿ. ಸಂಗಮ ಪ್ರತಿಷ್ಠಾನದ ಅಧ್ಯಕ್ಷ ಹೆಚ್.ಎಂ.ಗಣೇಶ ಪ್ರಸಾದ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಹೆಚ್.ಎಸ್. ನಂಜಪ್ಪ ಪ್ರಧಾನ ಕಾರ್ಯದರ್ಶಿ ಬಿ.ಕುಮಾರ ಸ್ವಾಮಿ, ಜಿಲ್ಲಾ ಯುವ ಘಟಕದ ಅಧ್ಯಕ್ಷ ಮನು ಶಾನುಭೋಗ್, ತಾಲೂಕು ಯುವ ಘಟಕದ ಅಧ್ಯಕ್ಷ ಬಸವಣ್ಣ, ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಟಿ.ಸಿ.ಬಸಪ್ಪ ದೇವರು, ಚಾಮುಲ್ ನಿರ್ದೇಶಕ ಎಂ.ಪಿ. ಸುನಿಲ್, ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಶೈಲ ಕುಮಾರ, ರೈತ ಮುಖಂಡ ಕಡಬೂರು ಮಂಜುನಾಥ್, ಪ್ರಾಂಶುಪಾಲ ಮರಿಸ್ವಾಮಪ್ಪ, ಬಸವರಾಜಪ್ಪ ತಾಲೂಕಿನ ವಿವಿಧ ಗ್ರಾಮಸ್ಥರಿದ್ದರು.



ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದ ವೀರ ಮದಕರಿನಾಯಕ ಯುವಕರ ಸಂಘದಿಂದ 25ನೇ ವರ್ಷದ ವಿದ್ಯಾ ಗಣಪತಿ ಮಹೋತ್ಸವದ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗಣೇಶ ಮೂರ್ತಿ ಮೆರವಣಿಗೆ ನಡೆಸಿ, ಭಾನುವಾರ ಸಂಜೆ ಗ್ರಾಮದ ಬಸ್ ನಿಲ್ದಾಣ ಬಳಿಯ ಕೆರೆಯಲ್ಲಿ ತೆಪ್ಪೋತ್ಸವ ನಡೆಸಿದ ನಂತರ ವಿಸರ್ಜಿಸಲಾಯಿತು. ಈ ಸಂದರ್ಭದಲ್ಲಿ ಮದಕರಿ ನಾಯಕರ ಯುವಕರ ಸಂಘದ ಸದಸ್ಯರು, ಗ್ರಾಮದ ಯಜಮಾನರು ಹಾಗೂ ಬದನಗುಪ್ಪೆ ಸುತ್ತಮುತ್ತಲಿನ ಗ್ರಾಮಸ್ಥರಿದ್ದರು.

ರಾಷ್ಟ್ರೀಯ ಹೆದ್ದಾರಿ–209 ಕಾಮಗಾರಿ ಆರಂಭಕ್ಕೆ ಸಚಿವ ನಿತಿನ್ ಗಡ್ಕರಿಗೆ ಧ್ರುವನಾರಾಯಣ್ ಮನವಿ



ಚಾಮರಾಜನಗರ, ಸೆ.12–ಜಿಲ್ಲೆಯಲ್ಲಿ ನೆನೆಗುದಿಗೆ ಬಿದ್ದಿರುವ ರಾಷ್ಟ್ರೀಯ ಹೆದ್ದಾರಿ–209ರ ಕಾಮಗಾರಿಯನ್ನು ಪುನರ್ ಆರಂಭಿಸುವಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮನವಿ ಸಲ್ಲಿಸಿದ್ದಾರೆ.

ಸಂತೇಮರಹಳ್ಳಿ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಧ್ರುವನಾರಾಯಣ್, ರಾಷ್ಟ್ರೀಯ ಹೆದ್ದಾರಿ–209ರ ಕಾಮಗಾರಿ 2017ರಲ್ಲಿ ಪ್ರಾರಂಭವಾಗಿ, 2019ಕ್ಕೆ ಪೂರ್ಣವಾಗಬೇಕಿತ್ತು. 3 ವರ್ಷದವಾದರೂ ಕಾಮಗಾರಿ ಆರಂಭವಾಗದೆ ನೆನೆಗುದಿಗೆ ಬಿದ್ದಿದೆ. ಬೆಂಗಳೂರು–ದಿಂಡಿಗಲ್–ಕನಕಪುರದಿಂದ ಜಿಲ್ಲೆಯ ಕೊಳ್ಳೇಗಾಲ ಸಂಪರ್ಕಿಸುವ ಈ ಹೆದ್ದಾರಿ ಅಭಿವೃದ್ಧಿಯಾದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಬೆಂಗಳೂರಿನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕನಕಪುರ ಸಂಸದ ಡಿ.ಕೆ.ಸುರೇಶ್ ಜೊತೆಗೂಡಿ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ಕ್ರಮ ವಹಿಸುವ ಬಗ್ಗೆ ನಿತಿನ್ ಗಡ್ಕರಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಇಂದು ಅಹವಾಲು ಸ್ವೀಕಾರ

ಚಾಮರಾಜನಗರ, ಸೆ.12–ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೆ.13ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಯಳಂದೂರು ತಾಲೂಕು ಕಚೇರಿಗೆ ಭೇಟಿ ನೀಡಿ, ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು ಹಾಗೂ ತಾಲೂಕು ಕಚೇರಿಯ ಪರಿಶೀಲನೆ ನಡೆಸುವರು.

ಒಂದನೇ ಪುಟದಿಂದ

ಪ್ರಶಾಂತ್ ಕಿಶೋರ್!

ನಮ್ಮ ಸಲಹೆಗಾರರಾಗಿದ್ದಾರೆ. ನಾನೇ ಅವರಿಗೆ ಚುನಾವಣೆಯ ಬಗ್ಗೆ ಎಲ್ಲವನ್ನೂ ಹೇಳಿ ಮನಿಸಿಕೊಡುತ್ತೇನೆ. ನನ್ನ ಸಲಹೆ ಮೇರೆಗೆ ಅವರು ಇತ್ತೀಚೆಗೆ ನಡೆದ, ತಮಿಳುನಾಡಿನ ಚುನಾವಣೆಯಲ್ಲಿ ಡಿಎಂಕೆ ಸ್ಟಾಲಿನ್ ಪರ ಕೆಲಸ ಮಾಡಿ, ಪಕ್ಷವನ್ನು ಅಧಿಕಾರಕ್ಕೆ ತರಿಸಿದ್ದಾರೆ. ಕರ್ನಾಟಕದಲ್ಲೂ ನೀವು ಅಧಿಕಾರಕ್ಕೆ ಬರಬೇಕು. ನಿಮಗೆ ಚುನಾವಣೆ ದೂರವಿಲ್ಲ. ನೀವು ಜನರ ಬಳಿ ದಿನಗಟ್ಟಲೇ ಕಳೆಯುವ ಬದಲು ಚುನಾವಣಾ ತಂತ್ರಗಾರಿಕೆ ಅಳವಡಿಸಿಕೊಳ್ಳಿ, ಇದರಲ್ಲಿ ನಿಮಗೆ ಪ್ರಶಾಂತ್ ನೆರವಾಗಲಿದ್ದಾರೆ.

ಚುನಾವಣೆಗೆ ಬಹಳ ಸಮಯವಿಲ್ಲ. ನೀವು ಯಾತ್ರೆ ಮತ್ತು ಗ್ರಾಮವಾಸ್ತವ್ಯ ಎಂದು ಸಮಯ ಹಾಳು ಮಾಡಬೇಡಿ. ಜನರ ಬಳಿ ತೆರಳಿ, ಅವರ ಕಷ್ಟ ಸುಖಗಳಿಗೆ ಸ್ಪಂದಿಸಿ, ಸಂಘಟನೆಗಾಗಿ ಸಮಾವೇಶ ನಡೆಯಲಿ. ರೈತರ ಕಷ್ಟ ಸುಖಗಳನ್ನು ಆಲಿಸಿ, ಅಧಿಕಾರಕ್ಕೆ ಬಂದರೆ ಏನು ಮಾಡುತ್ತೀರಿ ಎಂಬ ಭರವಸೆ ನೀಡಿ, ಚುನಾವಣಾ ಸಮೀಪದಲ್ಲಿ ನಾನೂ ನಿಮ್ಮ ಜೊತೆ ಕೈಜೋಡಿಸುತ್ತೇನೆ. ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಮೂಲಕ ಕೇಂದ್ರ ಸರ್ಕಾರ ರೈತರ ಬೆನ್ನೆಲುಬು ಮುರಿಯಲು ಹೊರಟಿದೆ. ಇದರ ವಿರುದ್ಧ ರಾಷ್ಟ್ರವ್ಯಾಪಿ ಪರ್ಯಾಯ ರೈತ ಸಂಘಟನೆ ಹುಟ್ಟು ಹಾಕಬೇಕು.

ನೀವು ರೈತ ನಾಯಕರ ಜೊತೆ ಹೋರಾಟ ನಡೆಸಿ, ಅವರ ಸಮಸ್ಯೆಗಳಿಗೆ ಸ್ಪಂದಿಸಿ, ಅವರು ಎಂದಿಗೂ ನಿಮ್ಮನ್ನು ಕೈಬಿಡುವುದಿಲ್ಲ ಎಂದು ತಮ್ಮ ಸರ್ಕಾರ ಕೃಷಿಕನ ಪರವಾಗಿ ಕೈಗೊಂಡ ತೀರ್ಮಾನಗಳನ್ನು ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಅಳವಡಿಸಿಕೊಳ್ಳಿ ಎಂದು ಸಲಹೆ ನೀಡಿದ್ದಾರೆ. 2014ರ ಲೋಕಸಭಾ ಚುನಾವಣೆಯ ನಂತರ ದೇಶದ ನಂಬರ್ ಒನ್ ಎಲೆಕ್ಷನ್ ಸ್ಪೆಷಲಿಸ್ಟ್ ಎಂದೇ ಖ್ಯಾತರಾದ ಪ್ರಶಾಂತ್ ಕಿಶೋರ್ ಅವರು ತದನಂತರದ ದಿನಗಳಲ್ಲಿ ಗುಜರಾತ್,ಪಶ್ಚಿಮಬಂಗಾಳ,ಉತ್ತರ ಪ್ರದೇಶ,ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳ ಪರವಾಗಿ ಚುನಾವಣಾ ರಣನೀತಿಯನ್ನು ರೂಪಿಸಿದ್ದರು. ಈ ಪೈಕಿ ಬಹುತೇಕ ರಾಜ್ಯಗಳಲ್ಲಿ ಪ್ರಶಾಂತ್ ಕಿಶೋರ್ ರಣನೀತಿಯಂತೆ ಕೆಲಸ ಮಾಡಿದ ಪಕ್ಷಗಳು ಗೆಲುವು ಸಾಧಿಸಿ, ಅಧಿಕಾರ ಹಿಡಿದಿವೆ. ಇತ್ತೀಚೆಗೆ ತಮಿಳ್ನಾಡು ವಿಧಾನಸಭಾ ಚುನಾವಣೆಯಲ್ಲಿ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿ.ಎಂ.ಕೆ ಪಕ್ಷದ ಪರವಾಗಿ ಪ್ರಶಾಂತ್ ಕಿಶೋರ್ ರೂಪಿಸಿದ ಚುನಾವಣಾ ತಂತ್ರಗಾರಿಕೆ ಯಶಸ್ವಿಯಾಗಿತ್ತಲ್ಲದೆ,ಸ್ಟಾಲಿನ್ ಅವರು ತಮಿಳುನಾಡು ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರಿದ್ದಾರೆ. ಪ್ರಶಾಂತ್ ಕಿಶೋರ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಕಾಂಗ್ರೆಸ್ ಪಕ್ಷ ಬಯಸುತ್ತಿದ್ದರೂ,ತಮಗೆ ಎಐಸಿಸಿ ಉಪಾಧ್ಯಕ್ಷ ಸ್ಥಾನವೇ ಬೇಕು ಎಂದು ಅವರು ಪಟ್ಟು ಹಿಡಿದ ಪರಿಣಾಮವಾಗಿ ಮೌನವಾಗಿತ್ತು.

ಈ ಹಿನ್ನೆಲೆಯಲ್ಲಿ ಪ್ರಶಾಂತ್ ಕಿಶೋರ್ ಇದೀಗ ತಮ್ಮದೇ ಹೊಸ ಶಕ್ತಿಯನ್ನು ಸ್ಥಾಪಿಸಿದ್ದು,ಅದೇ ಕಾಲಕ್ಕೆ ಕರ್ನಾಟಕದಲ್ಲಿ ಜೆಡಿಎಸ್ ಪರವಾಗಿ ರಣತಂತ್ರ ರೂಪಿಸಲು ಬಂದ ಆಹ್ವಾನವನ್ನು ಒಪ್ಪಿದ್ದಾರೆ ಎಂದು ಮೂಲಗಳು ಹೇಳಿವೆ.

ಸ್ಪೆಷಲಿಸ್ಟ್‌ಗಳ ಮೊರೆ ಹೋದ ಪಕ್ಷಗಳು!

ವಿವರದಿಂದ ಹಿಡಿದು, ಆಯಾ ಕ್ಷೇತ್ರಗಳ ಗಲ್ಲಿಗಳಲ್ಲಿ ಮತದಾರರ ಚಲನವಲನಗಳ ಮೇಲೆ ಕಣ್ಣಿಟ್ಟಿರುವ ಯಾರ ಪರವಾಗಿದ್ದಾರೆ, ಯಾರು ತಟಸ್ಥವಾಗಿದ್ದಾರೆ ಇಂತಹವರು ಬಿಜೆಪಿಯ ಜತೆ ಬರಲು ಏನು ಮಾಡಬೇಕು ಅನ್ನುವಂತಹ ವಿವರಗಳನ್ನು ಈ ಸಂಸ್ಥೆಗಳು ಬಿಜೆಪಿಗೆ ನೀಡುತ್ತಿವೆ. ಒಂದು ಬೆಳವಣಿಗೆಯಿಂದ ಆಗುವ ಪರಿಣಾಮಗಳಿಂದ ಹಿಡಿದು,ಯಾವ ಹೆಜ್ಜೆ ಇಟ್ಟರೆ ಪಕ್ಷದ ಪರವಾಗಿ ಜನರ ಒಲವು ಹೆಚ್ಚಾಗುತ್ತದೆ ಎಂಬುದರವರೆಗಿನ ಈ ಸಂಸ್ಥೆಗಳು ತಮ್ಮ ವರದಿಯಲ್ಲಿ ಹೇಳುತ್ತಿವೆ.

ಆಡಳಿತಾರೂಢ ಬಿಜೆಪಿಯ ಪರವಾಗಿ ಮೂರು ಸರ್ವೆ ಕಂಪನಿಗಳು ಕೆಲಸ ಮಾಡುತ್ತಿದ್ದರೆ,ಪ್ರತಿಪಕ್ಷ ಕಾಂಗ್ರೆಸ್ ಡಿಸೈನ್ ಬಾಕ್ಸ್ ಮತ್ತು ಎಐಎಂ ಹೆಸರಿನ ಸಂಸ್ಥೆಗಳ ಮೂಲಕ ಚುನಾವಣಾ ರಣನೀತಿಯನ್ನು ರೂಪಿಸುತ್ತಿದೆ. ಎಐಎಂ ಸಂಸ್ಥೆಯ ಮುಂಚೂಣಿಯಲ್ಲಿರುವ ಸುನೀಲ್ ಕನಗೋಳ್ ಅವರು ಈ ಹಿಂದೆ ಎಲೆಕ್ಷನ್ ಸ್ಪೆಷಲಿಸ್ಟ್ ಪ್ರಶಾಂತ್ ಕಿಶೋರ್ ತಂಡದಲ್ಲಿದ್ದವರು ಎಂಬುದು ಗಮನಾರ್ಹ.

ಸರಕಾರಿ ಆಸ್ತಿ ಪರಭಾರೆ ಯತ್ನ

ಮಾತ್ರ. ಇದನ್ನು ಬಿಜೆಪಿಯವರು ಅರಗಿಸಿಕೊಳ್ಳಲಿ ಸಾಕು ಎಂದು ಕುಮಾರಸ್ವಾಮಿ ಅವರು ಗುಡುಗಿದರು. ನಾನು ಸುಖಾಸುಮ್ಮನೆ ಸದನದ ಸಮಯವನ್ನು ಹಾಳು ಮಾಡಲಾರೆ. ಇವತ್ತಿನ ಜೆಡಿಎಲ್‌ಪಿ ಸಭೆಯಲ್ಲಿಯೂ ಈ ವಿಷಯ ಸೇರಿ ಹಲವಾರು ವಿಚಾರವಾಗಿ ಚರ್ಚೆ ಮಾಡಲಾಗಿದೆ. ರಾಜ್ಯದಲ್ಲಿ ಇತ್ತೀಚೆಗೆ ಬೆಂಗಳೂರು ನಗರ ಸೇರಿ 22 ಜಿಲ್ಲೆಯಲ್ಲಿ ಮಳೆ ಹೆಚ್ಚಾಗಿ ಜನರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಇದರಿಂದ ದೊಡ್ಡ ಮಟ್ಟದ ನಷ್ಟವಾಗಿದೆ. ಬೆಳೆ ಹಾನಿ, ಮನೆ ಕುಸಿತವೂ ಆಗಿದೆ. ಈ ಬಗ್ಗೆ ಸದನದಲ್ಲಿ ವಿವರವಾಗಿ ಚರ್ಚೆ ಮಾಡಲು ನಿರ್ಧಾರ ಮಾಡಲಾಗಿದೆ ಎಂದು ಮಾಜಿ ಮುಖ್ಯಮಂತ್ರಿಗಳು ಹೇಳಿದರು. ಪರ್ಸೆಂಟೇಜ್ ಬಗ್ಗೆ ರಾಜ್ಯದ ಉದ್ದಗಲಕ್ಕೂ ಬಿದಿಲಿ ಚರ್ಚೆ ನಡೆಯುತ್ತಿದೆ. ಅಧಿಕೃತ ವಿರೋಧ ಪಕ್ಷ, ಆಳುವ ಪಕ್ಷಗಳ ನಡುವೆ ರಾಜ್ಯದಲ್ಲಿ ನಡೆಯುತ್ತಿರುವ ಲೂಟಿ ಬಗ್ಗೆ ಬರೀ ಮಾತಿನಲ್ಲಿ ಪೈಪೋಟಿ ನಡೆಯುತ್ತಿದೆ. ನಿಖರವಾಗಿ ದಾಖಲೆಗಳನ್ನು ಇಟ್ಟರೆ ಚರ್ಚೆ ಮಾಡಿ ಎಂದು ನಾನು ನಮ್ಮ ಶಾಸಕರಿಗೆ ತಿಳಿಸಿದ್ದೇನೆ. ನಾನು ಕೂಡ ದಾಖಲೆ ಇಟ್ಟುಕೊಂಡೇ ಮಾತನಾಡುತ್ತೇನೆ. ಸುಖಾಸುಮ್ಮನೆ ಸದನದಲ್ಲಿ ಸಂತೆ ಭಾಷಣ ಮಾಡಿದರೆ ಪ್ರಯೋಜನವಿಲ್ಲ. ಸದನದ ಅಮೂಲ್ಯ ಸಮಯ ಸದುಪಯೋಗ ಮಾಡಿಕೊಳ್ಳುವಂತೆ ಶಾಸಕರಿಗೆ ಸಲಹೆ ನೀಡಿದ್ದೇನೆ ಎಂದು ಕುಮಾರಸ್ವಾಮಿ ಹೇಳಿದರು. ಇಂದು ಸಂತಾಪ ಚರ್ಚೆ ನಂತರ ನಾಳೆಯಿಂದ 9 ದಿನಗಳ ಕಾಲ ಅಧಿಕೃತ ವಿರೋಧ ಪಕ್ಷ ಚರ್ಚೆಗೆ ಯಾವ ರೀತಿ ಅವಕಾಶ ಕೊಡಲಿದೆ ಎಂಬುದನ್ನು ನೋಡುತ್ತೇವೆ. ಉತ್ತಮ ರೀತಿಯ ಕಲಾಪಕ್ಕೆ ಅವಕಾಶ ಯಾವ ರೀತಿ ಇರುತ್ತದೆ ಎಂದು ಗಮನಿಸುತ್ತೇವೆ. ಸುಮ್ಮನೆ ವಿಚಾರ ಇಲ್ಲದೆ, ದಾಖಲೆ ಇಲ್ಲದೇ ಮಾತಾಡೋದ್ರಿಂದ ಸದನದ ಕಲಾಪಕ್ಕೆ ಧಕ್ಕೆ ಆಗಲಿದೆ.

ಇತ್ತೀಚೆಗೆ ನಾನು ಸದನದ ಕಲಾಪದಲ್ಲಿ ದೊಡ್ಡ ಮಟ್ಟದ ಚರ್ಚೆಯಲ್ಲಿ ಪಾಲ್ಗೊಂಡಿಲ್ಲ. ಯಾವುದಾದರೂ ಮುಖ್ಯ ವಿಚಾರ ಇದ್ದಾಗ ಭಾಗಿಯಾಗಿದ್ದೇನೆ. ನಾನು ಭಾಗಿಯಾದಾಗ ದಾಖಲೆ ಸಮೇತ ಮಾತನಾಡಿದ್ದೇನೆ. ಒಂದಿಷ್ಟು ಜನ ಹೇಳ್ತಾ ಇದ್ದಾರೆ, ಸದನದಲ್ಲಿ ಕುಮಾರಸ್ವಾಮಿ ಏನು ಮಾತಾಡಿ ಏಟ್ಟಾರು ಅಂತ. ಅವರತ್ರ ನಾನು ಪಾಠ ಹೇಳಿಸಿಕೋಬೇಕಿದೆ. ಒಂದಿಷ್ಟು ದಾಖಲೆಗಳನ್ನು ನಾನು ಸ್ವಾಪಲ್ ಆಗಿ ಬಹಿರಂಗ ಮಾಡುತ್ತೇನೆ. ಇದನ್ನು ಒಂದು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇನೆ. ಸಾರ್ವಜನಿಕ ಆಸ್ತಿಯನ್ನು ಹಾಕಿಕೊಳ್ಳಲು ಹೊರಟಿದ್ದಾರೆ ಇದ್ದಾ ಇದ್ದಾರೆ. ಇದಕ್ಕೆ ತಡೆ ಹಾಕಬೇಕಿದೆ ಎಂದೇ ಅವರು ಮಾಹಿತಿ ನೀಡಿದರು. ರಾಜ್ಯದಲ್ಲಿ ಭ್ರಷ್ಟಾಚಾರ ಯಾವ ರೀತಿ ಇದೆ ಎನ್ನುವುದು ನಾಡಿನ ಜನತೆಗೆ ಹಾಗೂ ಪ್ರಧಾನಿ ಮೋದಿ ಅವರಿಗೂ ಗೊತ್ತಾಗಲಿ. ಅದಕ್ಕೇ ಎಲ್ಲದಕ್ಕೂ ದಾಖಲೆ ಇಟ್ಟು ಮಾತನಾಡುತ್ತೇನೆ. ಇದು ಭಾರೀ ಹಗರಣ. ಸರ್ಕಾರಕ್ಕೆ ಬರಬೇಕಾದ ಎಂಟು ಸಾವಿರ ಕೋಟಿ ರೂಪಾಯಿ ಕಬಳಿಸುವ ಹುನ್ನಾರ ನಡೆದಿದೆ. ಈ ಸರಕಾರಿ ಆಸ್ತಿಗೆ 2008-09ರಲ್ಲೇ 5 ಸಾವಿರ ಕೋಟಿ ಅಂತ ಅಂದಾಜು ಕಟ್ಟಿದ್ದರು. ಆದರೆ, ಈ ಬಗ್ಗೆ ಸರಕಾರ ಮಾಡಿರುವ ಆದೇಶ ದಿಗ್ಭ್ರಮೆ ಉಂಟು ಮಾಡುವ ರೀತಿಯಲ್ಲಿದೆ ಎಂದು ಕುಮಾರಸ್ವಾಮಿ ಹೇಳಿದರು.

ಅಲ್ಲಿಂದಲೇ ನಿಮಗೆ ನರಕಯಾತನೆ ಶುರು

ಅಬ್ಬಾ ಸಾಲ ತೀರಿತು ಎಂದು ನಿಟ್ಟುಸಿರು ಬಿಡುತ್ತಿರುವಾಗಲೇ ಅವರ ಮೊಬೈಲ್‌ಗೆ ಅಶ್ಲೀಲ ಪದಗಳನ್ನು ಬಳಸಿ ಮೆಸೇಜ್ ರವಾನೆಯಾಯಿತು. "ನೀವು ಲೋನ್ ಹಣ ಕಟ್ಟಿಲ್ಲ, ಹಣ ಕಟ್ಟದಿದ್ದರೆ ನಿಮ್ಮ ಫೋಟೋವನ್ನು ಎಡಿಟ್ ಮಾಡಿ ನಿಮ್ಮ ಸ್ನೇಹಿತರಿಗೆ ಹಾಗೂ ಸಂಬಂಧಿಕರಿಗೆ ಕಳುಹಿಸುತ್ತೇವೆ" ಎಂದು ಹೆದರಿಸಲಾಗಿತ್ತು. ಮರ್ಯಾದೆಗೆ ಹೆದರಿ ಆ್ಯಪ್‌ನಲ್ಲಿ ತೋರಿಸಿದಂತೆ ಅವರು ಜನವರಿ 18ರಂದು 13,429 ರೂ.ಗಳನ್ನು ವರ್ಗಾವಣೆ ಮಾಡಿದರು. ಇದು ಇಷ್ಟಕ್ಕೇ ನಿಲ್ಲಲಿಲ್ಲ. ಎರಡ್ಮೂರು ದಿನಕ್ಕೊಮ್ಮೆ ಇಂತಹದ್ದೇ ಬೆದರಿಕೆ ಮೆಸೇಜ್‌ಗಳು ಬರುತ್ತಿತ್ತು. ಎಂಜಿನಿಯರ್ ಸಾಹೇಬರು ಕೂಡ ಹೆದರಿ ಹಣ ವರ್ಗಾವಣೆ ಮಾಡುತ್ತಲೇ ಇದ್ದರು. ಮತ್ತೊಂದು ವಿಚಿತ್ರವೆಂದರೆ, ಇವರಿಗೆ ಹಣ ಕಟ್ಟಬೇಕು ಎಂದು ಆ್ಯಪ್‌ನಲ್ಲಿ ತೋರಿಸುತ್ತಿರುವಾಗಲೇ ಆ್ಯಪ್‌ನ ಕೆಳಗೆ ಮತ್ತೊಂದು ಆ್ಯಪ್ ನಿಮಗೆ ಇಂತಿಷ್ಟು ಹಣ ಸಾಲ ದೊರೆಯುತ್ತದೆ ಎಂದು ಇವರು ಕಟ್ಟಬೇಕಾದ ಹಣಕ್ಕಿಂತ ನೂರಿನ್ನೂರು ರೂ.ಗಳನ್ನು ಹೆಚ್ಚಾಗಿ ತೋರಿಸುತ್ತಿತ್ತು. ಆ್ಯಪ್‌ಗೆ ಕಟ್ಟಲು ಹಣವಿಲ್ಲದ ವೇಳೆ ಬೇರೆ ದಾರಿ ಕಾಣದೇ ಮತ್ತೊಂದು ಆ್ಯಪ್ ಮೇಲೆ ಕ್ಲಿಕ್ ಮಾಡಿ ಅಲ್ಲಿಂದ ಜಮೆಯಾದ ಹಣವನ್ನು ಮೊದಲು ಸಾಲ ಪಡೆದ ಆ್ಯಪ್‌ಗೆ ಕಟ್ಟುತ್ತಿದ್ದರು. ಹೀಗೆ ಅವರು ಜನವರಿಯಿಂದ ಪಡೆದಿದ್ದ 5 ಸಾವಿರ ರೂ. ಸಾಲಕ್ಕೆ ಏಪ್ರಿಲ್ 19ರವರೆಗೆ ಒಟ್ಟು 19,46,049 ರೂ.ಗಳನ್ನು ಪಾವತಿಸಿದರೂ ಮತ್ತೆ ಮತ್ತೆ ಹಣ ಕಟ್ಟುವಂತೆ ಮೆಸೇಜ್ ಬರುತ್ತಲೇ ಇತ್ತು. ಕಟ್ಟಲು ಹಣವೂ ಇವರ ಬಳಿ ಇರಲಿಲ್ಲ. ಸ್ನೇಹಿತರು ಮತ್ತಿತರರಿಂದ ಸಾಲ ಪಡೆದು ಆ್ಯಪ್‌ಗೆ ಹಣ ಕಟ್ಟಿದ್ದರು. ಇನ್ನೂ ತನ್ನಿಂದ ಹಣ ಕಟ್ಟಲು ಸಾಧ್ಯವೇ ಇಲ್ಲ ಎಂಬಂತಹ ಪರಿಸ್ಥಿತಿಯಲ್ಲಿ ಗಟ್ಟಿ ಮನಸ್ಸು ಮಾಡಿಕೊಂಡು ಅವರು ಹಣವನ್ನು ಕಟ್ಟದೇ ಹಾಗೇ ಉಳಿದುಬಿಟ್ಟರು.

ನಂತರ ಶುರುವಾಯ್ತು ನೋಡಿ ನರಕಯಾತನೆ; ಸಾಲ ನೀಡಿದ್ದ ಲೋನ್ ಆ್ಯಪ್‌ನವರು ಇವರ ಮೊಬೈಲ್‌ನಲ್ಲಿರುವ ಕಾಂಟ್ಯಾಕ್ಟ್ ನಂಬರ್‌ಗಳು, ಸಾಮಾಜಿಕ ಜಾಲತಾಣದ ಅಕೌಂಟ್ ಮುಂತಾದವುಗಳನ್ನು ಅದ್ಯಾಗೋ ಸಂಗ್ರಹಿಸಿಕೊಂಡಿದ್ದರು. ಮೊದಲಿಗೆ ಲೋನ್ ಪಡೆದಿದ್ದ ಎಂಜಿನಿಯರ್‌ಗೆ ಫೋಟೋವನ್ನು ಎಡಿಟ್ ಮಾಡಿ ಅಶ್ಲೀಲ ಚಿತ್ರಣಗಳನ್ನು ಅವರಿಗೇ ರವಾನಿಸಲಾಗಿತ್ತು. ನಂತರ ಅವರ ಕಾಂಟಾಕ್ಟ್ ಲಿಸ್ಟ್‌ನಲ್ಲಿರುವ ಕೆಲವು ಸ್ನೇಹಿತರ ವಾಟ್ಸಾಪ್ ಡಿಪಿಗಳಲ್ಲಿದ್ದ ಫೋಟೋಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಇವರಿಗೆ ಕಳುಹಿಸಲಾಯಿತು. ಕೆಲ ದಿನಗಳ ನಂತರ ಎಂಜಿನಿಯರ್ ಅವರ ಸ್ನೇಹಿತರ ಫೋಟೋಗಳನ್ನು ಅಶ್ಲೀಲವಾಗಿ ಎಡಿಟ್ ಮಾಡಿ ಸ್ನೇಹಿತರಿಗೆ ರವಾನಿಸಿ, ಈ ಫೋಟೋ ಎಂಜಿನಿಯರ್ ನಮಗೆ ಕಳುಹಿಸಿದ್ದಾರೆ ಎಂದು ಅಡಿಬರಹ ಬರೆಯಲಾಗಿತ್ತು. ಹೀಗೆ ವಾಟ್ಸಾಪ್‌ನಲ್ಲಿ ಫೋಟೋ ಸ್ವೀಕರಿಸಿದ ಸ್ನೇಹಿತರು ಹಾಗೂ ಸಂಬಂಧಿಕರು ಎಂಜಿನಿಯರ್ ಜೊತೆ ಜಗಳವಾಡುವಂತಹ ಪರಿಸ್ಥಿತಿಯೂ ನಿರ್ಮಾಣವಾಯಿತು. ಯಾರಿಗೂ ಏನನ್ನೂ ಹೇಳಿಕೊಳ್ಳಲಾಗದೇ ಎಂಜಿನಿಯರ್ ಯಾತನೆ ಪಡುತ್ತಿದ್ದ ವೇಳೆ ಇತ್ತೀಚೆಗೆ ಸರ್ಕಾರಿ ಅಧಿಕಾರಿಯಾಗಿರುವ ಅವರ ಪತ್ನಿ ಮೊಬೈಲ್‌ಗೆ ಆ್ಯಪ್‌ನವರ ಕಡೆಯಿಂದ ಎಡಿಟ್ ಮಾಡಲ್ಪಟ್ಟ ಫೋಟೋ ರವಾನೆಯಾಗಿ ಅವರು ಪತಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡ ವೇಳೆ ಎಂಜಿನಿಯರ್ ಸಾಹೇಬರು ಲೋನ್ ಆ್ಯಪ್‌ನ ನರಕದಲ್ಲಿ ತಾವು ಸಿಲುಕಿಕೊಂಡಿರುವ ಬಗ್ಗೆ ಪತ್ನಿಗೆ ತಿಳಿಸಿದ್ದಾರೆ. ನಂತರ ಪತ್ನಿಯ ಸಲಹೆ ಮೇರೆಗೆ ಮಂಡ್ಯ ಸೆನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವ್ಯಕ್ತಿ, ಪಕ್ಷಕ್ಕಿಂತ ದೇಶ ಶ್ರೇಷ್ಠ ಬಿಜೆಪಿಯ ಪ್ರಧಾನ ವಿಚಾರಧಾರೆ

ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಪ್ರಶಿಕ್ಷಣ ಶಿಬಿರಕ್ಕೆ ಚಾಲನೆ

ಮೈಸೂರು, ಸೆ.12(ಆರ್‌ಕೆಬಿ)– ವ್ಯಕ್ತಿಗಿಂತ ಪಕ್ಷ ಶ್ರೇಷ್ಠ, ಪಕ್ಷಕ್ಕಿಂತ ದೇಶ ಶ್ರೇಷ್ಠ ಎಂಬ ವಿಚಾರಧಾರೆಯಡಿ ಬಿಜೆಪಿ ಕೆಲಸ ಮಾಡುತ್ತಿದೆ. ಎಲ್ಲರನ್ನು ಸರ್ವ ಸಮಾನವಾಗಿ ಕಾಣುವ ಪಕ್ಷ ನಮ್ಮದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಇಂದಿಲ್ಲಿ ತಿಳಿಸಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ರಾಜ್ಯ ಪ್ರಶಿಕ್ಷಣ ಶಿಬಿರಕ್ಕೆ ಚಾಲನೆ ನೀಡಿ ಅವರು, ಮುಸ್ಲಿಂ ಮಹಿಳೆಯರಿಗೆ ತ್ರಿತಲಾಕ್ ಪದ್ಧತಿ ರದ್ದು ಮಾಡಿ ಅವರಿಗೆ ಭದ್ರತೆ ನೀಡಿತು. ಅಬ್ದುಲ್ ಕಲಾಂ ಅವರನ್ನು ರಾಷ್ಟ್ರಪತಿ, ಜಾರ್ಜ್ ಫರ್ನಾಂಡೀಸ್ ಅವರನ್ನು ರಕ್ಷಣಾ ಸಚಿವರನ್ನಾಗಿ ಮಾಡಿತು. ಬಿಜೆಪಿಯಲ್ಲಿ ಯಾವುದೇ ಜಾತಿ ರಾಜಕೀಯ ಇಲ್ಲ. ರಾಷ್ಟ್ರೀಯ ವಿಚಾರಧಾರೆ ಮುಖ್ಯ. ಅಂತಹ ವಿಚಾರಧಾರೆ ಹೊಂದಿರುವ ಎಲ್ಲರಿಗೂ ಗೌರವ, ಅವಕಾಶ, ಸ್ಥಾನಮಾನಗಳನ್ನು ನೀಡುತ್ತಿದೆ. ರಾಷ್ಟ್ರದ ವಿರುದ್ಧ, ಪಾಕಿಸ್ತಾನದ ಪರ ಘೋಷಣೆ ಮಾಡುವವರನ್ನು ಮಾತ್ರ ಬಿಜೆಪಿ ವಿರೋಧಿಸುತ್ತದೆ ಎಂದು ಹೇಳಿದರು.

ಸಿದ್ಧಾಂತದಲ್ಲಿ ರಾಜೀ ಮಾಡಿಕೊಳ್ಳುವ ಪಕ್ಷ ನಮ್ಮದಲ್ಲ. ಗುರಿ ಸಾಧಿಸಲು ವ್ಯಕ್ತಿ ಇರಬೇಕು. ಆದರೆ ಆ ವ್ಯಕ್ತಿ ಸಚ್ಚಾರಿತ್ರ್ಯ ರಾಜಕಾರಣ ಮಾಡುವ ಗುರಿ ಹೊಂದಿರಬೇಕು. ಅಂಥವರಲ್ಲಿ 6 ವರ್ಷ ಪ್ರಧಾನಿಯಾಗಿ ಕಳಂಕ ರಹಿತ ಆಡಳಿತ ನಡೆಸಿದ ಅಟಲ್ ಬಿಹಾರಿ ವಾಜಪೇಯಿ, ನಂತರ ಈಗ 8 ವರ್ಷದಿಂದ ಕಳಂಕರಹಿತ ಪ್ರಧಾನಿಯಾಗಿ ಮೋದಿ ಉತ್ತಮ ಆಡಳಿತ ನೀಡುತ್ತಿದ್ದಾರೆ ಎಂದರು.

ನಾಶದ ಅಂಚಿನಲ್ಲಿರುವ ಕಾಂಗ್ರೆಸ್: ಬಿಜೆಪಿಯಲ್ಲಿ ಯಾರ ಅಪ್ಪಂದಿರು ರಾಜಕಾರಣದಲ್ಲಿ ಇಲ್ಲ. ಪರಿವಾರ ರಾಜಕಾರಣ ಬಿಟ್ಟು, ರಾಷ್ಟ್ರವಾದದ ಮೇಲೆ ನಡೆಯುತ್ತಿದ್ದೇವೆ. ಹಾಗಾಗಿ ಸಾಮಾನ್ಯ ಕಾರ್ಯಕರ್ತನೂ ನಾಯಕನಾಗುತ್ತಾನೆ. ಆದರೆ ಕಾಂಗ್ರೆಸ್‌ನಲ್ಲಿ ಅಪ್ಪ-ಮಗ ಎಲ್ಲರೂ ರಾಜಕಾರಣಿಗಳೇ ಆಗಿದ್ದಾರೆ. ಬಹಳ ವರ್ಷ ಆಳ್ವಿಕೆ ನಡೆಸಿದ ಕಾಂಗ್ರೆಸ್ ಇಂದು ನಾಶದತ್ತ ನಡೆದಿದೆ. ಕಾಂಗ್ರೆಸ್‌ನವರು ಒಂದು ದಿನವೂ ಭಾರತ್ ಮಾತೆಗೆ ಜೈ, ವಂದೇ ಮಾತರಂ ಹೇಳಲಿಲ್ಲ. ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸೋನಿಯಾಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿಗೆ ಜೈ ಎನ್ನುತ್ತಿದ್ದಾರೆಯೇ ಹೊರತು ವಂದೇ ಮಾತರಂ ಹೇಳಿಲ್ಲ ಹಾಗಾಗಿ ಜಗತ್ತಿನ ಅತೀ ದೊಡ್ಡ ಪಕ್ಷವಾಗಿರುವ ಬಿಜೆಪಿ ಕಾರ್ಯಕರ್ತ ಎನಿಸಿಕೊಳ್ಳುವ ಹೆಮ್ಮೆ ನಮಗಿರಬೇಕು ಎಂದು ಹೇಳಿದರು.


ಶೀಘ್ರದಲ್ಲೇ ಕಾಂಗ್ರೆಸ್ ಮುಕ್ತ ದೇಶ: ಇಂದು ರಾಹುಲ್ ಗಾಂಧಿಗೆ ಅವರ ಸ್ವಕ್ಷೇತ್ರ ಅಮೇಥಿಯಲ್ಲೇ ಜಾಗವಿಲ್ಲದೆ ಕೇರಳದಲ್ಲಿ ನಿಲ್ಲುವ ಪರಿಸ್ಥಿತಿ ಬಂತು. ಅದೇ ರೀತಿ ಸ್ವಕ್ಷೇತ್ರ ಮೈಸೂರಿನಲ್ಲಿಯೇ ಜಾಗವಿಲ್ಲದೇ ಬಾದಾಮಿಯಲ್ಲಿ ನಿಲ್ಲುವಂತಹ ಸ್ಥಿತಿ ಸಿದ್ದರಾಮಯ್ಯ ಅವರಿಗಾಯಿತು. ಕುಟುಂಬ ರಾಜಕಾರಣಕ್ಕಾಗಿ ಇಂದು ಕಾಂಗ್ರೆಸ್ ನಾಶವಾಗುತ್ತಿದೆ ಅವರ ಪಕ್ಷದ ಮುಖಂಡರೇ ಪಕ್ಷದಿಂದ ಹೊರ ಹೋಗುತ್ತಿದ್ದಾರೆ. ಶೀಘ್ರದಲ್ಲೇ ದೇಶ ಕಾಂಗ್ರೆಸ್ ಮುಕ್ತವಾಗಲಿದೆ ಎಂದರು.

ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಸಯ್ಯದ್ ಕಲಾಂ, ಸಂಸದ ಪ್ರತಾಪ್‌ಸಿಂಹ, ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ, ಪ್ರಶಿಕ್ಷಣ ಶಿಬಿರದ ರಾಜ್ಯ ಸಂಚಾಲಕರೂ ಆದ ಮೋರ್ಚಾ ಜಿಲ್ಲಾಧ್ಯಕ್ಷ ಡಾ.ಅನಿಲ್ ಥಾಮಸ್, ಜಿಲ್ಲಾಧ್ಯಕ್ಷ ರಾಷ್ಟ್ರೀಯ ಖಜಾಂಚಿ ಮೊಹಿಸಿನ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಅಲ್ಪಸಂಖ್ಯಾತ ಮೋರ್ಚಾ ಉಸ್ತುವಾರಿ ಎಂಎಲ್‌ಸಿ ರವಿಕುಮಾರ್, ಪಕ್ಷದ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಮೋರ್ಚಾ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಇಲಿಯಾಸ್ ಅಹಮದ್ ಇನ್ನಿತರರು ಉಪಸ್ಥಿತರಿದ್ದರು.



ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ಮೈಸೂರಿನಲ್ಲಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ರಾಜ್ಯ ಪ್ರಶಿಕ್ಷಣ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಚಿತ್ರದಲ್ಲಿ ಉಪಮೇಯರ್ ಡಾ.ರೂಪಾ, ಮೇಯರ್ ಶಿವಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಸಯ್ಯದ್ ಕಲಾಂ, ಪಕ್ಷದ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎ.ರಾಜೇಂದ್ರ, ಗ್ರಾಮಾಂತರ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಸರ್ಕಾರದ ಅವಧಿಯ ಹಗರಣಗಳ ತನಿಖೆ ಮಾಡಿಸುತ್ತೇವೆ



ಮೈಸೂರು, ಸೆ.12(ಆರ್‌ಕೆಬಿ)– ಸಿದ್ದರಾಮಯ್ಯ ಸರ್ಕಾರ ಇದ್ದಾಗ ನಡೆದಿರುವ ಅಕ್ರಮಗಳ ಕುರಿತು ತನಿಖೆ ನಡೆಸಲಾಗುವುದು. ಅದಕ್ಕಾಗಿ ಸಮರ್ಪಕ ದಾಖಲಾತಿಗಳನ್ನು ಸಂಗ್ರಹಿಸುತ್ತಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ತಿಳಿಸಿದರು.

ಮೈಸೂರಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅರ್ಕಾವತಿ ಬಡಾವಣೆ, ಹಾಸ್ಟೆಲ್ ದಿಂಬು–ಹಾಸಿಗೆ ಹಗರಣ, ಇಂಧನ ಇಲಾಖೆ ಹಗರಣ ನಡೆದವು. ಅವೆಲ್ಲವನ್ನು ಸಿದ್ದರಾಮಯ್ಯ ಮುಚ್ಚಿಡುವ ಕೆಲಸ ಮಾಡಿದ್ದಾರೆ. ಅವುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಬಚ್ಚಿಟ್ಟಿದ್ದರು. ಅವೆಲ್ಲವನ್ನೂ ಹೊರಗೆ ತೆಗೆಯುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಸಂಪೂರ್ಣ ತನಿಖೆ ಮಾಡುತ್ತೇವೆ. ತಪ್ಪಿತಸ್ಥರನ್ನು ಒಳಗೆ ಕೂರಿಸುತ್ತೇವೆ ಎಂದು ಹೇಳಿದರು.

ನಾವು ವಿರೋಧ ಪಕ್ಷದಲ್ಲಿದ್ದಾಗಲೂ ಸಿದ್ದರಾಮಯ್ಯ ಹಗರಣದ ವಿರುದ್ಧ ಧ್ವನಿ ಎತ್ತಿದ್ದೆವು. ಹೋರಾಟ ಮಾಡಿದ್ದೆವು. ಸಮಾಜವಾದಿ ಎಂದು ಹೇಳಿಕೊಳ್ಳುವ ಮಾಜಿ ಸಿಎಂ ಸಿದ್ದರಾಮಯ್ಯ ನೈತಿಕತೆ ಇದ್ದಿದ್ದರೆ ಅವರೇ ತನಿಖೆ ಮಾಡುತ್ತಿದ್ದರು. ಆದರೆ, ಅವರು ಮಾಡಲಿಲ್ಲ. ಎಲ್ಲವನ್ನು ಮುಚ್ಚಿಟ್ಟರು ಎಂದು ನಳಿನ್‌ಕುಮಾರ್ ಕಟೀಲ್ ದೂರಿದರು.

ನಮ್ಮ ಸರ್ಕಾರದ ಅವಧಿಯಲ್ಲಿ ಪಿಎಸ್‌ಐ ನೇಮಕಾತಿ ಅಕ್ರಮ ಹೊರಬಂತು. ಕೂಡಲೇ ನಾವು ತನಿಖೆಗೆ ಆದೇಶಿಸಿದೆವು. ತಪ್ಪಿತಸ್ಥರ ವಿರುದ್ಧ ಯಾವುದೇ ಮುಲಾಜಿಗೆ ಒಳಗಾಗದೆ ಕ್ರಮಕ್ಕೆ ಮುಂದಾಗಿದ್ದೇವೆ. ಆದರೆ ಮಾತೆತ್ತಿದರೆ ಸಮಾಜವಾದಿ ಎನ್ನುವ ಸಿದ್ದರಾಮಯ್ಯ ತಾವು ಮುಖ್ಯಮಂತ್ರಿಯಾಗಿದ್ದಾಗ ಏಕೆ ನೈತಿಕತೆ ಪ್ರದರ್ಶಿಸಲಿಲ್ಲ. ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಇವರು ಏನು ಮಾಡಿದರು. ಸಿದ್ದರಾಮಯ್ಯ ಯಾವುದೇ ಆಧಾರ, ದಾಖಲಾತಿಗಳಿಲ್ಲದೇ ಭ್ರಷ್ಟಾಚಾರದ ಆರೋಪವನ್ನು ನಮ್ಮ ಸರ್ಕಾರದ ವಿರುದ್ಧ ಮಾಡುತ್ತಿದ್ದಾರೆ. ಕಾಂಗ್ರೆಸ್‌ನ ಅವರ ನಾಯಕ ರಾಹುಲ್‌ಗಾಂಧಿ ಕೂಡ ಇದೇ ರೀತಿ ರಫೇಲ್ ಸೇರಿದಂತೆ ಹಲವು ಆರೋಪ ಮಾಡಿದ್ದರು. ಅದೇ ಕತೆ ಈಗಲೂ ಆಗುತ್ತಿದೆ. ಕಾಂಗ್ರೆಸ್ ವರಿಷ್ಠರು, ಉಪಾಧ್ಯಕ್ಷರು, ಕೆಪಿಸಿಸಿ ಅಧ್ಯಕ್ಷರು ಯಾವ ಪ್ರಕರಣದಲ್ಲಿ ಜಾಮೀನಿನ ಮೇಲಿದ್ದಾರೆ ಎಂಬುದನ್ನು ನೋಡಿ ಕೊಳ್ಳಲಿ. ಸಿದ್ದರಾಮಯ್ಯ ಬಳಿ ಸಾಕ್ಷ್ಯಗಳಿದ್ದರೆ ಬಹಿರಂಗಪಡಿಸಲಿ ಎಂದು ನಳಿನ್‌ಕುಮಾರ್ ಕಟೀಲ್ ಸವಾಲೆಸೆದರು.

3064 ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆ ನೇರ ನೇಮಕ

ಮೈಸೂರು, ಸೆ.12– ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 3064 ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ (ಸಿಎಆರ್/ಡಿಎಆರ್) ಹುದ್ದೆಗಳ ನೇರ ನೇಮಕಾತಿಗೆ ಅರ್ಜಿ ಆಹ್ವಾನಿಸಿ ಅಧಿಸೂಚನೆ ಹೊರಡಿಸಲಾಗಿದೆ. ಅರ್ಜಿಗಳನ್ನು ಇಲಾಖೆ ಅಧಿಕೃತ ವೆಬ್‌ಸೈಟ್ https://ksp.karnataka.gov.in ಅಥವಾ https://ksp-recruitment.in ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿದ್ದು, ಅಂಚೆ ಅಥವಾ ಖುದ್ದಾಗಿ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಸೆ.19ರ ಬೆಳಿಗ್ಗೆ 10 ಗಂಟೆಯಿಂದ ಅ.31ರ ಸಂಜೆ 6 ಗಂಟೆಯವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿದ್ದು, ಅರ್ಜಿ ಶುಲ್ಕ ಪಾವತಿಸಲು ಅ.3 ಕಡೇ ದಿನವಾಗಿದೆ.



ನೂತನ ಮೇಯರ್ ಶಿವಕುಮಾರ್ ಅವರನ್ನು ಮೈಸೂರು ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಚಿದಂಬರ ಸನ್ಮಾನಿಸಿದರು. ಈ ವೇಳೆ ಅಂದಾನಿ, ರಾಜು ಸುತ್ತೂರು, ನಟರಾಜು ಮುರುಡುಗಳ್ಳಿ, ಇತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆ



ಮೈಸೂರು, ಸೆ.12– ಮೈಸೂರು ಅಮಿಟಿ ಲೇಡೀಸ್ ಸರ್ಕಲ್ 108 ಮತ್ತು ಅಮಿಟಿ ರೌಂಡ್ ಟೇಬಲ್ 156 ಸಹಯೋಗದೊಂದಿಗೆ 'ರಾಷ್ಟ್ರೀಯ ಕ್ರೀಡಾ ದಿನಾಚರಣೆ'ಯನ್ನು ಮೈಸೂರು ತಾಲೂಕು ಕೆಂಚಲಗೂಡಿನ 'ಕಲಿಯುವ ಮನೆ' ಆವರಣದಲ್ಲಿ ತೆಂಗಿನ ಸಸಿ ನೆಟ್ಟು ಆಚರಣೆ ಮಾಡಲಾಯಿತು.

ಅಧ್ಯಕ್ಷೆ ಅಪರ್ಣಾ ರಂಗ ಮಾತನಾಡಿ, ದಿವ್ಯದೀಪ ಚಾರಿಟಬಲ್ ಟ್ರಸ್ಟ್ ಮೈಸೂರಿನಲ್ಲಿ ಅವಕಾಶ ವಂಚಿತ ಮಕ್ಕಳಿಗಾಗಿ 'ಕಲಿಯುವ ಮನೆ' ಮೂಲಕ ಅವಕಾಶ ವಂಚಿತ ಮಕ್ಕಳನ್ನು ಸ್ವಾವಲಂಬಿ ನಾಗರಿಕರನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದರು. ಈ ವೇಳೆ ಶಿಕ್ಷಕರಿಗಾಗಿ ಆಯೋಜಿಸಿದ್ದ ನೀರು ತುಂಬುವುದು, ಓಟದ ಸ್ಪರ್ಧೆ ಮತ್ತು ಮ್ಯೂಸಿಕಲ್ ಚೇರ್ ಸೇರಿದಂತೆ ಇತರೆ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಸೆ.17ರಂದು ಅಲ್ಪಸಂಖ್ಯಾತರ ವಿಭಾಗದ ರಾಜ್ಯಾಧ್ಯಕ್ಷ ಅಬ್ದುಲ್ ಜಬ್ಬಾರ್ ಭೇಟಿ: ಪೂರ್ವಭಾವಿ ಸಭೆ

ಮೈಸೂರು, ಸೆ. 12– ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಸೈಯದ್ ಶಾಬುದ್ದೀನ್ ಅಧ್ಯಕ್ಷತೆಯಲ್ಲಿ ಸೆ. 17ರಂದು ನಡೆಯಲಿರುವ ಸಮಾರಂಭದ ಪೂರ್ವಭಾವಿ ಸಭೆಯನ್ನು ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆಸಲಾಯಿತು.



ಅಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಇಂದಿರಾ ಗಾಂಧಿ ಭವನದಿಂದ ಅಬ್ದುಲ್ ಜಬ್ಬಾರ್ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಗುವುದು. ಅಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗ ಹೊಸ ಪದಾಧಿಕಾರಿಗಳು ಮತ್ತು 6 ಬ್ಲಾಕ್ ಮಟ್ಟದ ಅಧ್ಯಕ್ಷರುಗಳಿಗೆ ನೇಮಕಾತಿ ಪತ್ರಗಳನ್ನು ಅಬ್ದುಲ್ ಜಬ್ಬಾರ್ ವಿತರಿಸಲಿದ್ದಾರೆ. ಸಮಾರಂಭದಲ್ಲಿ ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಂಸದ ಆರ್.ಧ್ರುವನಾರಾಯಣ್, ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ವಾಸು, ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಮತ್ತು ಪದಾಧಿಕಾರಿಗಳು, ಕೆಪಿಸಿಸಿ ಪದಾಧಿಕಾರಿಗಳು, ಮುಂಚೂಣಿ ಘಟಕಗಳು, ಮಹಿಳಾ ಕಾಂಗ್ರೆಸ್ ಕಮಿಟಿ ಪದಾಧಿಕಾರಿಗಳು, ಮಾಜಿ ಮೇಯರ್, ಮಾಜಿ ಉಪಮೇಯರ್, ಕಾಂಗ್ರೆಸ್‌ನ ನಗರಪಾಲಿಕಾ ಸದಸ್ಯರು, ಮಾಜಿ ಕಾರ್ಪೊರೇಟರ್‌ಗಳು, ಮಾಜಿ ಸಂಘ ಸಂಸ್ಥೆಗಳ ಅಧ್ಯಕ್ಷರು, ಹಿರಿಯ ಕಾಂಗ್ರೆಸ್ ಮುಖಂಡರು ಇದರಲ್ಲಿ ಭಾಗವಹಿಸಲಿದ್ದಾರೆ.

ಸಭೆಯಲ್ಲಿ ಕಾಂಗ್ರೆಸ್ ಅಲ್ಪಸಂಖ್ಯಾತ ವಿಭಾಗದ ಹೊಸ ಮುಖಂಡರು ಮತ್ತು ಹಿರಿಯ ಮುಖಂಡರು ಹಾಗೂ ಕಲೀಮ್ ಉಲ್ಲಾ ಖಾನ್, ಶ್ರೀಮತಿ ಫಾತೀಮಾ, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಸೈಯದ್ ಆರಿಫ್ ಶಾಬರ್ ಖಾನ್, ಅನ್ಸಾರ್ ಪಾಷ, ಅಫ್ರೋಜ್ ಮತ್ತು ನರಸಿಂಹರಾಜ, ಚಾಮರಾಜ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹೆಚ್ಚಿನ ಸಂಖ್ಯೆಯ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು.

ಅರ್ಜಿ ಆಹ್ವಾನ

ಮೈಸೂರು, ಸೆ.12– ಜಿಲ್ಲಾ ಪಂಚಾಯತ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2022–23ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಅಲ್ಪಸಂಖ್ಯಾತ (ಮುಸ್ಲಿಮರು, ಕ್ರೈಸ್ತರು, ಜೈನರು, ಸಿಖ್ಖರು, ಬೌದ್ಧರು ಮತ್ತು ಪಾರ್ಸಿಗಳು) ಅಭ್ಯರ್ಥಿಗಳಿಂದ ಯು.ಪಿ.ಎಸ್.ಸಿ/ಕೆ.ಎ.ಎಸ್/ಗ್ರೂಪ್–ಸಿ/ಬ್ಯಾಂಕಿಂಗ್/ಎಸ್.ಎಸ್.ಸಿ/ ಆರ್.ಆರ್.ಬಿ ಮತ್ತು ನ್ಯಾಯಾಂಗ ಸೇವಾ ಪರೀಕ್ಷೆಗಳ ಪೂರ್ವಭಾವಿ ತರಬೇತಿಗೆ ಆಯ್ಕೆ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಆನ್–ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ. 5,00,000 ರೂ. ಒಳಗಿರಬೇಕು. ಅಭ್ಯರ್ಥಿಗಳು www.sw.kar.nic.in ವೆಬ್‌ಸೈಟ್ ಮೂಲಕ ಸೆ.20ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಾಲಯದ ಮೇಲ್ಛಾವಣಿ ಶಿಥಿಲ

ದುರಸ್ತಿಗೆ ಆಗ್ರಹಿಸಿ ವಿದ್ಯಾರ್ಥಿಗಳ ದಿಢೀರ್ ಪ್ರತಿಭಟನೆ

ಕುಡಿಯುವ ನೀರು ಸೇರಿದಂತೆ ಸಮರ್ಪಕ ಮೂಲ ಸೌಲಭ್ಯಕ್ಕೂ ಆಗ್ರಹ





ಮೈಸೂರು,ಸೆ.12(ಪಿಎಂ)– ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಾಲಯದ ಮೇಲ್ಛಾವಣಿ ಶಿಥಿಲಗೊಂಡು ಗಾರೆ ಉದುರುತ್ತಿದ್ದರೂ ದುರಸ್ತಿಗೆ ಕ್ರಮ ವಹಿಸಿಲ್ಲ ಹಾಗೂ ಕುಡಿಯುವ ನೀರು ಸೇರಿದಂತೆ ಸಮರ್ಪಕ ಮೂಲ ಸೌಲಭ್ಯಗಳನ್ನು ಸಂಸ್ಥೆಯಲ್ಲಿ ಕಲ್ಪಿಸಿಲ್ಲ ಎಂದು ಆರೋಪಿಸಿ ಸಂಸ್ಥೆ ವಿದ್ಯಾರ್ಥಿಗಳು ಸೋಮವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಸಂಸ್ಥೆ ಮುಖ್ಯದ್ವಾರದ ಎದುರು ಜಮಾಯಿಸಿದ ವಿದ್ಯಾರ್ಥಿಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರತಿಷ್ಠಿತವಾದುದು. ಇಲ್ಲಿ ಸಮರ್ಪಕ ಮೂಲ ಸೌಲಭ್ಯ ಒದಗಿಸಿಲ್ಲ. ಗ್ರಂಥಾಲಯದ ಮೇಲ್ಛಾವಣಿಯ ಗಾರೆ ಉದುರುತ್ತಿದ್ದು, ಕಾಂಕ್ರೀಟ್ ಕಿತ್ತು ಬಂದು, ಒಳಗಿನ ಕಬ್ಬಿಣದ ಸಲಾಕೆಗಳು ಕಾಣುವಂತಾಗಿದೆ. ಇಷ್ಟು ಮಾತ್ರವಲ್ಲದೆ, ಮಳೆ ಬಂದಾಗ ಸೋರುವಂತಾಗಿದೆ. ಇಂತಹ ಅವ್ಯವಸ್ಥೆ ನಡುವೆ ಗ್ರಂಥಾಲಯದಲ್ಲಿ ಅಧ್ಯಯನ ಮಾಡುವ ದುಸ್ಥಿತಿ ಬಂದಿದೆ. ಈ ಬಗ್ಗೆ ಸಂಬಂಧಿಸಿದವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ. ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಕುಡಿಯುವ ನೀರು ತರುವುದನ್ನು ಮರೆತರೆ ಬಾಯಾರಿಕೆಯಂತೆ ಬಳಲುವಂತಾಗಿದೆ. ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇದೆಯಾದರೂ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ಇಲ್ಲ. ಇದರಿಂದ ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಜೊತೆಗೆ ಶೌಚಾಲಯಗಳ ಸ್ವಚ್ಛತೆ ಕಾಯ್ದುಕೊಂಡಿಲ್ಲ ಎಂದು ದೂರಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ವಿವಿ ಆಡಳಿತಾಂಗ ಕುಲಸಚಿವ ಪ್ರೊ.ಆರ್.ಶಿವಪ್ಪ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಿದರು. ಸಮಸ್ಯೆಗಳ ಪರಿಹಾರಕ್ಕೆ ತುರ್ತು ಕ್ರಮ ಕೈಗೊಳ್ಳುವ ಅವರ ಭರವಸೆ ಮೇರೆಗೆ ವಿದ್ಯಾರ್ಥಿಗಳು ಪ್ರತಿಭಟನೆ ಕೈಬಿಟ್ಟರು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಂಸ್ಥೆಯ ಸಂಶೋಧನಾ ವಿದ್ಯಾರ್ಥಿ ಕಲ್ಲಹಳ್ಳಿ ಕುಮಾರ್, ಸ್ಥಳಕ್ಕೆ ಭೇಟಿ ನೀಡಿದ ಪ್ರೊ.ಆರ್.ಶಿವಪ್ಪ, ಐದಾರು ಕ್ಯಾನ್ ನೀರು ತರಿಸಿ ಕೊಡುವ ಮೂಲಕ ತಾತ್ಕಾಲಿಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದಾರೆ. ಅಲ್ಲದೆ, ಕೊಠಡಿ ಮೇಲ್ಛಾವಣಿ ದುರಸ್ತಿ ಸಂಬಂಧ ತುರ್ತಾಗಿ ಕ್ರಮ ವಹಿಸಲು ವಿವಿಯ ಇಂಜಿನಿಯರಿಂಗ್ ವಿಭಾಗಕ್ಕೆ ನಿರ್ದೇಶನ ನೀಡಿದರು. ಅಲ್ಲದೆ, ಸಂಸ್ಥೆಯ ಸ್ವಚ್ಛತಾ ಕಾರ್ಯಕ್ಕೆ ಹೆಚ್ಚಿನ ಸ್ವಚ್ಛತಾ ಸಿಬ್ಬಂದಿ ನಿಯೋಜಿಸಲೂ ಸೂಚನೆ ನೀಡಿದರು. ಹೀಗಾಗಿ ಪ್ರತಿಭಟನೆ ಕೈಬಿಡಲಾಯಿತು ಎಂದು ತಿಳಿಸಿದರು.

ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ವಿದ್ಯಾರ್ಥಿ ಮುಖಂಡರಾದ ಪ್ರದೀಪ್, ರಂಜಿತಾ, ಪೂಜಿತಾ, ಶಿವಕುಮಾರ್, ಮಾರುತಿ, ಅರುಣ್ ಸೇರಿದಂತೆ ಸಂಸ್ಥೆ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಎಡಗೈ, ಬಲಗೈ ಒಂದಾದರೆ ಎಲ್ಲರೂ ನಮ್ ಹಿಂಬಾಲಿಸ್ತಾರೆ...!

ಚಿಂತಕ, ಸಾಹಿತಿ ಪ್ರೊ.ಹೆಚ್.ಗೋವಿಂದಯ್ಯ ಹಿತನುಡಿ



ತಿ.ನರಸೀಪುರ, ಸೆ.12– ಬಲಗೈ, ಎಡಗೈ ಸಮುದಾಯಗಳು ಒಂದಾದರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಬ್ರಾಹ್ಮಣರು ಕೂಡ ನಮ್ಮನ್ನು ಬೆಂಬಲಿಸಿ, ಹಿಂಬಾಲಿಸುವರು. ಈ ಹಿನ್ನೆಲೆಯಲ್ಲಿ ದಲಿತ ಸಮುದಾಯಗಳು ಸಂಘಟಿತರಾಗಬೇಕು ಎಂದು ಚಿಂತಕ, ಸಾಹಿತಿ ಪ್ರೊ.ಹೆಚ್. ಗೋವಿಂದಯ್ಯ ತಿಳಿಸಿದರು.

ತಾಲೂಕಿನ ವ್ಯಾಸರಾಜಪುರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ್ ರಾಂ ಹವ್ಯಾಸಿ ಯುವಕರ ಸಂಘ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಲಿತ ಸಮುದಾಯಗಳಲ್ಲಿ ಒಗ್ಗಟ್ಟು ಇಲ್ಲದಿರುವುದು. ರಾಜಕೀಯವಾಗಿ ಸಂಘಟನೆಯಾಗದಿರುವುದು ಹಾಗೂ ದಸಂಸ ಚಳವಳಿಯಲ್ಲಿ ವಿಘಟನೆ ಆದ ಪರಿಣಾಮ ಸ್ವಾತಂತ್ರ್ಯ ಬಂದು ಏಳೂವರೆ ದಶಕವಾದರೂ ದಲಿತರು ಗುಲಾಮ ಗಿರಿಯಿಂದ ಮುಕ್ತಿ ಹೊಂದಿಲ್ಲ. ಹಿಂದೂ ಧರ್ಮ ತ್ಯಜಿಸಿ ಬೌದ್ಧರಾದ ಅಂಬೇಡ್ಕರ್ ಹಾಗೂ ಹಿಂದೂ ಧರ್ಮವನ್ನೇ ನಮ್ಮದು ಎಂದ ಬಾಬೂಜಿ ಅವರ ನಡುವೆ ತಾತ್ವಿಕ ಭಿನ್ನಾಭಿಪ್ರಾಯವಿತ್ತು. ದೇಶದ ಪ್ರತಿಯೊಂದು ದಲಿತ ಕೇರಿಗಳಲ್ಲಿ ಅಂಬೇಡ್ಕರ್–ಬಾಬು ಜಗಜೀವನ್ ರಾಂ ಅವರನ್ನು ಸಮಚಿತ್ತ ಭಾವದಿಂದ ನೋಡುವಂತಾಗಬೇಕು. ಬಲಗೈ, ಎಡಗೈ ಒಂದಾದರೆ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಹಾಗೂ ಬ್ರಾಹ್ಮಣರು ಕೂಡ ನಮ್ಮನ್ನು ಬೆಂಬಲಿಸಿ, ಹಿಂಬಾಲಿಸುವರು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್, ಸಂವಿಧಾನದ ಮೂಲಕ ಶೋಷಿತರಿಗೆ ಬೆಳಕು ನೀಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರು ಹೋರಾಟದ ಕಿಚ್ಚಿಗೆ ಹೆಸರಾಗಿದ್ದರೆ, ಸುದೀರ್ಘ ರಾಜಕೀಯದುದ್ದಕ್ಕೂ ಸಂವಿಧಾನದ ಆಶಯಗಳ ಜಾರಿಗೆ ಶ್ರಮಿಸಿ, ದಲಿತರ ಅಭಿವೃದ್ಧಿಗೆ ದುಡಿದ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್ ರಾಂ ರಾಜಕಾರಣದಲ್ಲಿ ಕಾರ್ಯ ಕ್ಷಮತೆಯ ಪ್ರತೀಕವಾಗಿದ್ದಾರೆ ಎಂದು ಬಣ್ಣಿಸಿದರು. ಸಮಸ್ತ ದಲಿತ ಸಮುದಾಯಗಳು ಭೀಮರಾವ್ ಹಾಗೂ ಬಾಬೂಜಿ ಇಬ್ಬರನ್ನು 2 ಕಣ್ಣುಗಳಂತೆ ಕಾಣಬೇಕು. ಅಂಬೇಡ್ಕರ್ ಅವರು ದಲಿತರ ವಿಮೋಚನೆಗೆ ಶ್ರಮಿಸಿದರೆ, ಬಾಬು ಜಗಜೀವನ್ ರಾಂ ಅವರು ವಿಮೋಚನಾ ರಥವನ್ನು ಮುಂದಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಿದರು ಎಂದರು.

ಸಾವಿರಾರು ವರ್ಷಗಳಿಂದ ಸಾಮಾಜಿಕ ಅಸಮಾನತೆಯ ನೋವನ್ನೇ ಅನುಭವಿಸಿರುವ ದಲಿತ ಬಲಗೈ ಹಾಗೂ ಎಡಗೈ ಸಮುದಾಯಗಳು ರಾಜಕೀಯವಾಗಿ ಸಂಘಟಿತರಾಗುವ ಮೂಲಕ ಸ್ವಾತಂತ್ರ್ಯ ನಂತರ ನಡೆಯುತ್ತಿರುವ ಶೋಷಣೆ ತಡೆಗಟ್ಟಬೇಕು. ರಾಜಕೀಯ ಜಾಗೃತಿ ಮೈಗೂಡಿಸಿಕೊಂಡು ಅಧಿಕಾರ ಹಿಡಿಯಬೇಕು. ಸಾಮಾಜಿಕ ಹಾಗೂ ರಾಜಕೀಯವಾಗಿ ಅಭಿವೃದ್ಧಿ ಹೊಂದಬೇಕು ಎಂದರು.

ಕಾರ್ಯಕ್ರಮಕ್ಕೆ ತಡವಾಗಿ ಆಗಮಿಸಿದ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ರಾಷ್ಟ್ರ ಪ್ರಶಸ್ತಿ ವಿಜೇತ ಸಾವಯವ ಕೃಷಿಕ ಎಸ್.ಆರ್.ಶ್ರೀನಿವಾಸಮೂರ್ತಿ ಅವರನ್ನು ಸನ್ಮಾನಿಸಲಾಯಿತು. ತಾಪಂ ಮಾಜಿ ಸದಸ್ಯರಾದ ಶಿವಸ್ವಾಮಿ, ಟಿ.ರಂಗಸ್ವಾಮಿ, ಯಡತೊರೆ ನಿಂಗರಾಜು, ಸೋಸಲೆ ಗ್ರಾಪಂ ಉಪಾಧ್ಯಕ್ಷೆ ಹೇಮಾ, ನಿವೃತ್ತ ಬ್ಯಾಂಕ್ ಅಧಿಕಾರಿ ವಿ.ವೆಂಕಟೇಶ್, ಪುಸ್ತಕ ಪ್ರಾಧಿಕಾರದ ನಿಂಗರಾಜು ಚಿತ್ತಣ್ಣನವರ್, ಸೋಮನಾಥಪುರ ಗ್ರಾಪಂ ಉಪಾಧ್ಯಕ್ಷ ಸಿದ್ದಪ್ಪ, ವಕೀಲ ಎಂ.ಶಿವಪ್ರಸಾದ್, ವೈದ್ಯ ಡಾ.ಪ್ರದೀಪ್, ಗ್ರಾಪಂ ಸದಸ್ಯ ಸುಂದರ್, ಮಾಜಿ ಉಪಾಧ್ಯಕ್ಷ ಜೆ. ರಂಗಸ್ವಾಮಿ, ಮಾಜಿ ಸದಸ್ಯ ಸೋಮಣ್ಣ, ಪೊಲೀಸ್ ಇಲಾಖೆ ರಾಜೇಂದ್ರ, ಮುಖಂಡರಾದ ನಟರಾಜು, ಸುರೇಶ, ಸಿದ್ದರಾಜು, ಸಂಘದ ಅಧ್ಯಕ್ಷ ಸಂದೀಪ್ ಕುಮಾರ್, ಗೌರವಾಧ್ಯಕ್ಷ ಚೇತನ್ ಕುಮಾರ್, ಕಾನೂನು ಸಲಹೆಗಾರರಾದ ಬಿ.ಎಸ್.ರಂಗನಾಥ ಪ್ರಸಾದ್, ಪಿ. ಜ್ಞಾನೇಂದ್ರ ಉಪಾಧ್ಯಕ್ಷ ಎಂ.ಪ್ರಸಾದ್, ಕಾರ್ಯದರ್ಶಿ ದಯಾನಂದ್, ಸಹ ಕಾರ್ಯದರ್ಶಿ ಪ್ರಮೋದ್, ಖಜಾಂಚಿ ಸೋಮರಾಜ್, ಮಾಧ್ಯಮ ಸಲಹೆಗಾರ ಮಂಜುನಾಥ್ ಶಿವಸ್ವಾಮಿ, ಸಂಚಾಲಕರಾದ ಶೃಂಗಾರ್, ಕುಮಾರ್, ಎಂ.ರಂಗಸ್ವಾಮಿ, ಚನ್ನಕೇಶವಮೂರ್ತಿ, ರಜನಿಕಾಂತ್, ಆರ್.ರಂಗನಾಥ್, ಲಕ್ಷ್ಮಿಕಾಂತ್, ದಾಸು, ಹರೀಶ, ಬಸವರಾಜು, ರವಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

> ದಲಿತರಲ್ಲದೆ ಎಲ್ಲಾ ಸಮುದಾಯಗಳು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಹೊಂದಲು ಕಾಂಗ್ರೆಸ್ ಪಕ್ಷವನ್ನು ರಾಜಕೀಯವಾಗಿ ಬಲಗೊಳಿಸಬೇಕು. ಬಿಜೆಪಿ ಸರ್ಕಾರ ದಿನಬಳಕೆಯ ವಸ್ತುಗಳ ಬೆಲೆ ಏರಿಕೆ ಮಾಡಿದ್ದು, ಕಾರ್ಪೊರೇಟ್ ವಲಯಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದರಿಂದ ಬಡವರ ಬದುಕು ಕಷ್ಟಕರವಾಗಿದೆ. ಕಾಂಗ್ರೆಸ್‌ನಲ್ಲಿ ಎಲ್ಲಾ ಧರ್ಮ, ಜಾತಿಯ ಸಮುದಾಯಗಳಿಗೆ ಸಮಾನ ಅವಕಾಶ ಕಲ್ಪಿಸಲಾಗುತ್ತಿದೆ. ಆದ್ದರಿಂದ ಪಕ್ಷವನ್ನು ಬಲಗೊಳಿಸಬೇಕು.
> – ಎಂ.ಸುಧಾ ಮಹದೇವಯ್ಯ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ



ಮೂಗೂರಲ್ಲಿ ಶ್ರೀಶನೇಶ್ವರಸ್ವಾಮಿಯವರ 66ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಹೂವಿನ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.



ಇತ್ತೀಚೆಗೆ ನಿಧನರಾದ ಹೆಚ್.ಡಿ.ಕೋಟೆ ತಾಲೂಕಿನ ಬೋರೇದೇವರ ಮುಂಟಿ ಗ್ರಾಮದ ರೈತ ಚಂದ್ರನಾಯಕ ಅವರ ಮನೆಗೆ ಬಿಜೆಪಿ ಮುಖಂಡ ಡಾ.ಕೃಷ್ಣಸ್ವಾಮಿ ಭೇಟಿ ನೀಡಿ, ಮೃತರ ಪತ್ನಿ ಮಂಜುಳಾ ಹಾಗೂ ಕುಟುಂಬದವರಿಗೆ ಸಾಂತ್ವನ ಹೇಳಿ, ಧನಸಹಾಯ ಮಾಡಿದರು. ಈ ವೇಳೆ ಮುಖಂಡರಾದ ಮಾರುತಿ, ಕೆಂಪಣ್ಣ, ಹನುಮಂತನಾಯಕ, ಮಹೇಶ್ ನಾಯಕ, ಶಿವು, ವಿರಾಜ್ ನಾಯಕ, ಶ್ರೀರಾಮುಲು, ಶಿವಕುಮಾರ್, ಸೋಮಶೇಖರ್ ಇನ್ನಿತರರಿದ್ದರು.

ಚುಂಚನಕಟ್ಟೆ ಪೊಲೀಸ್ ಠಾಣೆಯಲ್ಲಿ ಜನಸಂಪರ್ಕ ಸಭೆ

ಅಪರಾಧ ಮುಕ್ತ ಸಮಾಜ ನಿರ್ಮಾಣಕ್ಕೆ ಸಹಕರಿಸಿ

ಸಾರ್ವಜನಿಕರಿಗೆ ಕೆ.ಆರ್.ನಗರ ಠಾಣೆ ಇನ್‌ಸ್ಪೆಕ್ಟರ್ ಎಂ.ಆರ್.ಲವ ಮನವಿ



ಚುಂಚನಕಟ್ಟೆ, ಸೆ.12– ಅಪರಾಧ ಮುಕ್ತ ಸಮಾಜ ನಿರ್ಮಾಣ ಮಾಡಲು ಸಾರ್ವಜನಿಕರು ಪೊಲೀಸರೊಂದಿಗೆ ಕೈಜೋಡಿಸಿ ಸಹಕಾರ ನೀಡಬೇಕು ಎಂದು ಕೆ.ಆರ್.ನಗರ ಠಾಣೆ ಇನ್‌ಸ್ಪೆಕ್ಟರ್ ಎಂ.ಆರ್.ಲವ ಮನವಿ ಮಾಡಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಪೊಲೀಸ್ ಠಾಣೆ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಅಕ್ರಮ ಚಟುವಟಿಕೆಗಳ ಬಗ್ಗೆ ನಮಗೆ ನಾಗರಿಕರು ಮುಕ್ತವಾಗಿ ದೂರು ನೀಡಬಹುದು ಎಂದರು. ಉಪಠಾಣೆ ವ್ಯಾಪ್ತಿಯಲ್ಲಿ ಹೆಚ್ಚಾಗಿ ಅಡಿಕೆ ಫಸಲು ಕಳ್ಳತನವಾಗುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬರುತ್ತಿದ್ದು, ಮುಂದೆ ಅದು ಪುನರಾವರ್ತನೆಯಾಗದಂತೆ ಇಲಾಖೆ ಕ್ರಮ ವಹಿಸಲಿದ್ದು ಮಾಲೀಕರು ಮುನ್ನೆಚ್ಚರಿಕೆ ವಹಿಸಬೇಕೆಂದರು.

ಅಕ್ರಮ ಚಟುವಟಿಕೆ ನಡೆಯುತ್ತಿರುವ ಬಗ್ಗೆ ಪೊಲೀಸರಿಗೆ ದೂರು ನೀಡುವವರ ಹೆಸರನ್ನು ಗುಪ್ತವಾಗಿಟ್ಟು ಕೂಡಲೇ ಕ್ರಮ ಕೈಗೊಳ್ಳುವ ಭರವಸೆ ನೀಡಿದ ಅವರು ಸಮಾಜ ವಿರೋಧಿ ಚಟುವಟಿಕೆ ನಡೆಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು. ಠಾಣೆ ವ್ಯಾಪ್ತಿಯ ಪ್ರತಿ ಗ್ರಾಮಗಳಲ್ಲಿಯೂ ಅಕ್ರಮ ಮದ್ಯ ಮಾರಾಟದ ಬಗ್ಗೆ ನಿರಂತರ ಮತ್ತು ಖಚಿತ ದೂರು ಬರುತ್ತಿದ್ದು, ಅನುಮಾನ ಬಂದ ಕಡೆ ಮತ್ತು ಮಾಹಿತಿ ನೀಡಿದ ಕೂಡಲೇ ದಾಳಿ ಮಾಡಿ ಕೇಸು ದಾಖಲಿಸಲಾಗುವುದು ಎಂದರು.

ಅಕ್ರಮ ಚಟುವಟಿಕೆ ತಡೆಯಲು ನಮಗೆ ನಾಗರಿಕರ ಸಹಕಾರ ಮತ್ತು ಸಮನ್ವಯತೆ ಅಗತ್ಯವಾಗಿದ್ದು ನೀವು ನೀಡುವ ಎಲ್ಲಾ ಸಲಹೆಯನ್ನು ಸ್ವೀಕರಿಸಿ ಕಾನೂನು ಕ್ರಮ ಕೈಗೊಳ್ಳುವ ಜೊತೆಗೆ ಅಗತ್ಯವಿರುವ ಎಲ್ಲಾ ರೀತಿಯ ಭದ್ರತೆ ನೀಡಲಾಗುತ್ತಿದೆ ಎಂದರು.

ಸಾರ್ವಜನಿಕರ ಸಲಹೆ ಮೇರೆಗೆ ಚುಂಚನಕಟ್ಟೆ ಉಪ ಪೊಲೀಸ್ ಠಾಣೆ ಕಟ್ಟಡ ದುರಸ್ತಿಗೆ ಕ್ರಮ ಕೈಗೊಳ್ಳುವ ಜೊತೆಗೆ ಇಲ್ಲಿಗೆ ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡಿ ಠಾಣೆಯ ವ್ಯಾಪ್ತಿಯಲ್ಲಿ ಪ್ರೌಢಶಾಲೆಗಳಲ್ಲಿ ಸಭೆ ನಡೆಸಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಕುಪ್ಪೆ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಹಳಿಯೂರು ಗ್ರಾಪಂ ಅಧ್ಯಕ್ಷ ಹೆಚ್.ಆರ್.ದಿನೇಶ್, ಹಳಿಯೂರು ಡೈರಿ ಅಧ್ಯಕ್ಷ ಹೆಚ್.ಎಸ್. ಜಗದೀಶ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಎಂ.ಎಸ್.ಹರಿಚಿದಂಬರ, ಮುಖಂಡರಾದ ಎಚ್.ಎಸ್.ರವಿ, ಲೋಕೇಶ್, ಡಿ.ಎಸ್.ಕುಮಾರ್, ಸಿದ್ದಲಿಂಗನಾಯಕ, ಧನುಷ್ ಮತ್ತಿತರರು ತಮ್ಮ ಅಹವಾಲುಗಳನ್ನು ಸಲ್ಲಿಸಿದರು. ಎಸ್‌ಐಗಳಾದ ಎಲ್.ಚಂದ್ರಹಾಸ್, ಸ್ವಾಮಿನಾಯಕ, ಎಎಸ್‌ಐ ವಸಂತಕುಮಾರ್, ಪೊಲೀಸ್ ಪೇದೆಗಳಾದ ಎ.ಎಸ್.ಪ್ರವೀಣ್, ಕೆ. ಎ.ದಯಾನಂದ, ಎಂ.ಕೆ.ಅನಿತ್ ಕುಮಾರ್, ಕೇಶವ ರಾಜೇಅರಸ್, ಇಮ್ದಾದ್ ಅಲಿ ಮತ್ತು ಠಾಣೆ ವ್ಯಾಪ್ತಿಯ ಹಲವು ನಾಗರಿಕರು ಉಪಸ್ಥಿತರಿದ್ದರು.

ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ವಹಿಸಿ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಸಲಹೆ



ಸರಗೂರು, ಸೆ.12– ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ಹೆಚ್ಚಾಗುತ್ತಿದ್ದು, ಅವುಗಳ ಕಡಿವಾಣಕ್ಕೆ ಗ್ರಾಮೀಣ ಜನತೆ ಜಾಗೃತರಾಗಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಸಲಹೆ ನೀಡಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಸರಗೂರು ವೃತ್ತದ ಪೊಲೀಸ್ ವೃತ್ತ ನಿರೀಕ್ಷಕರ ನೂತನ ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಜನತೆಗೆ ಓಟಿಪಿ ಕೇಳುವುದು. ಬ್ಯಾಂಕ್‌ಗಳಲ್ಲಿ ವಯಸ್ಕರು ಹಣ ಪಡೆಯುವಾಗ ಮಧ್ಯವರ್ತಿಗಳಿಂದ ಮೋಸ, ಕೆಲಸ ಕೊಡಿಸುವ ಭರವಸೆ ನೀಡಿ ಮೋಸ ಸೇರಿದಂತೆ ಹತ್ತು–ಹಲವು ಮೋಸ, ವಂಚನೆ ಪ್ರಕರಣಗಳಿಂದ ಮುಗ್ಧ ಜನರು ಬಲಿಯಾಗುತ್ತಿದ್ದಾರೆ. ಇಂಥ ಸೈಬರ್ ಅಪರಾಧಗಳ ಬಗ್ಗೆ ಜನರ ಎಚ್ಚರಿಕೆ ವಹಿಸಬೇಕು. ಯಾರೇ ಆಗಲೀ ಬ್ಯಾಂಕ್ ವಿಚಾರ, ಓಟಿಪಿಗೆ ಸಂಬಂಧಿಸಿದ ವಿಷಯಗಳ ಕೇಳಿದರೆ ಹೇಳಬಾರದು ಎಂದರು.

ರಸ್ತೆ ಸುರಕ್ಷತೆಗೆ ಕ್ರಮವಹಿಸಿ: ಸಾರ್ವಜನಿಕರು ದ್ವಿಚಕ್ರ, ನಾಲ್ಕು ಚಕ್ರದ ವಾಹನಗಳಲ್ಲಿ ಸಂಚರಿಸುವಾಗ ಎಚ್ಚರಿಕೆ ವಹಿಸಿ ಚಾಲನೆ ಮಾಡಬೇಕು. ತಮ್ಮ ವಾಹನಗಳಿಗೆ ವಿಮೆ ಮಾಡಿಸಬೇಕು. ಲೈಸೆನ್ಸ್ ಮಾಡಿಸಬೇಕು. ಅವಧಿ ಮುಗಿದಿದ್ದರೆ ಕಡ್ಡಾಯವಾಗಿ ನವೀಕರಣ ಮಾಡಿಸಬೇಕು. ಹೆಲ್ಮೆಟ್ ಹಾಕಬೇಕು. ಸೀಟ್ ಬೆಲ್ಟ್ ಅನ್ನು ಚಾಚು ತಪ್ಪದೇ ಹಾಕಬೇಕು. ಇಲ್ಲವಾದಲ್ಲಿ ಅದಕ್ಕೆ ತಕ್ಕ ದಂಡ ತೆರಬೇಕಾಗುತ್ತದೆ ಎಂದರು.

ಸರಗೂರು ವೃತ್ತದ ಪೊಲೀಸ್ ವೃತ್ತ ನಿರೀಕ್ಷಕ ಎನ್.ಆನಂದ್ ಮಾತನಾಡಿ, ಸರಗೂರು ವೃತ್ತ ವ್ಯಾಪ್ತಿಗೆ 139 ಗ್ರಾಮಗಳು, 52 ಹಾಡಿಗಳು ಬರಲಿವೆ. ಈ ಪೈಕಿ ಸರಗೂರು ಪೊಲೀಸ್ ಠಾಣೆ, ಅಂತರಸಂತೆ ಪೊಲೀಸ್ ಠಾಣೆ, ಬೀಚನಹಳ್ಳಿ ಪೊಲೀಸ್ ಠಾಣೆಯೂ ಒಳಪಡಲಿದೆ. ನಮ್ಮದೊಂದಿಗೆ ಮೂವರು ಪೊಲೀಸ್ ಇನ್ಸ್‌ಪೆಕ್ಟರ್, 67 ಮಂದಿ ಪೊಲೀಸ್ ಸಿಬ್ಬಂದಿ ಇರುತ್ತಾರೆ. ಎಸ್‌ಪಿ ಆರ್. ಚೇತನ್ ನೇತೃತ್ವದಲ್ಲಿ ಉತ್ತಮವಾಗಿ ಕಾನೂನು ಸುವ್ಯವಸ್ಥೆ ಕಾಪಾಡುತ್ತೇವೆ ಎಂದರು.

ಈ ವೇಳೆ ಪೊಲೀಸ್ ಠಾಣೆ ಆವರಣದಲ್ಲಿ ಗಿಡ ನೆಡಲಾಯಿತು. ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಡಿವೈಎಸ್ಪಿ ಪಿ.ರವಿಪ್ರಸಾದ್, ಬಿಜೆಪಿ ಮುಖಂಡ ಎಂ.ಅಪ್ಪಣ್ಣ, ಜೆಡಿಎಸ್ ಮುಖಂಡ ಜಯಪ್ರಕಾಶ್, ಡಿವೈಎಸ್ಪಿ ಎನ್.ಆನಂದ್, ಎಸ್‌ಐಗಳಾದ ಶ್ರವಣ ದಾಸ್‌ರೆಡ್ಡಿ, ಜಯಪ್ರಕಾಶ್, ಸದಸ್ಯರಾದ ಎಸ್.ಎಲ್.ರಾಜಣ್ಣ, ಶ್ರೀನಿವಾಸ್, ಚಲುವಕೃಷ್ಣ, ಶಿವಕುಮಾರ್, ನೂರಾಳ ಸ್ವಾಮಿ, ನವೀನ್, ಮುಖ್ಯಾಧಿಕಾರಿ ಬಿ.ಜೆ. ಸತೀಶ್, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣ ಸ್ವಾಮಿ, ಕನ್ನಡ ಪ್ರಮೋದ್, ಡಾ.ಶರತ್ ಮುಖಂಡರಾದ ಶಂಭುಲಿಂಗನಾಯಕ, ಬ್ರಹ್ಮದೇವಯ್ಯ, ಪಿ.ರವಿ, ಸಿ.ಕೆ. ಗಿರೀಶ್, ಮಹೇಂದ್ರ, ಸಿದ್ದರಾಜು, ರಾಜಣ್ಣ, ನಾಗರಾಜರಾಮ್, ಕೃಷ್ಣ ಸೇರಿದಂತೆ ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ಸೆ.12– ಡಿಎಂಜಿ ಹಳ್ಳಿ ಕಿರು ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ಹಾಲನಹಳ್ಳಿ, ಕ್ಯಾತನಹಳ್ಳಿ, ಜಿ.ಬಿ.ಸರಗೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಸೆ.13ರಂದು ಮತ್ತು ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರ ವ್ಯಾಪ್ತಿಯ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಕೆ.ಬೆಳತ್ತೂರು, ಮನಗನಹಳ್ಳಿ, ರಾಜೇಗೌಡರಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವ ಕಾರಣ ಸೆ.14 ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ತಿ.ನರಸೀಪುರ ತಾಲೂಕಿನ ಯಾಚೇನಹಳ್ಳಿ ಗ್ರಾಮದ ಶ್ರೀರಾಮಕೃಷ್ಣ ಸೇವಾ ಕೇಂದ್ರದ ತಾಯಿ ಮಡಿಲು ವೃದ್ಧಾಶ್ರಮಕ್ಕೆ ಔಷಧಿಗಳು, ಬಟ್ಟೆ ಹಾಗೂ ದಿನಬಳಕೆ ವಸ್ತುಗಳನ್ನು ಉಚಿತವಾಗಿ ವಿತರಿಸಲಾಯಿತು. ಈ ವೇಳೆ ಕಾಂಗ್ರೆಸ್ ವೈದ್ಯಕೀಯ ವಿಭಾಗದ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಪ್ರದೀಪ್, ಬೀಡನಹಳ್ಳಿನಂದೀಶ್, ಎಸ್.ನಂದೀಶ್ ಸೇರಿದಂತೆ ವೃದ್ಧಾಶ್ರಮದವರು ಉಪಸ್ಥಿತರಿದ್ದರು.

ಕುಮಾರಸ್ವಾಮಿಗೆ ಪಿಎಚ್.ಡಿ ಪದವಿ



ಮೈಸೂರು, ಸೆ 12– ಡಾ. ಕೆ.ಎನ್. ಮೋಹನ ಅವರ ಮಾರ್ಗದರ್ಶನದಲ್ಲಿ ಎನ್. ಕುಮಾರಸ್ವಾಮಿ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಟಿ20 ವಿಶ್ವಕಪ್‌ಗೆ ಭಾರತ ತಂಡ ಪ್ರಕಟ

▸ ಅ.16ರಿಂದ ನ.13ರವರೆಗೆ ಪಂದ್ಯಾವಳಿ ▸ ಭಾರತಕ್ಕೆ ಪಾಕ್ ಮೊದಲ ಎದುರಾಳಿ ▸ ಆಸೀಸ್, ದಕ್ಷಿಣ ಆಫ್ರಿಕಾ ಸರಣಿಗೂ ತಂಡ ಪ್ರಕಟ



ಮುಂಬೈ, ಸೆ.12– ಮುಂದಿನ ತಿಂಗಳು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್‌ಗೆ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಅಲ್ಲದೆ ವಿಶ್ವಕಪ್‌ಗೂ ಮೊದಲು ನಡೆಯಲಿರುವ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಸರಣಿಗೂ ತಂಡದ ಆಯ್ಕೆ ಮಾಡಲಾಗಿದೆ.

ಐಸಿಸಿ ಟಿ20 ವಿಶ್ವಕಪ್‌ನಲ್ಲಿ ನಿರೀಕ್ಷೆಯಂತೆಯೇ ರೋಹಿತ್ ಶರ್ಮಾ ನಾಯಕರಾಗಿ ಹಾಗೂ ಕೆ.ಎಲ್.ರಾಹುಲ್ ಉಪನಾಯಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಇನ್ನುಳಿದಂತೆ ವಿರಾಟ್ ಕೊಹ್ಲಿ, ದೀಪಕ್ ಹೂಡಾ, ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್, ರವಿಚಂದ್ರನ್ ಅಶ್ವಿನ್, ಯುಜುವೇಂದ್ರ ಚಹಲ್, ಅಕ್ಷರ್ ಪಟೇಲ್, ಜಸ್ಪ್ರೀತ್ ಬುಮ್ರಾ, ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್ ಹಾಗೂ ಅರ್ಶದೀಪ್ ಸಿಂಗ್ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನು ತೀವ್ರ ಕುತೂಹಲ ಕೆರಳಿಸಿದ್ದ ವಿಕೆಟ್ ಕೀಪರ್‌ಗಳಾಗಿ ದಿನೇಶ್ ಕಾರ್ತಿಕ್ ಹಾಗೂ ರಿಷಬ್ ಪಂತ್ ಇಬ್ಬರೂ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನುಳಿದಂತೆ ಮೀಸಲು ಆಟಗಾರರಾಗಿ ಅನುಭವಿ ವೇಗಿ ಮೊಹಮ್ಮದ್ ಶಮಿ, ಶ್ರೇಯಸ್ ಅಯ್ಯರ್, ರವಿ ಬಿಷ್ಣೋಯಿ ಹಾಗೂ ದೀಪಕ್ ಚಹಾರ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಇದಕ್ಕೂ ಮುನ್ನಾ ನಡೆಯುವ ಆಸೀಸ್ ವಿರುದ್ಧದ ಟಿ20 ಸರಣಿ ಸೆ.20ರಿಂದ 25ರವರೆಗೆ ನಡೆಯಲಿದೆ. ಅಲ್ಲದೇ ದ.ಆಫ್ರಿಕಾ ವಿರುದ್ಧದ ಟಿ20 ಸರಣಿ ಸೆ.28ರಿಂದ ಅ.4 ರವರೆಗೆ ನಡೆಯಲಿದೆ. ಟಿ20 ವಿಶ್ವಕಪ್ ಪಂದ್ಯಾವಳಿ ಅ.16ರಿಂದ ನ.13ರವರೆಗೆ ನಡೆಯಲಿದೆ. ಐಸಿಸಿ ಟಿ20 ವಿಶ್ವಕಪ್‌ನಲ್ಲಿ ಭಾರತ ಮೊದಲ ಪಂದ್ಯವನ್ನು ಪಾಕಿಸ್ತಾನ ವಿರುದ್ಧ ಅ.23ರಂದು ಆಡಲಿದೆ.

ಆಸ್ಟ್ರೇಲಿಯಾ ಟಿ20 ಸರಣಿಗೆ ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಕೆಎಲ್ ರಾಹುಲ್ (ಉಪನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ರಿಷಭ್ ಪಂತ್, ದಿನೇಶ್ ಕಾರ್ತಿಕ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಆರ್. ಅಶ್ವಿನ್, ಯಜುವೇಂದ್ರ ಚಹಾಲ್, ಅಕ್ಷರ್ ಪಟೇಲ್, ಭುವನೇಶ್ವರ್ ಕುಮಾರ್, ಮೊಹಮ್ಮದ್, ಶಮಿ, ಹರ್ಷಲ್ ಪಟೇಲ್, ದೀಪಕ್ ಚಾಹರ್, ಜಸ್ಪ್ರೀತ್ ಬುಮ್ರಾ.

ದಕ್ಷಿಣ ಆಫ್ರಿಕಾ ಟಿ20 ಸರಣಿಗೆ ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಕೆಎಲ್ ರಾಹುಲ್ (ಉಪನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ರಿಷಭ್ ಪಂತ್, ದಿನೇಶ್ ಕಾರ್ತಿಕ್ (ವಿಕೆಟ್–ಕೀಪರ್), ಆರ್. ಅಶ್ವಿನ್, ಯುಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಅರ್ಶದೀಪ್ ಸಿಂಗ್, ಮೊಹಮ್ಮದ್ ಶಮಿ, ಹರ್ಷಲ್ ಪಟೇಲ್, ದೀಪಕ್ ಚಾಹರ್, ಜಸ್ಪ್ರೀತ್ ಬುಮ್ರಾ.



ಐಸಿಸಿ ಟಿ20 ವಿಶ್ವಕಪ್‌ಗೆ ಭಾರತ ತಂಡ
ರೋಹಿತ್ ಶರ್ಮಾ (ನಾಯಕ), ಕೆ.ಎಲ್.ರಾಹುಲ್ (ಉಪನಾಯಕ), ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ದೀಪಕ್ ಹೂಡಾ, ರಿಷಭ್ ಪಂತ್, ದಿನೇಶ್ ಕಾರ್ತಿಕ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಆರ್.ಅಶ್ವಿನ್, ಯುಜುವೇಂದ್ರ ಚಹಲ್, ಅಕ್ಷರ್ ಪಟೇಲ್, ಜಸ್ಪ್ರೀತ್ ಬುಮ್ರಾ, ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್, ಅರ್ಶ್‌ದೀಪ್ ಸಿಂಗ್. ಮೀಸಲು ಆಟಗಾರರು: ಮೊಹಮ್ಮದ್ ಶಮಿ, ಶ್ರೇಯಸ್ ಅಯ್ಯರ್, ರವಿ ಬಿಷ್ಣೋಯಿ, ದೀಪಕ್ ಚಹರ್.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಕ್ಯಾಪ್ಟನ್ (ತ): ಬೆ10.40ಕ್ಕೆ, ಲಕ್ಕಿಮ್ಯಾನ್ (ಕ): ಮ.1.05ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 9 ಸುಳ್ಳು ಕಥೆಗಳು (ಕ): ರಾ.10.30ಕ್ಕೆ, ತಿರುಚಿಟ್ರಂಬಲಂ (ತ): ಮ.1.20ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.4ಕ್ಕೆ, ಗಾಳಿಪಟ 2(ಕ): ರಾ.7.05ಕ್ಕೆ, ಒಟ್ಟು (ಮ): ರಾ.9.55ಕ್ಕೆ.
- ಸ್ಕ್ರೀನ್ 3 ಲಕ್ಕಿಮ್ಯಾನ್ (ಕ): ಬೆ.10.45ಕ್ಕೆ, ಕ್ಯಾಪ್ಟನ್ (ತ): ಮ.1.45ಕ್ಕೆ, ಅಬತಾರ ಮಾತೆರ್ನಾಳ (ತು): ಸಂ.4.15ಕ್ಕೆ, ಒರು ತೆಕ್ಕನ್ ತಾಲು ಕೇಸ್ (ಮ): ರಾ.7ಕ್ಕೆ, ಪಥೋಪಥಂ ನೋಟಂಡು (ಮ): ರಾ.9.55ಕ್ಕೆ.
- ಸ್ಕ್ರೀನ್ 4 ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.9.55ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

- ಸ್ಕ್ರೀನ್ 1 ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
- ಸ್ಕ್ರೀನ್ 2 ಒಕೇ ಒಕ ಜೀವಿತಂ (ತೆ): ಬೆ.10ಕ್ಕೆ, ಕ್ಯಾಪ್ಟನ್ (ಇಂ): ಮ.1.10ಕ್ಕೆ, ಲಕ್ಕಿ ಮ್ಯಾನ್ (ಕ): ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 3 ಲವ್ 360 (ಕ): ಬೆ.10.50ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.4.40ಕ್ಕೆ, ಕ್ಯಾಪ್ಟನ್ (ತ): ರಾ.7.50ಕ್ಕೆ, ಪಥೋಪಥಂ ನೋಟಂಡು (ಮ): ರಾ.10.20ಕ್ಕೆ.
- ಸ್ಕ್ರೀನ್ 4 ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.30ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಮ.2ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1 ಲೈಗರ್ (ತೆ): ಬೆ.10.45ಕ್ಕೆ, ಲವ್ 360 (ಕ): ಮ.1.30ಕ್ಕೆ, ಲೈಗರ್ (ಕ): ಸಂ.4.05ಕ್ಕೆ, ಧಮಾಕ (ಕ): ಸಂ.6.50ಕ್ಕೆ.
- ಸ್ಕ್ರೀನ್ 2 ಗಾಳಿಪಟ 2(ಕ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ, ರಂಗ ರಂಗ ವೈಭವಂಗ (ತೆ): ಸಂ.4.45ಕ್ಕೆ, ಕೋಬ್ರಾ (ತ): ರಾ.9.15ಕ್ಕೆ.
- ಸ್ಕ್ರೀನ್ 3 ಕೋಬ್ರಾ (ತ): ಮ.1.30ಕ್ಕೆ, ಸಂ.6.50ಕ್ಕೆ.
- ಸ್ಕ್ರೀನ್ 4 ರಂಗ ರಂಗ ವೈಭವಂಗ (ತೆ): ಬೆ10.30ಕ್ಕೆ, ಗಾಳಿಪಟ–2 (ಕ): ಮ1.20ಕ್ಕೆ, ರಾ.7.15ಕ್ಕೆ, ಕೋಬ್ರಾ (ತ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,


ಲಕ್ಕಿಮ್ಯಾನ್ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಬ್ರಹ್ಮಾಸ್ತ್ರ (ಕ): ಮ.2.55ಕ್ಕೆ, ಗಾಳಿಪಟ–2 (ಕ): ಮ.3.25ಕ್ಕೆ, ನಾನ್ ರೌಡಿ (ಕ): ಮ.11.45ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.8.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಮ.3.30ಕ್ಕೆ, ಸಂ.6ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಬ್ರಹ್ಮಾಸ್ತ್ರ (2ಡಿ) (ಹಿಂ): ಬೆ.11.30ಕ್ಕೆ, ಮ.3ಕ್ಕೆ, ರಾ.9.15ಕ್ಕೆ, ಕ್ಯಾಪ್ಟನ್ (ತ): ಮ.12.10ಕ್ಕೆ, ಸಂ.6.35ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.6.30ಕ್ಕೆ, ರಾ.9.45ಕ್ಕೆ, ಪಥೋಪಥಂ ನೋಟಂಡು (ಮ): ಸಂ.6.25ಕ್ಕೆ, ಒರು ತೆಕ್ಕ (ಮ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಬ್ರಹ್ಮಾಸ್ತ್ರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಾಜ್ ಮಹಲ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಓಕೇ ಓಕ ಜೀವಿತಂ (ತೆ)	4 ಪ್ರದರ್ಶನಗಳು
ಸಂಗಂ	
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಲಿಡೋ	
ಕ್ಯಾಪ್ಟನ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಸಿರಿಧಾನ್ಯ ಆಹಾರ ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಿ

ಸಿರಿಧಾನ್ಯ ವಿಭಾಗದ ಮೇಲ್ವಿಚಾರಕ ಶಶಿಕುಮಾರ್



ಹಿರೀಕ್ಯಾತನಹಳ್ಳಿ, ಸೆ.12– ಹುಣಸೂರು ತಾಲೂಕಿನ ಮರೂರು ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ವತಿಯಿಂದ ಸಿರಿಧಾನ್ಯ ಮೇಳ ನಡೆಯಿತು.

ಮೇಳವನ್ನು ಸಿರಿಧಾನ್ಯ ವಿಭಾಗದ ಮೇಲ್ವಿಚಾರಕ ಶಶಿಕುಮಾರ್ ಉದ್ಘಾಟಿಸಿ ಮಾತನಾಡಿ, ಹಿಂದಿನ ಕಾಲದಲ್ಲಿ ಹಿರಿಯರು ಸಿರಿಧಾನ್ಯಗಳನ್ನು ಹೆಚ್ಚಾಗಿ ಸೇವಿಸುತ್ತಿದ್ದರಿಂದ ನೂರಾರು ಕಾಲ ಉತ್ತಮ ಆರೋಗ್ಯದೊಂದಿಗೆ ಬದುಕುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಪ್ರೋಟೀನ್ ಇಲ್ಲದ ಆಹಾರ ಪದಾರ್ಥಗಳನ್ನು ಬಳಸುತ್ತಿರುವುದರಿಂದ ಅನಾರೋಗ್ಯಕ್ಕೆ ತುತ್ತಾಗಿ ರೋಗ ಹೆಚ್ಚಾಗುವ ಜೊತೆಗೆ ನಮ್ಮ ಆಯುಸ್ಸು ಕಡಿಮೆಯಾಗುತ್ತಿದೆ ಎಂದರು.

ಸಿರಿಧಾನ್ಯಗಳ ಬಳಕೆಯಿಂದ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಇನ್ನಿತರ ಸಮಸ್ಯೆಗಳನ್ನು ನಿಯಂತ್ರಿಸಬಹುದು. ಜೊತೆಗೆ ಆರೋಗ್ಯವೃದ್ಧಿ, ಮೂಳೆ ಸವೆತ ತಡೆಯುತ್ತದೆ. ಕೊಬ್ಬಿನ ಅಂಶ ಕಡಿಮೆ ಮಾಡಿ ಸೌಂದರ್ಯವರ್ಧಕಕ್ಕೂ ಅನುಕೂಲವಾಗುವ ಜೊತೆಗೆ ನಾರಿನ ಅಂಶ ಹೆಚ್ಚಾಗುತ್ತದೆ. ಆಹಾರ ಸೇವನೆ ನಂತರ ಹೆಚ್ಚು ನೀರು ಕುಡಿಯುವುದರಿಂದ ಸೇವಿಸಿದ ಆಹಾರ ವಿಷವಾಗುವುದನ್ನು ತಡೆಯುತ್ತದೆ. ಹೆಚ್ಚು ಮೈದಾಹಿಟ್ಟು ಬಳಕೆಯಿಂದ ಗರ್ಭಿಣಿ ಮಹಿಳೆಯರಲ್ಲಿ ಥೈರಾಯ್ಡ್ ರೋಗದ ಲಕ್ಷಣಗಳು ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚು. ಆದ್ದರಿಂದ ಸಿರಿಧಾನ್ಯಗಳ ಆಹಾರಗಳನ್ನು ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಿ ಎಂದರು.

ಈ ವೇಳೆ ಹಲವು ಸಿರಿಧಾನ್ಯಗಳನ್ನು ಪ್ರದರ್ಶನ ಮಾಡುವುದರ ಜೊತೆಗೆ ಹಲವು ಪದಾರ್ಥಗಳನ್ನು ತಯಾರಿಸಿ ವಿವಿಧ ಖಾದ್ಯಗಳನ್ನು ಮಾಡಿ ಜನರಿಗೆ ವಿತರಿಸಲಾಯಿತು. ಮೇಳದಲ್ಲಿ ಒಕ್ಕೂಟದ ಅಧ್ಯಕ್ಷ ಶಿವರಾಜ್, ವ್ಯಾಪ್ತಿಯ ಮೇಲ್ವಿಚಾರಕರಾದ ಪಾರ್ವತಿ, ಜ್ಞಾನ ವಿಕಾಸ ಕೇಂದ್ರದ ಮೇಲ್ವಿಚಾರಕರಾದ ಲಕ್ಷ್ಮೀ, ಸಂಘದ ಸೇವಾ ಪ್ರತಿನಿಧಿ ರೇಣುಕಾ, ಮರೂರು ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ವಿಜಯಕುಮಾರ್ ಹಾಗೂ ಸಂಘದ ಮಹಿಳಾ ಸದಸ್ಯರು ಹಾಜರಿದ್ದರು.

ಬೆಂಗಳೂರಲ್ಲಿ ಟ್ರಾಫಿಕ್ ಜಾಮ್: 3 ಕಿ.ಮೀ. ಓಡಿ ಆಸ್ಪತ್ರೆ ತಲುಪಿ ಸರ್ಜರಿ ನಡೆಸಿದ ವೈದ್ಯ



ಬೆಂಗಳೂರು: ರಾಜಧಾನಿಯಲ್ಲಿನ ಸಂಚಾರ ದಟ್ಟಣೆಯಿಂದ ವೈದ್ಯರೊಬ್ಬರು ಬೆಂಗಳೂರಿನ ಟ್ರಾಫಿಕ್ ಕಾರಣಕ್ಕೆ ರಸ್ತೆಯಲ್ಲಿ 3 ಕಿ.ಮೀ. ಓಡಿ ಆಸ್ಪತ್ರೆ ತಲುಪಿ, ತುರ್ತು ಶಸ್ತ್ರಚಿಕಿತ್ಸೆ ನೆರವೇರಿಸಿದ್ದಾರೆ.

ಸರ್ಜಾಪುರದ ಮಣಿಪಾಲ್ ಆಸ್ಪತ್ರೆಯ ಗ್ಯಾಸ್ಟ್ರೊಎಂಟೆರಾಲಜಿ ಸರ್ಜನ್ ಡಾ.ಗೋವಿಂದ್ ನಂದಕುಮಾರ್ ಈ ಸಾಹಸ ಮಾಡಿದ್ದಾರೆ. ಸರ್ಜರಿಗೆ ಸಮಯ ನಿಗದಿಯಾಗಿದ್ದು, ಆಸ್ಪತ್ರೆಗೆ ತೆರಳುತ್ತಿದ್ದ ಇವರು ಮಾರ್ಗಮಧ್ಯೆ ಟ್ರಾಫಿಕ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದು, ಅಲ್ಲಿಂದ ಆಸ್ಪತ್ರೆಯವರೆಗೆ 3 ಕಿ.ಮೀ. ಓಡಿಹೋಗಿ ಸರ್ಜರಿ ನಡೆಸಿದ್ದಾರೆ.

ಇವರು ಸರ್ಜಾಪುರದ ಮಣಿಪಾಲ್ ಆಸ್ಪತ್ರೆಯಲ್ಲಿ ಆ.30ರಂದು ಮಧ್ಯವಯಸ್ಕ ಮಹಿಳೆಯೊಬ್ಬರಿಗೆ ತುರ್ತು ಲ್ಯಾಪರೊಸ್ಕೋಪಿಕ್ ಗಾಲ್‌ಬ್ಲಾಡರ್ ಸರ್ಜರಿ ನಡೆಸುವುದು ನಿಗದಿಯಾಗಿತ್ತು. ಅದಕ್ಕೆಂದೇ ಸಾಕಷ್ಟು ಸಮಯ ಮುಂಚಿತವಾಗಿ ಮನೆಯಿಂದ ಹೊರಟ್ಟಿದ್ದ ಇವರು ಸರ್ಜಾಪುರ–ಮಾರತಹಳ್ಳಿ ಮಾರ್ಗದಲ್ಲಿ ಟ್ರಾಫಿಕ್‌ಗೆ ಸಿಲುಕಿಕೊಂಡಿದ್ದರು.

ತುರ್ತು ಸರ್ಜರಿ ಆಗಿದ್ದರಿಂದ ನಿಗದಿತ ಸಮಯಕ್ಕೆ ಹೋಗದಿದ್ದರೆ ಪರಿಸ್ಥಿತಿ ಬಿಗಡಾಯಿಸುವ ಸಾಧ್ಯತೆ ಇದ್ದಿದ್ದರಿಂದ ಎರಡನೇ ಯೋಚನೆ ಮಾಡದೆ ಕಾರ್ ಜವಾಬ್ದಾರಿ ಡ್ರೈವರ್‌ಗೆ ಒಪ್ಪಿಸಿ, ಅಲ್ಲಿಂದ 3 ಕಿ.ಮೀ. ದೂರದಲ್ಲಿದ್ದ ಆಸ್ಪತ್ರೆಗೆ ಓಡಿಕೊಂಡೇ ಹೋಗಿದ್ದಾರೆ. ನಂತರ ಮಹಿಳೆಗೆ ಸರ್ಜರಿ ನಡೆಸಲಾಗಿದ್ದು, ಅವರು ಗುಣಮುಖರಾಗಿ ನಿಗದಿತ ಸಮಯಕ್ಕೆ ಡಿಸ್‌ಚಾರ್ಜ್ ಆಗಿದ್ದಾರೆ. ಸದ್ಯ ಆರಾಮಾಗಿ ಇದ್ದಾರೆ ಎಂಬುದಾಗಿ ವೈದ್ಯರು ತಿಳಿಸಿದ್ದಾರೆ. ಇವರು ಓಡುತ್ತ ಆಸ್ಪತ್ರೆಗೆ ತಲುಪಿದ ದೃಶ್ಯಾವಳಿಯ ವಿಡಿಯೋ ತುಣುಕು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ.

ಹಿಂದಿ ದಿವಸ್ ಆಚರಣೆಗೆ ಮಾಜಿ ಸಿಎಂ ಕುಮಾರಸ್ವಾಮಿ ವಿರೋಧ

ಮುಖ್ಯಮಂತ್ರಿಗೆ ಪತ್ರ



ಬೆಂಗಳೂರು, ಸೆ.12– ಹಿಂದಿ ದಿವಸ್ (ಸೆ.14) ಆಚರಣೆ ಮಾಡದಂತೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಪತ್ರ ಬರೆದು ವಿರೋಧ ವ್ಯಕ್ತಪಡಿಸಿದ್ದಾರೆ.

ಭಾರತವು ನೂರಾರು ಭಾಷೆ ಹಾಗೂ ಉಪ ಭಾಷೆಗಳನ್ನು ಒಳಗೊಂಡಿದ್ದು, 560ಕ್ಕೂ ಹೆಚ್ಚು ಸಂಸ್ಥಾನಗಳು ಒಪ್ಪಿ ಸೇರಿದ ಮತ್ತು ಸಾಮಾಜಿಕ, ಸಾಂಸ್ಕೃತಿಕವಾಗಿ ಭಿನ್ನ ಆಚರಣೆಗಳನ್ನು ಹೊಂದಿರುವ ಒಂದು ಮಹಾನ್ ಒಕ್ಕೂಟವಾಗಿದೆ. ಇಂತಹ ನಾಡಿನಲ್ಲಿ ಕೇವಲ ಒಂದು ಭಾಷೆಯನ್ನು ಮಾತ್ರವೇ ಮೆರೆಸುವುದು ನಿಜಕ್ಕೂ ಜನತೆಗೆ ಎಸಗುವ ಪರಮ ಅನ್ಯಾಯವಾಗಿದೆ.

ಸೆಪ್ಟೆಂಬರ್ 14 ರಂದು ಭಾರತ ಒಕ್ಕೂಟ ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮವಾದ 'ಹಿಂದಿ ದಿವಸ'ವನ್ನು ಕರ್ನಾಟಕದಲ್ಲಿ ಒತ್ತಾಯಪೂರ್ವಕವಾಗಿ ಆಚರಿಸುವುದು ರಾಜ್ಯ ಸರ್ಕಾರ ಕನ್ನಡಿಗರಿಗೆ ಮಾಡುವ ಅನ್ಯಾಯವಾಗಿದೆ. ಕರ್ನಾಟಕ ಸರ್ಕಾರದ ವತಿಯಿಂದ ನಮ್ಮ ರಾಜ್ಯದ ಜನತೆಯ ತೆರಿಗೆ ಹಣದಲ್ಲಿ ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ ಹಿಂದಿ ದಿವಸ ಆಚರಣೆ ಮಾಡಬಾರದೆಂದು ಆಗ್ರಹಿಸಿದ್ದಾರೆ.

ಲೋಕಾಯುಕ್ತ ಅಬ್ಬರ: ಮೊದಲ ದಾಳಿಯಲ್ಲೇ ಬಿಬಿಎಂಪಿ ಜಂಟಿ ಆಯುಕ್ತರ ಬಂಧನ

ಬೆಂಗಳೂರು: ರಾಜ್ಯದಲ್ಲಿ ಇಂದಿನಿಂದ ಲೋಕಾಯುಕ್ತ ಅಬ್ಬರ ಶುರುವಾಗಿದೆ. ಮರುಸ್ಥಾಪನೆಗೊಂಡ ಬಳಿಕ ಲೋಕಾಯುಕ್ತ ಮೊದಲ ದಾಳಿ ನಡೆಸಿದ್ದು, ಪಶ್ಚಿಮ ವಿಭಾಗದ ಬಿಬಿಎಂಪಿ ಜಂಟಿ ಆಯುಕ್ತ ಶ್ರೀನಿವಾಸ್ ಜಾಗೂ ಪಿಎ ಉಮೇಶ್‌ನನ್ನು ಬಂಧಿಸಿದೆ.

ಡಿವೈಎಸ್‌ಪಿ ಮಂಜಯ್ಯ, ಶಂಕರ್ ನಾರಾಯಣ್, ಪ್ರಶಾಂತ್ ಕುಮಾರ್ ಠಾಕೂರ್, ಬೆಂಗಳೂರು ಲೋಕಾಯುಕ್ತ ಎಸ್‌ಪಿ ಶ್ರೀನಾಥ್ ಜೋಶಿ ನೇತೃತ್ವದ ಲೋಕಾಯುಕ್ತ ಟೀಂ ಮಲ್ಲೇಶ್ವರಂನಲ್ಲಿರುವ ಪಶ್ಚಿಮ ವಿಭಾಗ ಬಿಬಿಎಂಪಿ ಕಚೇರಿ ಮೇಲೆ ದಾಳಿ ನಡೆಸಿದ್ದು, ಬಿಬಿಎಂಪಿ ಜಂಟಿ ಆಯುಕ್ತ ಎಸ್.ಎಂ ಶ್ರೀನಿವಾಸ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಮಂಜುನಾಥ್ ಎಂಬುವರ ದೂರಿನ ಮೇರೆಗೆ ಖಾತೆ ಬದಲಾವಣೆ ವಿಚಾರದಲ್ಲಿ ಲಂಚ ಪಡೆಯುವ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ. 4 ಲಕ್ಷ ಹಣದ ಸಮೇತ ಶ್ರೀನಿವಾಸ್, ಪಿಎ ಉಮೇಶ್ ಬಂಧಿಸಿ, ಕಚೇರಿಯಲ್ಲೇ ವಿಚಾರಣೆ ನಡೆಸಿದೆ.

ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲು ಮಸೀದಿ ಸಮಿತಿ: ಗ್ಯಾನವಾಪಿ ಮಸೀದಿಯಲ್ಲಿ ಹಿಂದೂ ದೇವತೆಗಳ ಕುರುಹುಗಳಿದ್ದು, ಅಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಬೇಕೆಂಬ ಹಿಂದೂಗಳ ಅರ್ಜಿಯನ್ನು ಜಿಲ್ಲಾ ಕೋರ್ಟ್ ಪುರಸ್ಕರಿಸಿದ್ದು ಇದರಿಂದ ಹಿನ್ನಡೆಯಾಗಿರುವ ಹಿನ್ನೆಲೆಯಲ್ಲಿ ಮಸೀದಿ ಸಮಿತಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲು ತೀರ್ಮಾನಿಸಿದೆ. ಗ್ಯಾನವಾಪಿ ಮಸೀದಿಯನ್ನು ಪ್ರತಿನಿಧಿಸುತ್ತಿರುವ ಅಂಜುಮನ್ ಇಂತಜಾಮಿಯಾ ಸಮಿತಿ ಇದೀಗ ಜಿಲ್ಲಾ ಕೋರ್ಟ್ ಆದೇಶವನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್ ಮೆಟ್ಟಿಲೇರಲಿದೆ. ಹಿಂದೂಗಳ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿದ ಮಸೀದಿ ಪರ ವಾದ ಮಂಡಿಸಿದ ವಕೀಲರಿಗೆ ಹಿನ್ನಡೆಯುಂಟಾಗಿದೆ

ಅಯೋಧ್ಯೆಯ ರಾಮ ಮಂದಿರದ ಗರ್ಭಗುಡಿಗೆ
ಕರ್ನಾಟಕದ ಭಕ್ತರಿಂದ 'ಸ್ವರ್ಣ ಶಿಖರ'

ಉಡುಪಿ: ರಾಮಜನ್ಮಭೂಮಿ ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣವಾಗುತ್ತಿರುವ ಹಿನ್ನೆಲೆಯಲ್ಲಿ ರಾಮಮಂದಿರಕ್ಕೆ ಕರ್ನಾಟಕದಿಂದ ಸ್ವರ್ಣ ಶಿಖರ ಅರ್ಪಿಸುವುದಾಗಿ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಹೇಳಿದ್ದಾರೆ.

ರಾಮ ಮಂದಿರ ಟ್ರಸ್ಟ್ ಅಧ್ಯಕ್ಷ ಮಹಾಂತ ನೃತ್ಯಗೋಪಾಲ್ ದಾಸ್‌ಜೀ ಅಧ್ಯಕ್ಷತೆಯಲ್ಲಿ ಕಾರ್ಯದರ್ಶಿಗಳಾದ ಚಂಪತ್ ರಾಯ್ , ಕೋಶಾಕಾರಿ ಗೋವಿಂದಗಿರಿ ಸ್ವಾಮೀಜಿ, ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಮತ್ತಿತರರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ರಾಮಮಂದಿರದ ಪ್ರಧಾನ ಗರ್ಭಗುಡಿಯ ಶಿಖರಕ್ಕೆ ರಾಮಭಕ್ತ ಹನುಮನ ಪವಿತ್ರ ನೆಲವಾಗಿರುವ ಕರ್ನಾಟಕದಿಂದ ಸ್ವರ್ಣ ಶಿಖರವನ್ನು ಅರ್ಪಿಸಬೇಕು ಎಂಬುದು ಕರ್ನಾಟಕದ ಜನರ ಇಂಗಿತವಾಗಿದೆ. ಮಂದಿರದ ವಾಸ್ತು ವಿನ್ಯಾಸಕ್ಕೆ ಅನುಗುಣವಾಗಿ ಸ್ವರ್ಣ ಶಿಖರವನ್ನು ರಾಜ್ಯದ ಭಕ್ತರ ಸಹಕಾರದಿಂದ ನಿರ್ಮಿಸಿ, ವಿಶ್ವ ಹಿಂದು ಪರಿಷತ್ ನೇತೃತ್ವದಲ್ಲಿ ಕರ್ನಾಟಕದ ಹಂಪಿಯಿಂದ ಸ್ವರ್ಣ ಶಿಖರ ಯಾತ್ರೆಯನ್ನು ರಾಜ್ಯಾದ್ಯಂತ ಸಂಚರಿಸಲಾಗುತ್ತದೆ. ಇದಾದ ಬಳಿಕ ಅಯೋಧ್ಯೆಗೆ ತಲುಪಿಸುವ ಇಚ್ಛೆ ಇದೆ ಎಂದು ನಾಡಿನ ಜನರ ಪರವಾಗಿ ಶ್ರೀಗಳು ಸಭೆಗೆ ತಿಳಿಸಿದರು.

ಅದರ ಜೊತೆಗೆ ಮುಂದಿನ ವರ್ಷಾಂತ್ಯಕ್ಕೆ ನಡೆಯುವ ನೂತನ ಮಂದಿರ ಸಮರ್ಪಣೆ ಹಾಗೂ ಶ್ರೀರಾಮನ ಪ್ರತಿಷ್ಠಾ ಮಹೋತ್ಸವಕ್ಕೆ ದಿನಾಂಕ ನಿಗದಿ ಪಡಿಸಿದ ಬಳಿಕ ದೇಶದ ಭಕ್ತನ್ನು ಈ ಉತ್ಸವಕ್ಕೆ ಆಹ್ವಾನಿಸುವ ಸಲುವಾಗಿಯೂ ಒಂದು ಯಾತ್ರೆಯನ್ನು ಕೈಗೊಳ್ಳಬಹುದೆಂಬ ಅಭಿಪ್ರಾಯವನ್ನೂ ಶ್ರೀಗಳು ವ್ಯಕ್ತಪಡಿಸಿದರು. ಮಂದಿರದಲ್ಲಿ ನೀಲಿ ಮಿಶ್ರಿತ ಶ್ವೇತ ಶಿಲೆಯಲ್ಲಿ ಶಿಲ್ಪಶಾಸ್ತ್ರೋಕ್ತ ರೀತಿಯಲ್ಲಿ ಶ್ರೀರಾಮನ ವಿಗ್ರಹ ನಿರ್ಮಿಸಿ ಪ್ರತಿಷ್ಠಾಪಿಸಲಾಗುವುದು ಎಂದು ಟ್ರಸ್ಟ್ ಸಭೆಯಲ್ಲಿ ನಿರ್ಣಯಿಸಲಾಯಿತು. ಹಾಗೆಯೇ ಮಂದಿರಕ್ಕಾಗಿ ಮಹಾರಾಷ್ಟ್ರದಿಂದ ಸಾಗುವನಿ ಮರವನ್ನು ತರಿಸಿಕೊಳ್ಳುವುದು ಹಾಗೂ ಅದರ ಖರ್ಚು–ವೆಚ್ಚದ ಕುರಿತು ಚರ್ಚಿಸಲಾಯಿತು.

ಅಪರಿಚಿತ ವ್ಯಕ್ತಿ ಸಾವು

ಮೈಸೂರು, ಸೆ.12– ಅನಾರೋಗ್ಯದಿಂದ ಬಳಲುತ್ತಿದ್ದ 55 ವರ್ಷದ ಅಪರಿಚಿತ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೇ ಕೆ.ಆರ್.ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಈ ಅಪರಿಚಿತ ವ್ಯಕ್ತಿ ಕೆ.ಆರ್.ಆಸ್ಪತ್ರೆಗೆ ದಾಖಲಿಸುವ ಮುನ್ನ ಮೈಸೂರು ತಿಲಕ್‌ನಗರದ ಫಾರೂಖಿಯ ಡೆಂಟಲ್ ಕಾಲೇಜು ಬಳಿ ಸುಸ್ತಾಗಿ ಫುಟ್ ಪಾತ್‌ನಲ್ಲಿ ಕುಸಿದು ಬಿದ್ದಿದ್ದರು. ಇದನ್ನು ಗಮನಿಸಿದ ಸಾರ್ವಜನಿಕರು, 108 ಆಂಬುಲೆನ್ಸ್‌ಗೆ ಕರೆ ಮಾಡಿ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ಮೃತಪಟ್ಟಿದ್ದಾರೆ. ಇವರ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಶವಾಗಾರದಲ್ಲಿಡಲಾಗಿದೆ. ವಾರಸುದಾರರು ಯಾರಾದರೂ ಇದ್ದಲ್ಲಿ ದೂ.ಸಂ: 0821–2418339/313/513/184ಗೆ ಸಂಪರ್ಕಿಸಬಹುದು ಎಂದು ಮಂಡಿ ಠಾಣೆ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಪ್ರತಿಷ್ಠಿತ ಕಾಸ್ಮೋಪಾಲಿಟನ್ ಕ್ಲಬ್‌ನ ಮೊದಲ ಮಹಿಳಾ ನಿರ್ದೇಶಕರಾಗಿ ಆಯ್ಕೆಯಾದ ಉಮಾ ಅನಿಲ್ ಅವರನ್ನು ಕ್ಲಬ್‌ನ ಹಂಗಾಮಿ ಅಧ್ಯಕ್ಷ ಸಿ.ನಾರಾಯಣಗೌಡ ಸನ್ಮಾನಿಸಿ, ಅಭಿನಂದಿಸಿದರು. ಕ್ಲಬ್‌ನ ಚುನಾವಣಾ ಅಧಿಕಾರಿ ಕೆ.ಎನ್.ಸುರೇಶ್ ಕುಮಾರ್ ಉಪಸ್ಥಿತರಿದ್ದರು.

ಬ್ರಿಟನ್ ರಾಣಿ ಎಲಿಜಬೆತ್‌ರಿಗೆ ಶೋಕಾಚರಣೆ: ಅರಮನೆ ದೀಪಾಲಂಕಾರ ಸ್ಥಗಿತ ಪ್ರವಾಸಿಗರ ಬೇಸರ

ಮೈಸೂರು, ಸೆ.12– ಬ್ರಿಟನ್ ರಾಣಿ ಎಲಿಜಬೆತ್ II ಅವರ ನಿಧನದ ಹಿನ್ನೆಲೆಯಲ್ಲಿ ಭಾರತದಲ್ಲಿ ನಿನ್ನೆ(ಸೆ.11) ಶೋಕಾಚರಣೆ ಆಚರಿಸಿದ ಕಾರಣ ಮೈಸೂರು ಅರಮನೆ ದೀಪಾಲಂಕಾರವನ್ನೂ ಸ್ಥಗಿತಗೊಳಿಸಲಾಗಿತ್ತು. ಇದರಿಂದ ಭಾನುವಾರ ಸಂಜೆ ವಿದ್ಯುತ್ ದೀಪಾಲಂಕಾರ ಕಣ್ತುಂಬಿಕೊಳ್ಳಲೆಂದು ರಾಜ್ಯದ ವಿವಿಧೆಡೆ ಹಾಗೂ ಹೊರರಾಜ್ಯಗಳಿಂದ ಆಗಮಿಸಿದ್ದ ಪ್ರವಾಸಿಗರಿಗೆ ತೀವ್ರ ನಿರಾಸೆ ಉಂಟಾಯಿತು. ಆದರೂ ಸರ್ಕಾರದ ಸೂಚನೆಯಂತೆ ಬ್ರಿಟನ್ ರಾಣಿ ನಿಧನಕ್ಕೆ ಗೌರವ ಸೂಚಕವಾಗಿ ದೀಪಾಲಂಕಾರ ಸ್ಥಗಿತಗೊಳಿಸಿದ್ದಕ್ಕೆ ಸಹಮತಿಸಿದರು.



ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಅಲುಮ್ನಿ ಆಡಿಟೋರಿಯಂನಲ್ಲಿ 'ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ' 2021–2022ನೇ ಸಾಲಿನ 116ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು. ಬ್ಯಾಂಕಿನ ಅಧ್ಯಕ್ಷ ಸಿ.ರೇವಣ್ಣ, ಉಪಾಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಆರ್.ರವಿಕುಮಾರ್(ರಾಜಕೀಯ), ಎಸ್.ಬಿ.ಎಂ.ಮಂಜು, ಹೆಚ್.ಹರೀಶ್ ಕುಮಾರ್, ಕೆ.ಉಮಾಶಂಕರ್, ಎಸ್.ಸೋಮಣ್ಣ, ಎಸ್.ಅರವಿಂದ, ಎ.ಮಂಚಪ್ಪ, ಎಂ.ರಾಮಕೃಷ್ಣ ಆರ್.ರವಿಕುಮಾರ್, ಪಿ.ರಾಜೇಶ್ವರಿ, ಪಿ.ಸವಿತಾ, ವೃತ್ತಿಪರ ನಿರ್ದೇಶಕರಾದ ಎಂ.ವೈ.ರಮೇಶ್ ಗೌಡ, ಸಿ.ಎಸ್.ರಾಮಕೃಷ್ಣಯ್ಯ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಹರ್ಷಿತ್ ಗೌಡ ಉಪಸ್ಥಿತರಿದ್ದರು.

ಕೀಳನಪುರ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ



ಮೈಸೂರು, ಸೆ.12–ತಾಲೂಕಿನ ಕೀಳನಪುರ ಕ್ಲಸ್ಟರ್‌ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಮಲ್ಲೇಶ್ವರಿ ಸೋಮವಾರ ಉದ್ಘಾಟಿಸಿದರು.

ನಂತರ ಮಾತನಾಡಿ, ಪಠ್ಯೇತರ ಚಟುವಟಿಕೆಗಳು ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ತೋರಲು ಉತ್ತಮ ವೇದಿಕೆಯಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರು,ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಲು ಮುಂದಾಗುವಂತೆ ಮನವಿ ಮಾಡಿದರು.

ಈ ವೇಳೆ ತಾಪಂ ಮಾಜಿ ಸದಸ್ಯ ಮಹದೇವಪ್ಪ ಮೇಗಳಾಪುರ ಪ್ರೌಢಶಾಲಾ ಮುಖ್ಯ ಶಿಕ್ಷಿ ಲಕ್ಷ್ಮಿ ಮತ್ತು ಮೈಸೂರು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷರ ಸಂಘದ ಜಿಲ್ಲಾ ಖಜಾಂಚಿ ಮಹಾದೇವ್, ಸಮೂಹ ಸಂಪನ್ಮೂಲ ವ್ಯಕ್ತಿ ಶಿಲ್ಪಾ, ಎಸ್‌ಡಿಎಂಸಿ ಅಧ್ಯಕ್ಷ ಮಲ್ಲು, ಮುಖ್ಯ ಶಿಕ್ಷಕ ವೇದರತ್ನ,ಶಾಮಲಾ ಜಲಜಾಕ್ಷಿ, ಕುಮುದಾ, ಸವಿತಾ, ಪದ್ಮ, ವಿಜಯ, ಕೃಷ್ಣಕುಮಾರ್ ರಂಗಸ್ವಾಮಿ, ಮಂಜುಳಾ ಹಾಗೂ ಶಿಕ್ಷಕ ವೃಂದ ಮಕ್ಕಳು ಪೋಷಕರು ಹಾಜರಿದ್ದರು.

ಹಿನಕಲ್‌ನಲ್ಲಿ ಕೆಂಪೇಗೌಡ ಜಯಂತಿ




ಮೈಸೂರು, ಸೆ.12(ಎಂಕೆ)– ಮೈಸೂರಿನ ಹಿನಕಲ್‌ನಲ್ಲಿ ಹಿನಕಲ್–ವಿಜಯನಗರ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ 513ನೇ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಈ ವೇಳೆ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಸಾಧನೆ ಪ್ರಪಂಚಕ್ಕೆ ತಿಳಿದಿದೆ. ಇಂದು ರಾಜ್ಯ ಸರ್ಕಾರ ಬೆಂಗಳೂರು ವಿಮಾನ ನಿಲ್ದಾಣದ ಬಳಿ 108 ಅಡಿ ಎತ್ತರದ ಕೆಂಪೇಗೌಡರ ಪ್ರತಿಮೆ ನಿರ್ಮಾಣ ಮಾಡುತ್ತಿರುವುದು ದಾಖಲೆಯಾಗಲಿದೆ ಎಂದರಲ್ಲದೆ ಕೆಂಪೇಗೌಡರ ಇತಿಹಾಸ ಕುರಿತು ತಿಳಿಸಿಕೊಟ್ಟರು.

ಇದಕ್ಕೂ ಮೊದಲು ಹಿನಕಲ್‌ನ ಪ್ರಮುಖ ರಸ್ತೆಗಳಲ್ಲಿ ನಾಡಪ್ರಭು ಕೆಂಪೇಗೌಡರ ರಥಯಾತ್ರೆ ನಡೆಸಲಾಯಿತು. ಮಾಜಿ ಶಾಸಕ ವಾಸು, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ಹಿನಕಲ್–ವಿಜಯನಗರ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ನಾಗರಾಜು, ನಗರಪಾಲಿಕೆ ಸದಸ್ಯರಾದ ಎಸ್.ಬಿ.ಎಂ.ಮಂಜು, ಪ್ರೇಮಾ ಶಂಕರೇಗೌಡ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ, ಜಿಲ್ಲಾಧ್ಯಕ್ಷ ಮರಿಸ್ವಾಮಿ, ನಮ್ಮೂರು–ನಮ್ಮೋರು ಸೇವಾ ಟ್ರಸ್ಟ್ ಅಧ್ಯಕ್ಷ ಸತೀಶ್‌ಗೌಡ, ಕರ್ನಾಟಕ ರಾಜ್ಯ ಒಕ್ಕಲಿಗರ ವೇದಿಕೆ ಕಾರ್ಯಾಧ್ಯಕ್ಷ ನಾಗೇಂದ್ರ, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಪ್ರಶಾಂತ್‌ಗೌಡ, ಜವರೇಗೌಡ, ಚೆನ್ನೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಮನುಷ್ಯ ಅಂತರ್ಮುಖಿಯಾದಾಗ ಅಂತರಂಗ ಪರಿಶುದ್ಧ: ಸುತ್ತೂರು ಶ್ರೀಗಳು



ಮೈಸೂರು, ಸೆ.12–ಸಂಗೀತ, ನೃತ್ಯ, ಚಿತ್ರಕಲೆ ಸೇರಿದಂತೆ ಇತರೆ ಕಲೆಗಳು ತಮಗೆ ಅರಿವಿಲ್ಲದಂತೆಯೇ ಮನುಷ್ಯನನ್ನು ಆವರಿಸಿಕೊಳ್ಳುತ್ತವೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅಮೆರಿಕಾದ ನ್ಯೂ ಜೆರ್ಸಿಯಲ್ಲಿ ವೀರಶೈವ ಸಮಾಜದಿಂದ ಆಯೋಜಿಸಿದ್ದ ಸತ್ಸಂಗದಲ್ಲಿ ಭಾಗವಹಿಸಿ ಮಾತನಾಡಿದ ಶ್ರೀಗಳು, ಪ್ರತಿಯೊಬ್ಬರು ಅಂತರ್ಮುಖಿಗಳಾದಾಗ ಅಂತರಂಗ ಪರಿಶುದ್ಧಗೊಳ್ಳುತ್ತೇವೆ. ಅದರ ಜೊತೆಗೆ ವಿವಿಧ ಕಲೆಗಳ ಕಲಿಕೆಗೆ ಆಸಕ್ತಿ ತೋರಿದರೆ, ಆ ಕಲೆಗಳು ನಮಗರಿವಿಲ್ಲದೆಯೇ ಆವರಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಮನುಷ್ಯ ಸುಖವಾಗಿರಲೆಂದೇ ದುಡಿಮೆ ಮಾಡುತ್ತಾನೆ. ಅಂಥವರು ಎಲ್ಲರ ಸುಖವನ್ನೇ ಬಯಸುತ್ತಾರೆ. ಹಾಗಾಗಿ ಕಷ್ಟ–ಸುಖಗಳು ಎಲ್ಲರ ಜೀವನದಲ್ಲಿರುತ್ತದೆ. ಪ್ರತಿಯೊಬ್ಬರಿಗೂ ಬಹಿರಂಗದ ಸುಖಕ್ಕಿಂತ ಅಂತರಂಗದ ಸುಖ ಮುಖ್ಯ ಎಂದು ಕಿವಿಮಾತು ಹೇಳಿದರು.

ಈ ವೇಳೆ ವಿಎಸ್‌ಎನ್‌ಜೆ ಅಧ್ಯಕ್ಷ ಓಂಕಾರಮೂರ್ತಿ ಮುರುಂಡಿ, ಬೃಂದಾವನ ಕನ್ನಡ ಸಂಘದ ಅಧ್ಯಕ್ಷೆ ಪದ್ಮಿನಿ, ಹೆಚ್‌ಎಸ್‌ಬಿಬಿ ಉಪಾಧ್ಯಕ್ಷೆ ಡಾ. ಬಾಬು ಕಿಲಾರೆ ವೀರೇಗೌಡ ಕುಮಾರ ರಾಜಶೇಖರ್ ಹಾಗೂ ಸುಜಾತ್ ಸೂಲಕುಂಟೆ ಅನು ಕುರವತ್ತಿ ತ್ರಿಷಾ ಮತ್ತು ಜಿಯಾ ಹುಲಿಕೆರೆ, ಸೌಮ್ಯ ಜಗಳೂರು, ಶಿವಶಂಕರ್ ಸಾಣಿಕೊಪ್ಪ ಇದ್ದರು. ಬಿಯಾಂಕಾ ರಾಧಾಕೃಷ್ಣ ಭರತನಾಟ್ಯ ಪ್ರದರ್ಶಿಸಿದರು.

ಧಮ್ಮಿದ್ದರೆ ಸ್ವಚ್ಛ ಅಭಿವೃದ್ಧಿ ಪರ ಆಡಳಿತ ನೀಡಲಿ: ಸ್ವರಾಜ್ ಇಂಡಿಯಾ ಪಕ್ಷ ಸವಾಲು



ಮೈಸೂರು, ಸೆ.12(ಎಂಕೆ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ದಮ್ಮಿದ್ದರೆ ಸ್ವಚ್ಛ ಅಭಿವೃದ್ಧಿ ಪರ ಆಡಳಿತ ನೀಡಲಿ ಎಂದು ಸ್ವರಾಜ್ ಇಂಡಿಯಾ ಪಕ್ಷದ ಉಗ್ರನರಸಿಂಹೇಗೌಡ ಆಗ್ರಹಿಸಿದ್ದಾರೆ.

ಜನಸ್ಪಂದನ ಸಮಾವೇಶದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯರನ್ನು ಉದ್ದೇಶಿಸಿ ಮಾತನಾಡಿರುವ ಮುಖ್ಯಮಂತ್ರಿಗಳು, ಧಮ್ಮಿದ್ದರೆ ಕೇಸರಿ ದಿಗ್ವಿಜಯ ಯಾತ್ರೆ ತಡೆದು ತಾಕತ್ತು ತೋರಿಸಲು ಸವಾಲು ಹಾಕಿದ್ದಾರೆ. ಆದರೆ ಅವರ ಅದಕ್ಷ ಆಡಳಿತದಿಂದಾಗಿ ಮನೆ, ಆಸ್ತಿ–ಪಾಸ್ತಿ ಕಳೆದುಕೊಂಡಿರುವ ರೈತರು ಪರಿಹಾರಕ್ಕಾಗಿ ಪರಿತಪಿಸುವಂತಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಜನರ ಜೊತೆಗಿದ್ದು, ಪರಿಹಾರ ಕೊಡುವ ಬದಲು ಪಕ್ಷದ ಬಲ ಪ್ರದರ್ಶಿಸುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ಕಿಡಿಕಾರಿದ್ದಾರೆ.

ಬಿಜೆಪಿ ಸರ್ಕಾರದ ನಡವಳಿಕೆ ಅನಾಗರಿಕತೆಯಿಂದ ಕೂಡಿದ್ದು, ತಮ್ಮ ದುರಹಂಕಾರದ ಮಾತುಗಳಿಗೆ ತಡೆಯೊಡ್ಡುವ ಪ್ರಬಲ ಅಸ್ತ್ರ ಮತದಾರರ ಕೈಯಲ್ಲಿದೆ ಎಂಬುದನ್ನು ಮರೆತಂತಿದೆ. ವಿರೋಧ ಪಕ್ಷದ ನಾಯಕರನ್ನು ಮತ್ತೆ ಮುಖ್ಯ ಮಂತ್ರಿಯಾಗಲು ಬಿಡುವುದಿಲ್ಲ ಎಂಬ ಮಾತು, ತಾವು ಯಾವುದೇ ಪ್ರಜಾಪ್ರಭುತ್ವ ವಿರೋಧಿ ಮಾರ್ಗವನ್ನು ಬಳಸಲು ಹೇಸುವುದಿಲ್ಲ ಎಂಬ ಅರ್ಥವನ್ನು ಧ್ವನಿಸುತ್ತದೆ ಎಂದಿದ್ದಾರೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು